

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಅಕ್ಟೋಬರ್ 19 ಭಾನುವಾರ 2025

ಸಂಪುಟ: 46 | ಸಂಚಿಕೆ: 182 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಬಡಗಲಪುರದ ರೈತ ಮಹದೇವೇಗೌಡನ ಮೇಲೆರಗಿದ್ದ ಹುಲಿ ಸೆರೆ

- ದಾಳಿ ನಡೆದಿದ್ದ ಸ್ಥಳದಲ್ಲಿನ ಪೊದೆಯಲ್ಲೇ ಅಡಗಿತ್ತು ವ್ಯಾಘ್ರ
- ಕ್ಯಾಪ್ಟನ್ ಅಭಿಮನ್ಯು ಮೇಲಿಂದ ಪಶುವೈದ್ಯ ಡಾ.ರಮೇಶ್ ಅರವಳಿಕೆ ಮದ್ದು ಪ್ರಯೋಗ
- ಸೆರೆ ಸಿಕ್ಕ 2–3 ವರ್ಷದ ಈ ಹೆಣ್ಣು ಹುಲಿ ಬನ್ನೇರುಘಟ್ಟಕ್ಕೆ ರವಾನೆ



ಬಡಗಲಪುರದ ಬಳಿ ರೈತನ ಮೇಲೆ ದಾಳಿ ನಡೆಸಿದ್ದ ಹುಲಿ ಈಗ ಸೆರೆ ಸಿಕ್ಕಿದೆ.

ಮೈಸೂರು, ಅ.18(ಎಂಟಿವೈ)–ಸೆರೆ ಕಾರ್ಯಾಚರಣೆ ವೇಳೆ ಎರಡು ದಿನಗಳ ಹಿಂದಷ್ಟೇ ನಂಜನಗೂಡು ತಾಲೂಕು ಬಡಗಲಪುರದ ರೈತ ಮಹದೇವೇಗೌಡರ ಮೇಲೆ ದಾಳಿ ನಡೆಸಿ ಮಾರಣಾಂತಿಕವಾಗಿ ಗಾಯಗೊಳಿಸಿದ್ದ ಹುಲಿಯನ್ನು ಸುರಕ್ಷಿತವಾಗಿ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ. ಸೆರೆ ಸಿಕ್ಕಿರುವ 2–3 ವರ್ಷದ ಈ ಹೆಣ್ಣು ಹುಲಿಯನ್ನು ಬನ್ನೇರುಘಟ್ಟ ಜೈವಿಕ ಉದ್ಯಾನವನದ ಪುನರ್ವಸತಿ ಕೇಂದ್ರಕ್ಕೆ ರವಾನಿಸಲು ನಿರ್ಧರಿಸಲಾಗಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಹೆಡಿಯಾಲ ಉಪವಿಭಾಗದ ನುಗು ವಲಯ ವ್ಯಾಪ್ತಿಯ ಕಾಡಂಚಿನ ಗ್ರಾಮ ಬಡಗಲಪುರದ ಬಳಿ ಕಳೆದ ವಾರದಿಂದ ಓಡಾಡುತ್ತಿದ್ದ ಹುಲಿ, ಗುರುವಾರ (ಅ.16) ಕೂಂಬಿಂಗ್ ಕಾರ್ಯಾಚರಣೆ ವೇಳೆ ಮಹದೇವೇಗೌಡ(43) ▶ 6ನೇ ಪುಟಕ್ಕೆ



ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ 422 ಪಿಜಿ ಸೀಟುಗಳ ಹೆಚ್ಚಳ

ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಸೀಟು ಹೆಚ್ಚಳ ಖಚಿತಪಡಿಸಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಆರ್.ಪಾಟೀಲ್



ಡಾ.ಶರಣ ಪ್ರಕಾಶ ಪಾಟೀಲ್



ಬೆಂಗಳೂರು, ಅ.18(ಕೆಎಂಶಿ)–ಕರ್ನಾಟಕದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 422 ಸ್ನಾತಕೋತ್ತರ ಸೀಟುಗಳ ಹೆಚ್ಚಳ ಮಾಡಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಸುದ್ದಿಗೋಷ್ಠಿಯಲ್ಲಿ ವಿಷಯ ತಿಳಿಸಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಆರ್.ಪಾಟೀಲ್, ಸರ್ಕಾರದ ಬಹುದಿನಗಳ ಬೇಡಿಕೆಗೆ ಭಾರತೀಯ ವೈದ್ಯಕೀಯ ಪರಿಷತ್ ಸ್ಪಂದಿಸಿದೆ ಎಂದರು. ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಪೀಡಿಯಾಟ್ರಿಕ್ಸ್, ಅನಸ್ತೇಸಿಯಾ, ಫೋರೆನ್ಸಿಕ್ ಮೆಡಿಸಿನ್, ▶ 6ನೇ ಪುಟಕ್ಕೆ

ಬದನವಾಳು ಕೆರೆಯಲ್ಲಿ ಈಜಲು ಹೋದ ಬಾಲಕರಿಬ್ಬರು ಸಾವು

ನಂಜನಗೂಡು: ತಾಲೂಕಿನ ಬದನವಾಳು ಕೆರೆಯಲ್ಲಿ ಈಜಲು ತೆರಳಿದ್ದ ಇಬ್ಬರು ಬಾಲಕರು ಮುಳುಗಿ ಸಾವನ್ನಪ್ಪಿದ್ದಾರೆ. ಬದನವಾಳು ಗ್ರಾಮದ ಮಹದೇವಸ್ವಾಮಿ ಅವರ ಪುತ್ರ 9 ವರ್ಷದ ವಿಶ್ವಾಸ್ (ಆರ್ಯ), ಮಹದೇವಸ್ವಾಮಿ ಉ.ಮಾದು ಅವರ ಪುತ್ರ 9 ವರ್ಷದ ಮೋಹಿತ್ (ಚಂದನ್) ಮೃತ ದುರ್ದೈವಿಗಳು. ಶಾಲೆಗೆ ರಜಾ ಇದ್ದ ಕಾರಣ ಸೈಕಲ್‌ನಲ್ಲಿ ಬದನವಾಳು ಕೆರೆಗೆ ಈಜಲು ತೆರಳಿದ್ದರು. ಬಳಿಕ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಕವಲಂದೆ ಪೊಲೀಸರು ಭೇಟಿ ನೀಡಿ ಶವವನ್ನು ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಿದರು. ಕವಲಂದೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರ್‌ಎಸ್‌ಎಸ್–ಸರ್ಕಾರ ಸಂಘರ್ಷ

ಸಂಘ–ಸಂಸ್ಥೆಗಳ ಕಾರ್ಯಕ್ರಮಕ್ಕೆ ಇನ್ನು ಅನುಮತಿ ಕಡ್ಡಾಯ: ಸರ್ಕಾರದ ಆದೇಶ



ಬೆಂಗಳೂರು,ಅ.18–ಇತ್ತೀಚೆಗೆ ಕರ್ನಾಟಕ ರಾಜ್ಯ ಸಚಿವ ಸಂಪುಟವು ಸರ್ಕಾರಿ ಸ್ವಾಮ್ಯ ಹಾಗೂ ಸಾರ್ವಜನಿಕ ಸ್ಥಳ, ಮೈದಾನಗಳಲ್ಲಿ ತಮ್ಮ ಸಭೆ, ಸಮಾರಂಭ, ಉತ್ಸವಗಳು ಹಾಗೂ ಯಾವುದೇ ಚಟುವಟಿಕೆಗಳನ್ನು ನಡೆಸುವುದಕ್ಕೆ ಸ್ಥಳೀಯಾಡಳಿತದ ಅನುಮತಿ ಪಡೆಯುವುದನ್ನು ಕಡ್ಡಾಯಗೊಳಿಸುವ ಪ್ರಸ್ತಾವನೆಗೆ ಒಪ್ಪಿಗೆ ನೀಡಿತ್ತು.

ಅದಕ್ಕೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರ ಅ.18ರಂದು ಹೊಸ ಆದೇಶ ಹೊರಡಿಸಿದ್ದು, ಯಾವುದೇ ಸರ್ಕಾರಿ ಸ್ವಾಮ್ಯದ ಜಾಗಗಳಲ್ಲಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ತಮ್ಮ ಸಂಸ್ಥೆಯ ಕಾರ್ಯಕ್ರಮಗಳನ್ನು ನಡೆಸಬೇಕಾದರೆ ಆ ಕಾರ್ಯಕ್ರಮವು ನಡೆಸಲು ಬಯಸುವ ಸ್ಥಳಕ್ಕೆ ಅನುಗುಣವಾಗಿ ಯಾವ ಇಲಾಖೆಯ ಅನುಮತಿ ಪಡೆಯಬೇಕು ಎಂಬುದರ ಬಗ್ಗೆ ಸ್ಪಷ್ಟವಾದ ಸೂಚನೆಯನ್ನು ಆದೇಶದಲ್ಲಿ ಉಲ್ಲೇಖಿಸಿದೆ. ಯಾವ ಸ್ಥಳ, ಯಾವ ಪ್ರದೇಶಗಳಲ್ಲಿ ಕಾರ್ಯಕ್ರಮ ನಡೆಸಲು ಯಾವ ಅನುಮತಿ ಪಡೆಯಬೇಕು ಎಂಬುದನ್ನು ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಸರ್ಕಾರದ/ಸರ್ಕಾರಿ ಸಾಮ್ಯದ ಶಾಲಾ–ಕಾಲೇಜುಗಳು, ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಆವರಣಗಳಲ್ಲಿ ಕಾರ್ಯಕ್ರಮ ನಡೆಸಲು ಉನ್ನತ ಶಿಕ್ಷಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಅನುಮತಿ ಪಡೆಯಬೇಕು. ಸಾರ್ವಜನಿಕ ಉದ್ಯಾನವನಗಳು, ಆಟದ ಮೈದಾನಗಳು, ಇತರೆ ತೆರೆದ ಸ್ಥಳಗಳಲ್ಲಿ ಕಾರ್ಯಕ್ರಮ ನಡೆಸಲು ನಗರಾಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ಅನುಮತಿ ಪಡೆಯಬೇಕು.

ಸಾರ್ವಜನಿಕ ರಸ್ತೆಗಳು, ಸರ್ಕಾರದ ಇತರೆ ಆಸ್ತಿ/ ಸ್ಥಳಗಳಲ್ಲಿ ಕಾರ್ಯಕ್ರಮ ನಡೆಸಲು ಜಿಲ್ಲಾಧಿಕಾರಿಗಳು, ಪೊಲೀಸ್ ಆಯುಕ್ತರು/ಪೊಲೀಸ್ ಅಧೀಕ್ಷಕರಿಂದ ಅನುಮತಿ ಪಡೆಯಬೇಕು. ಸಾರ್ವಜನಿಕ ಸ್ಥಳಗಳಲ್ಲಿ ನಡೆಸಲಾಗುವ ಖಾಸಗಿ ಸಂಘ, ಸಂಸ್ಥೆಗಳು, ಸಂಘಟನೆಗಳ ಚಟುವಟಿಕೆಗಳಿಗೆ ▶ 6ನೇ ಪುಟಕ್ಕೆ

ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಅಳವಡಿಸಿದ್ದ ಫ್ಲೆಕ್ಸ್, ಬ್ಯಾನರ್, ಭಗವಾಧ್ವಜ ತೆರವು




ಕಲಬುರಗಿ,ಅ.18–ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಅಳವಡಿಸಿದ್ದ ಬ್ಯಾನರ್‌ಗಳು ಮತ್ತು ಭಗವಾಧ್ವಜಗಳನ್ನು ತೆಗೆದುಹಾಕಲಾಗಿದ್ದು, ಈ ಸಂಬಂಧ ರಾಜ್ಯ ಬಿಜೆಪಿ ಶನಿವಾರ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡಿದೆ. ಆದರೆ ಆರ್‌ಎಸ್‌ಎಸ್ ಸಂಘಟನೆಯು, ಈ ಕಾರ್ಯಕ್ರಮಕ್ಕೆ ಅನುಮತಿ ಪಡೆದಿಲ್ಲ ಎಂದು ಕಾಂಗ್ರೆಸ್ ಮುಖಂಡರು ಹೇಳಿದ್ದಾರೆ. ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಸಾರ್ವಜನಿಕ ಸ್ಥಳಗಳು ಮತ್ತು ಸರ್ಕಾರಿ ಸ್ಥಳಗಳಲ್ಲಿ ಯಾವುದೇ ಕಾರ್ಯಕ್ರಮ ನಡೆಸಲು ಅನುಮತಿ ▶ 6ನೇ ಪುಟಕ್ಕೆ









ಮೈಸೂರು ಮಿತ್ರ

ಲಾರಿ ಡಿಕ್ಕಿ: ಬೈಕ್ ಸವಾರ ಸಾವು



ಮೃತಪಟ್ಟ ಕಿರಣ್

ಮೈಸೂರು, ಅ. 18 (ಆರ್‌ಕೆ)– ಲಾರಿಯೊಂದು ದ್ವಿ–ಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಯುವಕ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಮೈಸೂರಿನ ಕಿವುಡ ಮತ್ತು ಮೂಕರ ಶಾಲೆಯ ಸರ್ಕಲ್ ಬಳಿ ಬಂಬೂ ಬಜಾರ್‌ನಲ್ಲಿ ಶನಿವಾರ ಮಧ್ಯಾಹ್ನ ಸಂಭವಿಸಿದೆ.

ಮೂಲತಃ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲದವನಾದ ಮೈಸೂರಿನ ಬಂಬೂ ಬಜಾರ್ ನಿವಾಸಿ ಕಿರಣ್ (22) ಸಾವನ್ನಪ್ಪಿದ ದುರ್ದೈವಿ. ತಿಲಕ್‌ನಗರ ಕಡೆಯಿಂದ ಬಂದ ಬೈಕ್‌ಗೆ ಹೈವೇ ಸರ್ಕಲ್ ಕಡೆಯಿಂದ ಅಕ್ಕಿಮೂಟೆ ತುಂಬಿಕೊಂಡು ಹೋಗುತ್ತಿದ್ದ ಲಾರಿ (ಕೆಎ–09, ಎಬಿ–3650) 12.15 ಗಂಟೆಯಲ್ಲಿ ಕಿವುಡ ಮತ್ತು ಮೂಕರ ಶಾಲೆಯ ಸರ್ಕಲ್ ಬಳಿ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರವಾಗಿ ಗಾಯಗೊಂಡ ಯುವಕ ಅಸುನೀಗಿದನು.



ವಿಷಯ ತಿಳಿಯುತ್ತಿದ್ದಂತೆಯೇ ಎನ್.ಆರ್.ಸಂಚಾರ ಠಾಣೆ ಸಬ್‌ಇನ್ಸ್‌ಪೆಕ್ಟರ್ ಸಿದ್ದೇಶ್ ಮತ್ತು ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಮಹಜರು ನಡೆಸಿದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು–ಸಂಶೋಧನಾ ಸಂಸ್ಥೆಯ ಶವಾಗಾರಕ್ಕೆ ಸಾಗಿಸಿ, ಲಾರಿ ಮತ್ತು ದ್ವಿ–ಚಕ್ರ ವಾಹನವನ್ನು ವಶಕ್ಕೆ ಪಡೆದಿದ್ದಾರೆ.

ಲಾಭದ ಆಸೆ ತೋರಿ ಮೈಸೂರು ವ್ಯಕ್ತಿಗೆ 17.63 ಲಕ್ಷ ರೂ. ವಂಚನೆ

ಮೈಸೂರು, ಅ.18– ಫೇಸ್‌ಬುಕ್ ಮೂಲಕ ಪರಿಚಯ ಮಾಡಿಕೊಂಡು ಟ್ರೇಡಿಂಗ್ ನೆಪದಲ್ಲಿ ಮೈಸೂರಿನ ವ್ಯಕ್ತಿಗೆ ಲಕ್ಷಾಂತರ ರೂ. ವಂಚಿಸಿರುವ ಬಗ್ಗೆ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಗರದ ಎನ್.ಆರ್. ಮೊಹಲ್ಲಾದ ಯುವಕನೊಬ್ಬ ಸೈಬರ್ ವಂಚಕರ ಬಲೆಗೆ ಬಿದ್ದು, 17,63,520 ರೂ. ಕಳೆದುಕೊಂಡಿದ್ದಾರೆ.

ನಾಲ್ಕು ತಿಂಗಳ ಹಿಂದೆ ಫೇಸ್‌ಬುಕ್‌ನಲ್ಲಿ ಪರಿಚಯವಾದ ವ್ಯಕ್ತಿ, ಟ್ರೇಡಿಂಗ್ ಮಾಡಲು ಒತ್ತಾಯಿಸಿದ್ದ. 2 ತಿಂಗಳ ನಿರಂತರ ಒತ್ತಾಯಕ್ಕೆ ಮಣಿದ ಯುವಕ, ಆತ ಕಳು ಹಿಸಿದ್ದ ಲಿಂಕ್ ಕ್ಲಿಕ್ ಮಾಡಿಯಡವಟ್ಟು ಮಾಡಿಕೊಂಡ. ಲಿಂಕ್ ಮೂಲಕ ಡೌನ್‌ಲೋಡ್ ಮಾಡಿಕೊಂಡ ಆಪ್‌ನಲ್ಲಿ ತನ್ನ ಪಾನ್‌ಕಾರ್ಡ್, ಆಧಾರ್ ಕಾರ್ಡ್ ಸಂಖ್ಯೆ ಇನ್ನಿತರ ವೈಯಕ್ತಿಕ ಮಾಹಿತಿ ನಮೂದಿಸಿ, ಯೂಸರ್ ಐಡಿ, ಪಾಸ್‌ವರ್ಡ್ ಕ್ರಿಯೇಟ್ ಮಾಡಿಕೊಂಡ. ನಂತರ ಹಂತ ಹಂತವಾಗಿ 17 ಲಕ್ಷಕ್ಕೂ ಹೆಚ್ಚು ಹಣ ಹೂಡಿಕೆ ಮಾಡಿದ. ಆ ವೇಳೆ ಆ್ಯಪ್‌ನಲ್ಲಿ ಹೆಚ್ಚು ರಿಟರ್ನ್ಸ್ ತೋರಿಸಿದ್ದರಿಂದ ಖುಷಿಯಿಂದ ಹಣ ಹೂಡಿಕೆ ಮುಂದುವರಿಸಿದ. ಬಳಿಕ ಆ ಹಣವನ್ನು ವಿತ್‌ಡ್ರಾ ಮಾಡಲು ಸಾಧ್ಯವಾಗದಿದ್ದಾಗ ಮೋಸ ಹೋಗಿರುವುದು ಮನವರಿಕೆಯಾಗಿ, ಪೊಲೀಸರ ಮೊರೆ ಹೋಗಿದ್ದಾನೆ.

ಕಾರಿನ ಬಾಗಿಲ ಗಾಜು ಒಡೆದು ಲ್ಯಾಪ್‌ಟಾಪ್, ಬ್ಯಾಗ್ ಕಳವು

ಮೈಸೂರು,ಅ.18–ಕಾರಿನ ಬಾಗಿಲು ಗಾಜು ಒಡೆದು ಲ್ಯಾಪ್‌ಟಾಪ್ ಹಾಗೂ ದಾಖಲಾತಿಗಳಿದ್ದ ಬ್ಯಾಗ್ ಕಳ್ಳತನ ಮಾಡಿರುವ ಘಟನೆ ಮೈಸೂರಿನ ಸಯ್ಯಾಜಿ ರಾವ್ ರಸ್ತೆಯಲ್ಲಿ ನಡೆದಿದೆ. ಈ ಸಂಬಂಧ ಬೆಂಗಳೂರಿನ ಚಿಕ್ಕಪೇಟೆಯಲ್ಲಿ ಲಿಶಾ ಸ್ಟಿಚ್ಚಸ್ ಕಂಪನಿಯಲ್ಲಿ ಏಜೆಂಟ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಜಯೇಶ್ ಮೆಹ್ತಾ ದೇವರಾಜ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಬುಧವಾರ ಸಂಜೆ 7ಕ್ಕೆ ತಮ್ಮ ಕಾರನ್ನು ಸಯ್ಯಾಜಿರಾವ್ ರಸ್ತೆ ಕಾವೇರಿ ಎಂಪೋರಿಯಂ ಎದುರು ಪಾರ್ಕ್ ಮಾಡಿ, ಮಾರ್ಕೆಟಿಂಗ್ ಮಾಡಲೆಂದು ಕೆ.ಟಿ.ಸ್ಟ್ರೀಟ್‌ಗೆ ಹೋಗಿದ್ದು, ರಾತ್ರಿ 10 ಗಂಟೆ ವೇಳೆಗೆ ವಾಪಸ್ ಬರುವಷ್ಟರಲ್ಲಿ ಕಾರಿನ ಎಡಭಾಗದ ಹಿಂದಿನ ಗಾಜು ಒಡೆದು ಲ್ಯಾಪ್‌ಟಾಪ್ ಹಾಗೂ ದಾಖಲಾತಿಗಳಿದ್ದ ಬ್ಯಾಗ್ ಅನ್ನು ಕದ್ದೊಯ್ದಿದ್ದರು ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಡಿಕೆಶಿ ಸಿಎಂ ಆಗಬೇಕು: ಕಾಂಗ್ರೆಸ್ ಮುಖಂಡನಿಂದ ಮೆಕ್ಕಾದಲ್ಲಿ ಪ್ರಾರ್ಥನೆ



ಬೆಂಗಳೂರು: ರಾಜ್ಯ ಸರ್ಕಾರದಲ್ಲಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬೇಕೆಂಬ ಕೂಗು, ಒತ್ತಾಯ ಅವರ ಅಭಿಮಾನಿಗಳಿಂದ ಕೇಳಿಬರುತ್ತಲೇ ಇದೆ. ನವೆಂಬರ್‌ನಲ್ಲಿ ಕ್ರಾಂತಿಯಾಗುತ್ತದೆ ಎಂದು ಈ ಹಿಂದೆ ಕಾಂಗ್ರೆಸ್ ನಾಯಕರೇ ಹೇಳಿಕೆ ನೀಡಿದ್ದರು. ಆದರೆ ಸ್ವತಃ ಸಿಎಂ ಸಿದ್ದರಾಮಯ್ಯನವರು ಅದನ್ನು ನಿರಾಕರಿಸಿದ್ದಾರೆ.

ಈ ಮಧ್ಯೆ ಡಿ.ಕೆ.ಶಿವಕುಮಾರ್ ಅಭಿಮಾನಿಯಾದ ಬೆಂಗಳೂರು ದಕ್ಷಿಣ ಜಿಲ್ಲೆ ಯುವ ಕಾಂಗ್ರೆಸ್ ಉಪಾಧ್ಯಕ್ಷ ರಿಜ್ವಾನ್ ಪಾಷಾ ಮೆಕ್ಕಾಕ್ಕೆ ಹೋದ ಸಂದರ್ಭದಲ್ಲಿ ಡಿ.ಕೆ.ಶಿವಕುಮಾರ್ ಸೋದರರ ಫೋಟೋವನ್ನು ಮೊಬೈಲ್‌ನಲ್ಲಿ ಹಿಡಿದುಕೊಂಡು ಪ್ರಾರ್ಥಿಸಿಕೊಂಡಿದ್ದಾರೆ.

ನಿಧನ



ಶಂಕರನಾರಾಯಣ

ಮೈಸೂರು, ಅ. 18–ಪಾಂಡವಪುರ ತಾಲೂಕು ಕಟ್ಟೇರಿ ನಿವಾಸಿ ಶಂಕರನಾರಾಯಣ (80) ಗುರುವಾರ ನಿಧನರಾದರು. ಮೃತರು ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಅಂದೇ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ.ಹಾದಿ ಜಾಫರ್ ಹುಸೇನ್



ಮೈಸೂರು ಮೆಡಿಕಲ್ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರು ಹಾಗೂ ಉದಯಗಿರಿ ನಿವಾಸಿ ಡಾ. ಹಾದಿ ಜಾಫರ್ ಹುಸೇನ್ (82) ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಶವ ಸಂಸ್ಕಾರ ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಟಿಪ್ಪು ಸ್ಮಶಾನದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಆರ್.ಲೋಕೇಶ್

ಮೈಸೂರಿನ ಶ್ರೀರಾಂಪುರದ ಮಧುವನ ಬಡಾವಣೆಯ 6ನೇ ಕ್ರಾಸ್ ನಿವಾಸಿ ಆರ್.ಲೋಕೇಶ್ (47) ಹೃದಯಾಘಾತದಿಂದ ಶುಕ್ರವಾರ ನಿಧನರಾದರು. ಮೃತರು ಪತ್ನಿ ಪಿ.ಎಸ್. ಶಿಲ್ಪಾ, ಪುತ್ರ ಎಲ್.ಅದ್ವಿಕ್ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕುವೆಂಪುನಗರದ ಕೆ.ಜಿ. ಕೊಪ್ಪಲು ರುದ್ರಭೂಮಿಯಲ್ಲಿ ಶನಿವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಲೋಕೇಶ್ ಅವರು ಕ್ರಿಕೆಟ್ ಕೋಚ್ ಮತ್ತು ಕೆಎಸ್‌ಸಿಎ ಕ್ರಿಕೆಟ್ ಸಂಸ್ಥೆಯಿಂದ ಅರ್ಹತೆ ಪಡೆದ ಅಂಪೈರ್ ಆಗಿದ್ದರು. ರಣಜಿ ಕ್ರಿಕೆಟ್ ಪಂದ್ಯಾವಳಿ ಮತ್ತು ಇತರೆ ಕ್ರಿಕೆಟ್ ಪಂದ್ಯಾವಳಿಗಳ ಸಂದರ್ಭದಲ್ಲಿ ಭೇಟಿ ನೀಡುವ ಹಲವು ಕ್ರಿಕೆಟ್ ತಂಡಗಳಿಗೆ ಸ್ಥಳೀಯ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿದ್ದರು. ಕೆಎಸ್‌ಸಿಎ ಮೈಸೂರು ವಲಯ ಮತ್ತು ಅಂಪೈರ್‌ಗಳು ಸಂತಾಪ ವ್ಯಕ್ತಪಡಿಸಿದ್ದಾರೆ.

ಅಲ್‌ಹಾಜ್ ಮೊಹಮ್ಮದ್ ನಜೀರ್



ಮೈಸೂರಿನ ನೂರ್ ಆಲಿ ಷಾ ಸಮೀಪವಿರುವ ಜನತಾ ಸೈಕಲ್ ಮಾರ್ಟ್‌ನ ಮಾಲೀಕರು ಹಾಗೂ ಬನ್ನಿಮಂಟಪ ಎ ಬಡಾವಣೆ ನಿವಾಸಿ ಅಲ್‌ಹಾಜ್ ಮೊಹಮ್ಮದ್ ನಜೀರ್ (82) ಶುಕ್ರವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ಬೆಂಗಳೂರು–ಮೈಸೂರು ರಸ್ತೆಯಲ್ಲಿರುವ ಸ್ಮಶಾನದಲ್ಲಿ ಶನಿವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಸುಧೀಂದ್ರ

ನಂಜನಗೂಡು ತಾಲೂಕು ಚಾಮಲಾಪುರ ಬೀದಿ ಮಿಲಿಟರಿ ಹೋಟೆಲ್ ಕುಳ್ಳಪ್ಪ ಅವರ ಪುತ್ರ ಸುಧೀಂದ್ರ (62) ಹೃದಯಾಘಾತದಿಂದ ಶುಕ್ರವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಲಿಂಗಭಟ್ಟರ ಗುಡಿ ಸಮೀಪದ ರುದ್ರಭೂಮಿಯಲ್ಲಿ ಶುಕ್ರವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಚಿವ ಪ್ರಿಯಾಂಕ್ ಖರ್ಗೆಗೆ ತೇಜೋವಧೆ ಆರೋಪ

ಮೈಸೂರಲ್ಲಿ ದಸಂಸದಿಂದ ಪ್ರತಿಭಟನೆ

ಮೈಸೂರು, ಅ.18(ಜಿಎ)–ಸಚಿವ ಪ್ರಿಯಾಂಕ್ ಖರ್ಗೆ ಆರ್‌ಎಸ್‌ಎಸ್ ಕುರಿತು ಪತ್ರ ಬರೆದಿದ್ದನ್ನು ನೆಪ ಮಾಡಿಕೊಂಡು ಅವರ ತೇಜೋವಧೆ ಮಾಡಿ, ಅವಹೇಳನಕಾರಿಯಾಗಿ ನಿಂದಿಸುತ್ತಿರುವುದನ್ನು ಖಂಡಿಸಿ, ದಲಿತ ಸಂಘರ್ಷ ಸಮಿತಿ ವತಿಯಿಂದ ಪುರಭವನದ ಬಳಿ ಇರುವ ಅಂಬೇಡ್ಕರ್ ಪ್ರತಿಮೆ ಮುಂಭಾಗ ಪ್ರತಿಭಟನೆ ನಡೆಸಲಾಯಿತು.



ಸಚಿವ ಪ್ರಿಯಾಂಕ್ ಖರ್ಗೆಗೆ ತೇಜೋವಧೆ, ಅವಹೇಳನಕಾರಿ ಹೇಳಿಕೆ ಖಂಡಿಸಿ, ದಲಿತ ಸಂಘರ್ಷ ಸಮಿತಿ ವತಿಯಿಂದ ಪುರಭವನದ ಬಳಿ ಇರುವ ಅಂಬೇಡ್ಕರ್ ಪ್ರತಿಮೆ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಆರ್‌ಎಸ್‌ಎಸ್ ಆರಂಭವಾದ ದಿನದಿಂದಲೂ ತಾರತಮ್ಯದ ಚಾತುರ್ವರ್ಣ ವ್ಯವಸ್ಥೆಯನ್ನು ಮರುಸ್ಥಾಪನೆಗಾಗಿ ದೇಶದ ಸಂವಿಧಾನದ ಸಮಾನತೆಯ ಆಶಯಗಳನ್ನು ವಿರೋಧಿಸುತ್ತಾ ಬಂದಿದೆ. ದೇವರು, ಜಾತಿ, ಧರ್ಮ, ಜಾತಿ ಹೆಸರಿನಲ್ಲಿ ಸುಳ್ಳು ಗೋಪುರ ಕಟ್ಟುತ್ತಾ ತನ್ನ ಕ್ರಿಮಿನಲ್ ಚಟುವಟಿಕೆಗಳನ್ನು ಕಾನೂನು ಬದ್ಧಗೊಳಿಸಲು ಹಿಂದೂ, ಮುಸ್ಲಿಂ, ಕ್ರೈಸ್ತ ದಲಿತ ಎಂದು ವಿಭಜಿಸಿ ಸಾಮೂಹಿಕ ಹಿಂಸಾಚಾರಕ್ಕೆ ಪ್ರಚೋದನೆ ನೀಡುತ್ತಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಆರ್‌ಎಸ್‌ಎಸ್ ತನ್ನ 100 ವರ್ಷಗಳ ಸಂಭ್ರಮಾಚರಣೆ ನೆಪದಲ್ಲಿ ಮಾರಾಕಾಸ್ತ್ರಗಳನ್ನು ಸಾರ್ವಜನಿಕವಾಗಿ ಪ್ರದರ್ಶನ ಮಾಡುತ್ತಾ ಸಾಮೂಹಿಕ ಹಿಂಸೆಗೆ ಮತ್ತು ಗುಂಪು ಹತ್ಯೆಗೆ ಪ್ರಚೋದನೆ ನೀಡಿ ಸಮಾಜದ ಶಾಂತಿ ಕದಡಲು ಮುಂದಾಗಿರುವ ಆರ್‌ಎಸ್‌ಎಸ್ ಸಂಘ ಪರಿವಾರದ ಕ್ರಿಮಿನಲ್ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಸರ್ಕಾರವು ಸಂಘಟನೆಯನ್ನು ನಿಷೇಧಿಸಬೇಕು ಎಂದು ಆಗ್ರಹಿಸಿದ್ದರು.

ಸಾಮಾಜಿಕ ಜಾಲತಾಣ, ಸಭೆ, ಸಮಾರಂಭ, ಮಾಧ್ಯಮಗಳಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಅವಹೇಳನ ಮಾಡುತ್ತಾ ದ್ವೇಷ ಭಾಷಣಗಳ ಮೂಲಕ, ಸಾರ್ವಜನಿಕ ನೆಮ್ಮದಿಗೆ ಭಂಗ ತಂದು ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವ ಆರ್‌ಎಸ್‌ಎಸ್ ಸಂಘ ಪರಿವಾರ ಕಾರ್ಯಕರ್ತರನ್ನು ಬಂಧಿಸಿ ಗಡಿಪಾರು ಮಾಡಬೇಕು. ದಲಿತ ಸಮುದಾಯದ ಸಚಿವರನ್ನು ಅವಮಾನಿಸಿರುವ ಕಿಡಿಗೇಡಿಗಳನ್ನು ದಲಿತರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಬಂಧಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಚೋರನಹಳ್ಳಿ ಶಿವಣ್ಣ, ಕೆ.ವಿ.ದೇವೇಂದ್ರ, ಸತೀಶ್, ಶಂಬುಲಿಂಗ ಸ್ವಾಮಿ, ಹಾರೋಹಳ್ಳಿ ಸುರೇಶ್, ಶಿವಮೂರ್ತಿ, ಬಂಡಿಪಾಳ್ಯ ವಿಜಯಕುಮಾರ್, ಎಸ್‌ಡಿಪಿಐ ಜಿಲ್ಲಾಧ್ಯಕ್ಷ ರಫತ್ ಖಾನ್, ಸಬೀರ್, ರಫೀ, ನಯೀಮ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಬ್ರೈನ್ ಬೈಟ್ಸ್ ರಸಪ್ರಶ್ನೆ ಸ್ಪರ್ಧೆ

ಮೈಸೂರು,ಅ.18–ಅಮೃತ ವಿಶ್ವವಿದ್ಯಾಪೀಠಂ, ಮೈಸೂರು ಕ್ಯಾಂಪಸ್, ಪದವಿ ಪೂರ್ವ ಕಾಲೇಜಿನ (ಸಿಬಿಎಸ್‌ಸಿ ಒಳಗೊಂಡಂತೆ) ವಿದ್ಯಾರ್ಥಿಗಳಿಗೆ ಅ. 29ರಂದು ಬ್ರೈನ್ ಬೈಟ್ಸ್–2025 ಅಂತರ ಕಾಲೇಜು ರಸಪ್ರಶ್ನೆ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಕಲಿಕೆಯ ಒತ್ತಡ ಮತ್ತು ಏಕತಾನತೆಯ ನಡುವೆ ಒಂದು ಮಾಹಿತಿಯುಕ್ತ ವೇದಿಕೆ ಕಲ್ಪಿಸಿ ಉತ್ತೇಜನ ನೀಡುವ ಉದ್ದೇಶದಿಂದ ಈ ರಸಪ್ರಶ್ನೆ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ. ರಸಪ್ರಶ್ನೆ ಸಾಮಾನ್ಯ ಜ್ಞಾನ ಆಧಾರಿತವಾಗಿದ್ದು, ವಿಜ್ಞಾನ, ವಾಣಿಜ್ಯ ಮತ್ತು ಕಲಾ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಬಹುದು.

ಈ ರಸಪ್ರಶ್ನೆ ಸ್ಪರ್ಧೆಯು ಕಂಟ್ರೋಲ್ ಆಂಡ್ ವಿನ್, ರಿಡಲ್ಸ್, ಕನೆಕ್ಟ್ ದ ಡಾಟ್ಸ್, ಬಜರ್ ಮತ್ತು ರ್‍ಯಾಪಿಡ್–ಫೈಯರ್ ಎಂಬ 5 ಸುತ್ತುಗಳನ್ನು ಒಳಗೊಂಡಿರುತ್ತದೆ. ಅಂತಿಮ ಸುತ್ತಿಗೆ ಅರ್ಹರಾಗುವ ತಂಡಗಳಿಗೆ ಆಕರ್ಷಕ ನಗದು ಬಹುಮಾನ ಹಾಗೂ ಸ್ಮರಣಿಕೆ ನೀಡಲಾಗುವುದು. ಮೈಸೂರು ಹಾಗೂ ಸುತ್ತಮುತ್ತಲಿನ ಜಿಲ್ಲೆಗಳ ವಿವಿಧ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸುವ ನಿರೀಕ್ಷೆ ಇದೆ. ಸ್ಪರ್ಧೆಗೆ ನೋಂದಣಿ ಉಚಿತವಾಗಿದ್ದು, ಆಸಕ್ತರು ಸುನಿಲ್ ಲಕ್ಷ್ಮಣ್‌ಗೆ 8792911234ಕ್ಕೆ ಕರೆ ಮಾಡಿ ಸ್ಪರ್ಧೆಗೆ ಹೆಸರು ನೋಂದಾಯಿಸಬಹುದು.

ಸಚಿವ ಪ್ರಿಯಾಂಕ್ ಖರ್ಗೆಗೆ ಬೆದರಿಕೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ ಖಂಡನೆ

ಮೈಸೂರು, ಅ.18(ಜಿಎ)–ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಜೀವ ಬೆದರಿಕೆ ಹಾಕುವ ಹೇಳಿಕೆ ನೀಡುತ್ತಿರುವುದು ಖಂಡನೀಯವಾಗಿದೆ ಎಂದ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಜಿಲ್ಲಾ ಸಮಿತಿಯ ವಿಭಾಗೀಯ ಸಂಚಾಲಕ ಬನ್ನಳ್ಳಿ ಸೋಮಣ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾರ್ವಜನಿಕ ಸ್ಥಳಗಳಲ್ಲಿ, ಸರ್ಕಾರಿ, ಅರೆ ಸರ್ಕಾರಿ ಕಚೇರಿಗಳ ವಲಯಗಳಲ್ಲಿ ಮತ್ತು ಸರ್ಕಾರಿ, ಅನುದಾನಿತ ಶಾಲಾ ಮೈದಾನಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆ ನಿಷೇಧಿಸುವಂತೆ ಸರ್ಕಾರಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಪತ್ರ ಬರೆದಿದ್ದಾರೆ. ಇದನ್ನು ತಮ್ಮ ಸಂಘಟನೆ ಬೆಂಬಲಿಸುತ್ತದೆ ಎಂದರು.

ಸಾಂಸ್ಕೃತಿಕ ಸಂಘಟನೆ ಎಂದು ಹೇಳಿಕೊಳ್ಳುವ ಆರ್‌ಎಸ್‌ಎಸ್ ಈ ದೇಶದ ಪ್ರಜಾಪ್ರಭುತ್ವ ಮತ್ತು ಸಾಂವಿಧಾನಿಕ ಮೌಲ್ಯಗಳಿಗೆ, ಸಾಂಸ್ಕೃತಿಕ ಪರಂಪರೆಗೆ ವಿರುದ್ಧವಾಗಿ ಕಾರ್ಯ ನಿರ್ವಹಿಸುತ್ತಿದೆ. ಕೋಮುವಾದ, ಜಾತಿವಾದ, ಅಸಮಾನತೆ ಮತ್ತು ಧಾರ್ಮಿಕ ದ್ವೇಷ ಪ್ರತಿಪಾದಿಸುತ್ತ ಚಾತುರ್ವರ್ಣದ ಮೇಲೆ ನಿಂತಿದೆ. ಇದರ ಸಂಸ್ಥಾಪಕರು ಮತ್ತು ಪ್ರತಿಪಾದಕರು ಸಂವಿಧಾನದ ಧರ್ಮ ನಿರಪೇಕ್ಷತೆಯ ಆಲೋಚನೆಗೆ ವಿರುದ್ಧವಾಗಿದ್ದಾರೆ. ಹೀಗಾಗಿ ಶಿಬಿರಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಹಿಂಸೆ, ದ್ವೇಷ ಮತ್ತು ಮತೀಯ ಭಾವನೆ ಪ್ರಚಾರಕ್ಕೆ ವೇದಿಕೆಯನ್ನಾಗಿಸಿಕೊಳ್ಳುತ್ತಿದೆ ಎಂದು ದೂರಿದರು.

ಈ ಎಲ್ಲಾ ಕಾರಣದಿಂದಾಗಿ ಪ್ರಿಯಾಂಕ್ ಖರ್ಗೆ ಅವರ ಆಗ್ರಹ ನ್ಯಾಯ ಸಮ್ಮತವಾಗಿದೆ. ಅವರಿಗೆ ಜೀವ ಬೆದರಿಕೆ ಹಾಕುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮಲ್ಲಹಳ್ಳಿ ನಾರಾಯಣ, ದೊಡ್ಡಸಿದ್ದು ಹಾದನೂರು, ವಾಟಾಳ್ ನಾಗರಾಜ್, ಬೊಮ್ಮೇನಹಳ್ಳಿ ಕುಮಾರ್, ಅನುಷಾ ಉಪಸ್ಥಿತರಿದ್ದರು.

ಅ.23 'ಹೊಸ್ಬು ಮಾಡ್ತಾವ್ರೆ' ನಾಟಕ

ಮೈಸೂರು, ಅ.18(ಜಿಎ)–ಮೈಸೂರಿನ ಛಾಯೆ ಶೈಕ್ಷಣಿಕ ರಂಗಭೂಮಿ ಸಂಸ್ಥೆಯಿಂದ ವತಿಯಿಂದ ಅ.23 ಮತ್ತು 24ರಂದು ಸಂಜೆ 6.30ಕ್ಕೆ ಕಿರುರಂಗಮಂದಿರದಲ್ಲಿ 'ಹೊಸ್ಬು ಮಾಡ್ತಾವ್ರೆ' ಹೆಸರಿನ ನೂತನ ನಾಟಕ ಪ್ರದರ್ಶನ ಮತ್ತು ಸಮಾರೋಪ ಸಮಾರಂಭ ಏರ್ಪಡಿಸಲಾಗಿದೆ ಎಂದು ನಿರ್ದೇಶಕಿ ರಾಜಲಕ್ಷ್ಮಿ ತಿಳಿಸಿದರು.

ಅ.24ರಂದು ಸಮಾರೋಪ ಸಮಾರಂಭ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ನಾಟಕವು ರಂಗಭೂಮಿಯ ಕಲಿಕೆಯನ್ನು ಮುಖ್ಯ ಧ್ಯೇಯವಾಗಿಸಿಕೊಂಡು ಕಟ್ಟಿದ ರಂಗಕೃತಿಯಾಗಿದೆ. ಇಲ್ಲಿ ರಂಗ ಪರಿಕರಗಳ ಬಳಸುವಿಕೆ, ಸುಧಾರಿತ ತಂತ್ರಗಳ ಅನ್ವೇಷಣೆ ಹಾಗೂ ರಂಗದ ಆಟಗಳನ್ನು ಬಳಸಿಕೊಳ್ಳಲಾಗಿದೆ ಎಂದರು.

ಇಂದು ನಾವು ಡಿಜಿಟಲ್ ಯುಗದಲ್ಲಿದ್ದೇವೆ. ಇದು ಮಕ್ಕಳ ಮೇಲೆ ಪರಿಣಾಮ ಬೀರುತ್ತಿದೆ. ಇದೇ ವೇಳೆ ಪೋಷಕರು ಸಹ ಮಕ್ಕಳ ಜೊತೆಗೆ ಹೇಗೆ ವರ್ತಿಸಬೇಕು, ಸೈಬರ್ ಕ್ರೈಂಗಳಲ್ಲಿ ಮಕ್ಕಳೂ ಹೇಗೆ ಸಂತ್ರಸ್ತರಾಗುತ್ತಾರೆ ಎಂಬಿವೇ ಮೊದಲಾದ ಈಚಿನ ದಿನಗಳ ವಿದ್ಯಮಾನಗಳ ವಿಷಯ ಈ ನಾಟಕ ಆಧರಿಸಿದೆ.

24ರಂದು ಸಂಜೆ 6.30ಕ್ಕೆ ಸಮಾರೋಪ ಹಮ್ಮಿಕೊಳ್ಳಲಾಗಿದೆ. ರಂಗ ವಿನ್ಯಾಸಕಾರ ಹೆಚ್.ಕೆ.ದ್ವಾರಕ ನಾಥ್, ಶೀಲಾಕುಮಾರಿ, ರಂಗಕರ್ಮಿ, ಎಚ್.ಜನಾರ್ಧನ್ ಪಾಲ್ಗೊಳ್ಳುವರು. ನಾಟಕಕ್ಕೆ 100 ರೂ. ಪ್ರವೇಶ ದರ. ಮಾಹಿತಿಗೆ ಮೊ. 99806 01202, 7892582045 ಸಂಪರ್ಕಿಸಬಹುದು ಎಂದರು. ನಾಟಕದ ಪೋಸ್ಟರ್ ಬಿಡುಗಡೆಗೊಳಿಸಿದ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆದೀಪಕ್ ಮಾತನಾಡಿದರು. ಗೋಷ್ಠಿಯಲ್ಲಿ ಸಂಸ್ಥೆಯ ಎಂ.ಜೆ.ಭವ್ಯ, ಹರಿಣಾಕ್ಷಿ ರಾವ್, ಸಿದ್ದೇಶ್, ಶರತ್ ಇದ್ದರು.

ಶ್ರೀ ಕುಲಾಲ ಗುಂಡ ಬ್ರಹ್ಮರ್ಯ ಕುಂಬಾರ ಸಂಘದ ಪದಾಧಿಕಾರಿಗಳ ಆಯ್ಕೆ

ಮೈಸೂರು, ಅ.18–ಮೈಸೂರು ತಾಲೂಕು ಶ್ರೀ ಕುಲಾಲ ಗುಂಡ ಬ್ರಹ್ಮರ್ಯ ಕುಂಬಾರ ಸಂಘಕ್ಕೆ ನೂತನ ಪದಾಧಿಕಾರಿಗಳ ಆಯ್ಕೆಯಾಗಿದೆ.

ಮೈಸೂರಿನ ಸಂಘದ ಕಚೇರಿಯಲ್ಲಿ ಜಿಲ್ಲಾ ಅಧ್ಯಕ್ಷ ಹೆಚ್.ಎಸ್.ಪ್ರಕಾಶ್ ಮತ್ತು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸೋಮಶೇಖರ್, ಜಿಲ್ಲಾ ನಿರ್ದೇಶಕರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಚರ್ಚೆ ನಡೆಸಿ, ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ.

ನೂತನ ಪದಾಧಿಕಾರಿಗಳು: ಮೈಸೂರು ತಾಲೂಕು ಶ್ರೀ ಕುಲಾಲ ಗುಂಡ ಬ್ರಹ್ಮರ್ಯ ಕುಂಬಾರ ಸಂಘ ಪ್ರಧಾನ ಕಾರ್ಯದರ್ಶಿಯಾಗಿ ಶ್ರೀರಂಗಸ್ವಾಮಿ ವರಕೂಡು, ಉಪಾಧ್ಯಕ್ಷರಾಗಿ ಪಾಪಣ್ಣ ಬಂಡಿಪಾಳ್ಯ, ಖಜಾಂಚಿ ಮಹದೇವಶೆಟ್ಟಿ, ಕಾರ್ಯದರ್ಶಿ ಶಂಕರ್ ಉತ್ತನಹಳ್ಳಿ, ಸಹ ಕಾರ್ಯದರ್ಶಿ ಮಹದೇವಸ್ವಾಮಿ, ಜಂಟಿ ಕಾರ್ಯದರ್ಶಿ ಭೋಗೇಶ್, ಸಂಘಟನಾ ಕಾರ್ಯದರ್ಶಿ ಪ್ರಕಾಶ್ ಉಂಡವಾಡಿ, ಕಾನೂನು ಸಲಹೆಗಾರ ಅರುಣ್ ಇಲವಾಲ, ನಿರ್ದೇಶಕರಾಗಿ ಗೋವಿಂದಶೆಟ್ಟಿ ಇಲವಾಲ, ಮಂಚಶೆಟ್ಟಿ ವರಕೂಡು, ವೆಂಕಟರಮಣಶೆಟ್ಟಿ ದೂರ, ದಾಸಶೆಟ್ಟಿ ಮಂಟಿಕ್ಯಾತನಹಳ್ಳಿ, ಸುಮಿತ್ರ ಹಿನಕಲ್, ಪರಮೇಶ್ ಕೇರ್ಗಳ್ಳಿ, ದಿನೇಶ್ ದಡದ ಕಲ್ಲಹಳ್ಳಿ, ಸಂತೋಷ್ ಕಲ್ಲೂರು, ನಾಗರಾಜ್ ಹಂಚ್ಯಾ, ಮಹಾದೇವ್ ಕುಪ್ಪೆಗಾಲ, ಕೆಂಪಣ್ಣ ಕಿರಾಳು, ರಂಗಶೆಟ್ಟಿ ಯಡಕೊಳ, ಮಹೇಶ್ ವರಕೂಡು, ಅನಂತರಾಮು ಇಲವಾಲ, ಶಿವಕುಮಾರ್ ಮಂಡಕಳ್ಳಿ, ಸುರೇಶ್, ಸಂಪತ್, ಮಾಲಿಂಗಶೆಟ್ಟಿ ಆಯ್ಕೆಯಾಗಿದ್ದಾರೆ.

ವಿಶೇಷ ಮಧ್ಯಸ್ಥಿಕೆ ಅಭಿಯಾನದಲ್ಲಿ 102 ಪ್ರಕರಣ ಇತ್ಯರ್ಥ

ಮೈಸೂರು, ಅ.18–ರಾಷ್ಟ್ರಕ್ಕಾಗಿ ಮಧ್ಯಸ್ಥಿಕೆ ಶೀರ್ಷಿಕೆಯಲ್ಲಿ ಮೈಸೂರು ಜಿಲ್ಲಾ ಮತ್ತು ತಾಲೂಕು ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ನಡೆಸಲಾದ 90 ದಿನಗಳ ವಿಶೇಷ ಮಧ್ಯಸ್ಥಿಕೆ ಅಭಿಯಾನದಲ್ಲಿ 102 ಪ್ರಕರಣಗಳು ಇತ್ಯರ್ಥವಾಗಿವೆ.

ಅನುಮೋದಿತ ಪ್ರಮಾಣಿತ ಕಾರ್ಯಾಚರಣೆ ವಿಧಾನ(ಎಸ್‌ಒಪಿ)ದಲ್ಲಿ ಜು.1ರಿಂದ ಅ.7ರವರೆಗೆ ಜಿಲ್ಲಾ ನ್ಯಾಯಾಲಯಗಳು ಮತ್ತು ತಾಲೂಕು ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಮಧ್ಯಸ್ಥಿಕೆ ಮೂಲಕ ಇತ್ಯರ್ಥಪಡಿಸಲು ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಈ ಅಭಿಯಾನದಲ್ಲಿ 102 ಪ್ರಕರಣಗಳು ಇತ್ಯರ್ಥವಾಗಿದ್ದು, 1738 ಪ್ರಕರಣಗಳು ಇತ್ಯರ್ಥವಾಗದೆ ಮುಂದೂಡಲ್ಪಟ್ಟಿದ್ದಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ.ಕೆ.ಅಮರ್‌ನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.10.2025 ಭಾನುವಾರ, ಮಳೆ ನಕ್ಷತ್ರ: ಚಿತ್ತ 11.10.2025 ರಿಂದ 23.10.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಉತ್ತರಾ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ – ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಪಿ.ಸುರಭಿ, ಎನ್.ಹೇಮಾ, ವ್ಯಾಖ್ಯಾನ–ಡಾ.ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಮಧುಲಿಕ ಶ್ರೀನಿವಾಸ್, 9.40 ನಮ್ಮ ಆರೋಗ್ಯ ಔಷಧಗಳ ಗುಣಮಟ್ಟಕ್ಕೆ ಸಂಬಂಧಿಸಿದ ಮಿಥ್ಯೆಗಳಿಗೆ ಸಮಾಧಾನ ಕುರಿತು ಮೈಸೂರಿನ ಶಾರದಾ ವಿಲಾಸ ಔಷಧವಿಜ್ಞಾನ ಕಾಲೇಜಿನ ಪ್ರಾಂಶುಪಾಲರಾದ ಡಾ.ಹನುಮಂತಾಚಾರ್ ಜೋಷಿ.ಕೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ ಮತ್ತು ತೇಜಸ್ವಿನಿ ಗಿರೀಶ್, 10.00 ಕೇಳಿಗಿಳಿಗಳೇ – ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, ನೇರ ಫೋನ್–ಇನ್ ಕಾರ್ಯಕ್ರಮ, 10.30 KRISH TRISH and Balty boy ನಾವು ಭಾರತೀಯರು, ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ–ದೀಪಾವಳಿ ಹಬ್ಬದ ಪ್ರಯುಕ್ತ ವಿಜಯನಗರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ–ವೈಷ್ಣವಿ ರತ್ನಂ ಸಂಘದ ಗೆಳತಿಯರಿಂದ ದೀಪಾವಳಿ ಆಚರಣೆ ಮತ್ತು ವಿಶೇಷ ಕುರಿತು ಕಾರ್ಯಕ್ರಮ, 12.35 ದೇವರನಾಮ, 12.45 ಜನಪದ ಸಂಗೀತ : ಜನಪದ ಸಂಗೀತ: ಮೈಸೂರು ಜಿಲ್ಲೆ ಯರಗನ ಹಳ್ಳಿಯ ಸಣ್ಣಮ್ಮ ಮತ್ತು ಸಂಗಡಿಗರಿಂದ ಹೊನ್ನಮ್ಮನ ಹಾಡು, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಆರ್. ವಿ. ಅನುಪಮ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಭಾರತ ಹಾಗೂ ಇಂಗ್ಲೇಂಡ್ ತಂಡಗಳ ನಡುವೆ ಇಂದೋರ್‌ನ ಹೋಳ್ಕರ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯುವ ಐಸಿಸಿ ವಿಶ್ವಕಪ್ ಮಹಿಳಾ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಲಕ್ವ/ಪ್ಯಾರಾಲಿಸಿಸ್, ಮೈಗ್ರೇನ್ ಹಾಗೂ ಎಲ್ಲಾ ಪ್ರಕಾರದ ತಲೆನೋವುಗಳು ಮತ್ತು ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.
- **ಪ್ರಕೃತಿ ಆಯುರ್ವೇದ ಪ್ರತಿಷ್ಠಾನ :** ಆಯುರ್ವೇದ ಹೃದ್ರೋಗ ಆರೈಕೆ ಕುರಿತು ರಾಷ್ಟ್ರ ಮಟ್ಟದ ತದ್ವಿದ್ಯಾ ಸಂಭಾಷ ಕಾರ್ಯಕ್ರಮ, ಡಾ. ಸ್ಫೂರ್ತಿ ಎಸ್. ನಾಯಕ್ ಅವರ ಆಯುರ್ವೇದದಲ್ಲಿ ಹೃದಯಶಾಸ್ತ್ರವನ್ನು ಅರ್ಥ ಮಾಡಿಕೊಳ್ಳುವ ವಿಷಯ ಕುರಿತು ಇ–ಪುಸ್ತಕ ಬಿಡುಗಡೆ ಸಮಾರಂಭ, ಮುಖ್ಯ ಅತಿಥಿಗಳು : ಡಾ. ವಿಜಯಲಕ್ಷ್ಮೀ ಬಾಳೆಕುಂದ್ರಿ, ಶ್ರೀಹರಿ, ಡಾ. ಬಿ. ಗುರುಬಸವರಾಜ, ಎಂ.ಆರ್. ಭಾಷ್ಯಂ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 9 ರಿಂದ.
- **ಮೈಸೂರು ಅಥ್ಲೆಟಿಕ್ಸ್ ಕ್ಲಬ್ :** ಮೈಸೂರು ಮಿತ್ರ ಮತ್ತು ಸ್ಟಾರ್ ಆಫ್ ಮೈಸೂರ್ ಪತ್ರಿಕೆಗಳ ಸ್ಥಾಪಕ ಸಂಪಾದಕರಾದ ಡಾ. ಕೆ.ಬಿ. ಗಣಪತಿ ಅವರ ಸ್ಮರಣಾರ್ಥ ರಸ್ತೆ ಓಟದ ಸ್ಪರ್ಧೆ, ಉದ್ಘಾಟನೆ : ಮೈಸೂರು ಮಿತ್ರ ಮತ್ತು ಸ್ಟಾರ್ ಆಫ್ ಮೈಸೂರ್ ವ್ಯವಸ್ಥಾಪಕ ಸಂಪಾದಕ ಕೆ.ಜಿ. ವಿಕ್ರಮ್ ಮುತ್ತಣ್ಣ, ಮೈಸೂರು ಮಿತ್ರ ಮತ್ತು ಸ್ಟಾರ್ ಆಫ್ ಮೈಸೂರ್ ಕಾರ್ಯನಿರ್ವಾಹಕ ನಿರ್ದೇಶಕ ಕೆ.ಜಿ. ಮಿಕ್ಕಿ ಬೋಪಣ್ಣ, ಅತಿಥಿಗಳು: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಶಾಸಕ ಕೆ. ಹರೀಶ್‌ಗೌಡ, ಮೈಸೂರು ಅಥ್ಲೆಟಿಕ್ಸ್ ಕ್ಲಬ್ ಪೋಷಕ ಡಾ. ಸಿ.ಕೃಷ್ಣ, ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ ಅಸೋಸಿಯೇಷನ್ ಅಧ್ಯಕ್ಷೆ ಶ್ರೀಮತಿ ಸುಮನಾ ನರಸಿಂಹಮೂರ್ತಿ, ಕರ್ನಾಟಕ ರಾಜ್ಯ ಅಗ್ನಿಶಾಮಕ ಹಾಗೂ ತುರ್ತು ಸೇವೆಗಳ ನಿರ್ದೇಶಕ ಟಿ.ಎನ್. ಶಿವಶಂಕರ, ಸ್ಥಳ: ಲಯನ್ಸ್ ಹಾಲ್, ಮೈಸೂರು ವಿವಿ ಓವಲ್ ಮೈದಾನ, ಹಳೇ ಡಿಸಿ ಕಚೇರಿ ಹತ್ತಿರ, ಬೆಳಗ್ಗೆ 7ಕ್ಕೆ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭಸಂಸ್ಕಾರ, ಮಕ್ಕಳಲ್ಲಿ ಕಂಡು ಬರುವ ಸೆರೆಬ್ರಲ್ ಪಾಲ್ಸಿ (ಮಾಂಸ ಖಂಡಗಳ ದೌರ್ಬಲ್ಯ, ನಿಲ್ಲಲು ಹಾಗೂ ನಡೆದಾಡಲು ಸಾಧ್ಯವಾಗದಿರುವುದು, ಕುಂಠಿತ ಬೆಳವಣಿಗೆ), ವಯಸ್ಕರಲ್ಲಿ ಕಂಡು ಬರುವ ಸಂಧಿ ನೋವು, ಮಂಡಿ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ವ್ಯವಸ್ಥಾಪಕರು :** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್. ರಾಘವೇಂದ್ರ ಅವರು ಕೈಯ್ಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, ಬೆಳಗ್ಗೆ 10ರಿಂದ.
- **ರುದ್ರಾಕ್ಷಿ ಸಂಸ್ಥೆ :** ದೀಪಾವಳಿ ಪ್ರಯುಕ್ತ ರುದ್ರಾಕ್ಷಿ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಹೋಟೆಲ್ ಸಿಪಾಯಿ ಗ್ರಾಂಡ್, ಜೆಎಸ್‌ಎಸ್ ಆಸ್ಪತ್ರೆ ಎದುರು, ಬೆಳಗ್ಗೆ 10.30 ರಿಂದ.
- **ಕರ್ನಾಟಕ ಬುದ್ಧ ಧಮ್ಮ ಸಮಿತಿ :** ಡಾ. ಬಿ.ಆರ್. ಅಂಬೇಡ್ಕರ್ ಧಮ್ಮ ದೀಕ್ಷ ದಿನಾಚರಣೆ, ಸಮ್ಮುಖ : ಬಿಕ್ಕು ಮನೋರಕ್ಖಿತ ಭಂತೇಜಿ, ಅಧ್ಯಕ್ಷತೆ : ಸಮಿತಿ ಅಧ್ಯಕ್ಷ ಪ್ರೊ. ಡಿ. ತಿಮ್ಮಯ್ಯ, ಮುಖ್ಯ ಅತಿಥಿಗಳು : ಬೌದ್ಧ ಸಾಹಿತಿ ಮಹದೇವಯ್ಯ ಕಲ್ಲಾರೆಪುರ, ಪ್ರಧಾನ ಕಾರ್ಯದರ್ಶಿ ಆರ್. ಮಹಾದೇವಪ್ಪ, ಸ್ಥಳ: ಸಿದ್ದಾರ್ಥ ಬುದ್ಧ ವಿಹಾರ, ಡಿ. ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ, ಬೆಳಗ್ಗೆ 10.30ಕ್ಕೆ.
- **ರೋಟರಿ ಕ್ಲಬ್ ಆಫ್ ಮೈಸೂರು ಎಲೈಟ್ :** ಜಿಲ್ಲಾ ಗವರ್ನರ್ ರೊ. ಪಿ.ಕೆ. ರಾಮಕೃಷ್ಣ ಭೇಟಿ, ಅತಿಥಿಗಳು : ಸಹಾಯಕ ಗವರ್ನರ್ ಎಂ.ಡಿ. ರಾಘವೇಂದ್ರ ಪ್ರಸಾದ್, ವಲಯ ಸೇನಾನಿ ಕೆ.ಎಸ್. ಕುಮಾರ್, ಅಧ್ಯಕ್ಷತೆ : ರೋಟರಿ ಕ್ಲಬ್ ಆಫ್ ಮೈಸೂರು ಎಲೈಟ್ ಅಧ್ಯಕ್ಷ ಎನ್.ಎಸ್. ಮಹದೇವಸ್ವಾಮಿ, ಸ್ಥಳ: ರಿಯೋ ಮೆರಿಡಿಯನ್ ಹೋಟೆಲ್, ಸಯ್ಯಾಜಿರಾವ್ ರಸ್ತೆ, ಬಂಬೂ ಬಜಾರ್, ಬೆಳಗ್ಗೆ 11ಕ್ಕೆ.
- **ಹೆಚ್.ವಿ. ರಾಜೀವ್ ಸ್ನೇಹ ಬಳಗ, ವಿಪ್ರ ಮಹಿಳಾ ಸಂಗಮ, ಕೃಷ್ಣ ಕಾಲಿಂಗ್ ಚಾರಿಟಬಲ್ ಟ್ರಸ್ಟ್:** ದಸರಾ ಮನೆ ಮನೆ ಗೊಂಬೆ ಸ್ಪರ್ಧೆಯ ಬಹುಮಾನ ವಿತರಣಾ ಸಮಾರಂಭ, ಅಧ್ಯಕ್ಷತೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮುಖ್ಯ ಅತಿಥಿಗಳು : ಆಕಾಶವಾಣಿ ನಿವೃತ್ತ ಮಹಾನಿರ್ದೇಶಕರಾದ ಶ್ರೀಮತಿ ಡಾ. ವಿಜಯಹರನ್, ನೃತ್ಯಾಲಯ ಟ್ರಸ್ಟ್ ನಿರ್ದೇಶಕರಾದ ಶ್ರೀಮತಿ ಡಾ. ತುಳಸಿ ರಾಮಚಂದ್ರ, ಸ್ಥಳ: ಪ್ರಮತಿ ವಿದ್ಯಾಸಂಸ್ಥೆ, ಉದಯರವಿ ರಸ್ತೆ, ಕುವೆಂಪುನಗರ, ಮಧ್ಯಾಹ್ನ 2.30ಕ್ಕೆ.
- **ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರ :** ಕಲೆಮನೆ ಸಹೋದರಿಯರಾದ ಕೆ.ಎಂ. ಲೇಖಾ, ಕೆ.ಎಂ. ನಿಧಿ ಅವರಿಂದ ಗುರುವಂದನಾ ಭರತನಾಟ್ಯ ಕಾರ್ಯಕ್ರಮ, ಸ್ಥಳ: ಕಲೆಮನೆ ಸಭಾಂಗಣ, ಸಂಜೆ 4ಕ್ಕೆ.
- **ಸಾಧನ ಮಂದಿರ :** ಸರಸ್ವತಿ ಪೂಜಾ, ಸಂಜೆ 4.45 ರಿಂದ ಯಡತೊರೆ ಶ್ರೀ ಯೋಗಾನಂದೇಶ್ವರ ಮಠ; ರಾತ್ರಿ 6 ರಿಂದ ಶ್ರೀ ಕೃಷ್ಣಮಂದಿರ, ಗೋಕುಲಂ 3ನೇ ಹಂತ; ರಾತ್ರಿ 7 ರಿಂದ ಸಮುದಾಯ ಭವನ, ಗುರುದ್ವಾರ ಸಮೀಪ, ಬೃಂದಾವನ ಬಡಾವಣೆ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀ ಮಾತೆ ಶಾರದಾದೇವಿ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

ಅ.21ರಿಂದ ಪರಂಪರೆಯ ಪ್ರತೀಕ, ಭಕ್ತಿ-ಭಾವೈಕ್ಯತೆಯ ಕುಂಬಾರಕೊಪ್ಪಲು ಶ್ರೀ ಮಹದೇಶ್ವರಸ್ವಾಮಿ ಜಾತ್ರೆ

ಜಾನಪದ ಕಲಾತಂಡಗಳ ಕಲಾವೈಭವದ ಮೆರಗಿನೊಂದಿಗೆ ಅ.22ರ ರಾತ್ರಿ ಹಾಲರವಿ, ಬಾಯಿಬೀಗ ಉತ್ಸವ



ಸುಣ್ಣ-ಬಣ್ಣ ಲೇಪನ ಮತ್ತು ವಿದ್ಯುತ್ ದೀಪಾಲಂಕಾರ ಮಾಡಿರುವ ಕುಂಬಾರಕೊಪ್ಪಲು ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ.


ಮೈಸೂರು,ಅ.18(ಪಿಎಂ)- ಪರಂಪರೆಯ ಪ್ರತೀಕ, ಭಕ್ತಿ ಮತ್ತು ಭಾವೈಕ್ಯತೆಯ ಸಂಕೇತವಾದ ಮೈಸೂರಿನ ಕುಂಬಾರಕೊಪ್ಪಲು ಶ್ರೀ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಈ ಬಾರಿ ಅ.21ರಿಂದ 23ರವರೆಗೆ ನಡೆಯಲಿದೆ. ಪ್ರತಿವರ್ಷ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಮೂರು ದಿನಗಳ ಕಾಲ ವಿಜೃಂಭಣೆಯಿಂದ ಈ ಜಾತ್ರಾ ಮಹೋತ್ಸವ ಆಯೋಜಿಸುವುದು ಪರಂಪರಾಗತವಾಗಿ ನಡೆದುಬಂದಿದೆ.

ಇಲ್ಲಿನ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನವು ಜಾತ್ರಾ ಮಹೋತ್ಸವದ ಕೇಂದ್ರ ಬಿಂದು. ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ ಸೇರಿದಂತೆ ಗ್ರಾಮದ ದೇವಸ್ಥಾನಗಳಿಗೆ ಬಣ್ಣ ಲೇಪನ ಕಾರ್ಯ ಪೂರ್ಣಗೊಂಡಿದ್ದು, ದೇವಾಲಯಗಳು ಸೇರಿದಂತೆ ಪ್ರಮುಖ ರಸ್ತೆಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ.

ಪ್ರತಿವರ್ಷದಂತೆ ಕುಂಬಾರಕೊಪ್ಪಲು ಅಭ್ಯುದಯ ಸಂಘದ ನೇತೃತ್ವದಲ್ಲಿ ಜಾತ್ರೆ ನಡೆಯಲಿದ್ದು, ಅ.21ರಂದು ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ ಸೇರಿದಂತೆ ಗ್ರಾಮದ ಎಲ್ಲಾ ದೇವಾಲಯಗಳಲ್ಲಿ ವಿಶೇಷ ಪೂಜೆ ಜರುಗುವ ಮೂಲಕ ಜಾತ್ರಾ ಮಹೋತ್ಸವಕ್ಕೆ ಚಾಲನೆ ದೊರೆಯಲಿದೆ. ಜಾತ್ರೆಯ ಮೊದಲ ದಿನ ಶ್ರೀ ಮಹದೇಶ್ವರ ಸ್ವಾಮಿ ದೇವಸ್ಥಾನ, ಇದೇ ದೇವಾಲಯದ ಆವರಣದಲ್ಲಿರುವ ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನ ಸೇರಿದಂತೆ ಗ್ರಾಮದ ಮಾರಮ್ಮನ ಗುಡಿ, ಬನ್ನಿಮಾರಮ್ಮ ದೇವಾಲಯ ಹಾಗೂ ಶ್ರೀ ಬಸವೇಶ್ವರ ದೇವಸ್ಥಾನಗಳಲ್ಲಿ ವಿಶೇಷ ಪೂಜಾ ಕೈಂಕರ್ಯ ನಡೆಯಲಿವೆ.

ಹಾಲರವಿ, ಬಾಯಿಬೀಗ ಉತ್ಸವ: ಅ.22ರಂದು ರಾತ್ರಿ 7ಕ್ಕೆ ಕೆಆರ್‌ಎಸ್ ರಸ್ತೆಯಲ್ಲಿರುವ ತಿಪ್ಪಾಜಿ ಕೊಳದಿಂದ ಪ್ರಾರಂಭಗೊಳ್ಳುವ ಹಾಲರವಿ ಮತ್ತು ಬಾಯಿಬೀಗ ಉತ್ಸವವು ಕುಂಬಾರಕೊಪ್ಪಲಿನ ಪ್ರಮುಖ ಬೀದಿಗಳಲ್ಲಿ ಸಾಗಲಿದೆ. ಜಾನಪದ ಕಲಾತಂಡಗಳೊಂದಿಗೆ ಸಾಗುವ ಉತ್ಸವವು ಅಂತಿಮವಾಗಿ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ ತಲುಪಲಿದೆ. ಹಾಲರವಿ ಮತ್ತು ಬಾಯಿಬೀಗ ಉತ್ಸವದಲ್ಲಿ ಬೆಳ್ಳಿಯ ಮಹದೇಶ್ವರರ ಮುಖವಾಡ ಮತ್ತು ವೀರಭದ್ರಸ್ವಾಮಿ ಹಲಗಗೆ ಸ್ನಾನ ಮಾಡಿಸಿ, ಬಾಯಿಬೀಗ ಹರಕೆಗೆ ಚಾಲನೆ ನೀಡಲಾಗುತ್ತದೆ.

ಹುಲಿವಾಹನೋತ್ಸವ: ಅ.23ರಂದು ಗುರುವಾರ ಬೆಳಗಿನ ಜಾವ 2ಕ್ಕೆ ಶ್ರೀ



ದೇವಸ್ಥಾನದ ಆವರಣದಲ್ಲಿ ನಿರ್ಮಿಸಿರುವ ಮಹದೇಶ್ವರಸ್ವಾಮಿಯವರ ಜೀವನ ಚರಿತ್ರೆ ಬಿಂಬಿಸುವ ಕಲಾಕೃತಿಗಳ ಪೈಕಿ ಕೊನೆಯ ಅಂಕಣದಲ್ಲಿರುವ ಮಹದೇಶ್ವರರ ಪ್ರತಿಮೆ.

ಮಹದೇಶ್ವರಸ್ವಾಮಿಯ ಹುಲಿವಾಹನೋತ್ಸವ ಜರುಗಲಿದೆ. ಶ್ರೀಮಹದೇಶ್ವರ ಸ್ವಾಮಿ ದೇವಸ್ಥಾನದಿಂದ ಹೊರಡುವ ಹುಲಿವಾಹನೋತ್ಸವ, ಊರಿನ ಪ್ರಮುಖ ಬೀದಿಗಳಲ್ಲಿ ಸಾಗಲಿದೆ. ನಂತರ ಅಂದು ಬೆಳಗ್ಗೆ ಸುಮಾರು 11ರ ವೇಳೆಗೆ ದೇವಸ್ಥಾನಕ್ಕೆ ಹುಲಿವಾಹನೋತ್ಸವ ಮರಳಿದ್ದು, ನಂತರ ಇಲ್ಲಿ ಮಧ್ಯಾಹ್ನ 12 ಗಂಟೆಗೆ ಕೊಂಡೋತ್ಸವ ನಡೆಯಲಿದೆ.

ಕುಸ್ತಿ ಅ.23ರಂದು ಕೊಂಡೋತ್ಸವದ ಬಳಿಕ ದೇವಸ್ಥಾನದ ಸಮೀಪದಲ್ಲೇ ಇರುವ ಶ್ರೀಕೆಂಪೇಗೌಡ ಕ್ರೀಡಾಂಗಣದಲ್ಲಿ ಕುಸ್ತಿ ಪಂದ್ಯಾವಳಿ ನಡೆಯಲಿದೆ. ಇದಕ್ಕಾಗಿ ಅಖಾಡ ಸಜ್ಜುಗೊಳಿಸಲಾಗುತ್ತಿದೆ. ಶ್ರೀ ಮಹದೇಶ್ವರ ಕುಸ್ತಿ ಸೇವಾಸಂಘದ ವತಿಯಿಂದ ಕುಸ್ತಿ ಪಂದ್ಯಾವಳಿ ನಡೆಯಲಿದ್ದು, 25 ಜೊತೆ ಕುಸ್ತಿ ಪಂದ್ಯಗಳನ್ನು ನಡೆಸಲು ಸಿದ್ಧತೆ ನಡೆಸಲಾಗಿದೆ. ಈ 25 ಜೊತೆಗಳ ಕುಸ್ತಿ ಪೈಕಿ ಮೈಸೂರಿನ ನಜರ್‌ಬಾದ್ ಪೈಲ್ವಾನ್ ಚೇತನ್‌ಗೌಡ ಹಾಗೂ ಬೆಂಗಳೂರಿನ ಪೈಲ್ವಾನ್ ಸೂಫಿಯಾನ್ ನಡುವೆ 30 ನಿಮಿಷಗಳ ಕಾಲ ಕುಸ್ತಿ ನಡೆಯಲಿದ್ದು, ಇದು ಸದರಿ ಪಂದ್ಯಾವಳಿಯಲ್ಲಿ ನಡೆಯುವ ಅತಿ ಹೆಚ್ಚು ಸಮಯದ ಪಂದ್ಯವಾಗಿದೆ.

ಕಬಡ್ಡಿ: ಅ.21ರಿಂದ 23ರವರೆಗೆ ಇದೇ ಕೆಂಪೇಗೌಡ ಕ್ರೀಡಾಂಗಣದಲ್ಲಿ ಸಜ್ಜುಗೊಳಿಸಿರುವ ಮೈದಾನದಲ್ಲಿ ಕಬಡ್ಡಿ ಪಂದ್ಯಾವಳಿ ಆಯೋಜಿಸಲಾಗಿದೆ. ಮಾರಿಗುಡಿ ಗ್ರೂಪ್ಸ್, ಶ್ರೀಕುಂಬಾರಕೊಪ್ಪಲು ಅಭ್ಯುದಯ ಸಂಘ, ಗಂಧರ್ವ ಸ್ಪೋರ್ಟ್ಸ್ ಕ್ಲಬ್ ಮತ್ತು ಕುಂಬಾರಕೊಪ್ಪಲು ಗ್ರಾಮಸ್ಥರ ಸಂಯುಕ್ತಾಶ್ರಯದಲ್ಲಿ 'ದೀಪಾವಳಿ ಕಪ್ 2025' ಶೀರ್ಷಿಕೆಯಡಿ ಕಬಡ್ಡಿ ಪಂದ್ಯಾವಳಿ ನಡೆಯಲಿದೆ. ಜಾತ್ರೆ ಪ್ರಯುಕ್ತ ನಡೆಯುತ್ತಿರುವ ಮೈಸೂರು ವಿಭಾಗ ಮಟ್ಟದ ಹೊನಲು ಬೆಳಕಿನ ಮ್ಯಾಟ್ ಕಬಡ್ಡಿ ಪಂದ್ಯಾವಳಿ (4ನೇ ವರ್ಷದ) ಇದಾಗಿದೆ.

ಪಂದ್ಯಾವಳಿಯ ಚಾಂಪಿಯನ್ ತಂಡಕ್ಕೆ ಪ್ರಥಮ ಬಹುಮಾನವಾಗಿ 75 ಸಾವಿರ ರೂ. ನಗದಿನೊಂದಿಗೆ ಟ್ರೋಫಿ ಪ್ರದಾನ ಮಾಡಲಾಗುತ್ತದೆ. ದ್ವಿತೀಯ ಬಹುಮಾನವಾಗಿ 50 ಸಾವಿರ ರೂ., ತೃತೀಯ ಹಾಗೂ ನಾಲ್ಕನೇ ಬಹುಮಾನ 20 ಸಾವಿರ ರೂ. ನಗದು ಹಾಗೂ ಟ್ರೋಫಿ ಪ್ರದಾನ ಮಾಡಲಾಗುತ್ತದೆ.



ದೇವಸ್ಥಾನದ ಮುಖ್ಯದ್ವಾರದ ಗೋಪುರವೂ ಬಣ್ಣ ಲೇಪನ ಹಾಗೂ ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿರುವುದನ್ನು ಕಾಣಬಹುದು.

ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಬಲಿಗರಿಂದಲೇ ಗೊಂದಲ

- ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರಿಗೆ ಡಿಸಿಎಂ ಡಿ.ಕೆ.ಶಿವಕುಮಾರ್ ದೂರು
- ವರಿಷ್ಠರ ಆದೇಶ ನಂತರವೂ ನಾಯಕತ್ವ, ಸಂಪುಟ ಪುನರ್ರಚನೆ ಪ್ರಸ್ತಾಪ



ಶುಕ್ರವಾರ ರಾತ್ರಿ ಡಿಸಿಎಂ ಡಿ.ಕೆ.ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭೇಟಿಯಾದರು

ಬೆಂಗಳೂರು, ಅ.18(ಕೆಎಂಶಿ)- ಅಧಿಕಾರ ಹಸ್ತಾಂತರ, ಸಚಿವ ಸಂಪುಟ ಪುನರ್ ರಚನೆ ವಿಚಾರ ಮುಂದಿಟ್ಟುಕೊಂಡು ಸರ್ಕಾರ ಮತ್ತು ಪಕ್ಷದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಬಲಿಗರು ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ದೂರು ನೀಡಿದ್ದಾರೆ.

ಕಡೇ ಗಳಿಗೆಯಲ್ಲಿ ಕೊಡಗು ಜಿಲ್ಲಾ ಪ್ರವಾಸ ರದ್ದುಪಡಿಸಿ, ಶುಕ್ರವಾರ ರಾತ್ರಿ ಖರ್ಗೆ ಅವರನ್ನು ಭೇಟಿ ಮಾಡಿ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಮುಖಾಮುಖಿ ಚರ್ಚೆ ಮಾಡಿದ್ದಾರೆ.

ನಾಯಕತ್ವ ಬದಲಾವಣೆ ವಿಚಾರಕ್ಕೆ ಸಂಬಂಧಿಸಿದಂತೆ ಸ್ವತಃ ಮುಖ್ಯಮಂತ್ರಿ, ಅವರ ಪುತ್ರ, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಅಲ್ಲದೆ, ಆಪ್ತ ಸಚಿವರುಗಳು ಈ ಸಂಬಂಧ ಪದೇ ಪದೆ ಹೇಳಿಕೆಗಳನ್ನು ನೀಡುತ್ತಲೇ ಇದ್ದಾರೆ.

ವರಿಷ್ಠರ ಆದೇಶದ ನಂತರವೂ ಈ ಮಾತುಗಳು ಕೇಳಿಬರುತ್ತಲೇ ಇವೆ. ಅಲ್ಲದೆ, ಈಗ ಸಂಪುಟ ಪುನರ್ ರಚನೆಯನ್ನು ಸಿದ್ದರಾಮಯ್ಯ ಬೆಂಬಲಿಗರು ಮುನ್ನೆಲೆಗೆ ತರುತ್ತಿದ್ದಾರೆ. ಪುನರ್ ರಚನೆಗೆ ನೀವು ಅನುಮತಿ ನೀಡಿದ್ದೀರಾ, ಸ್ಪಷ್ಟನೆ ಕೊಡಿ ಎಂದು ಮನವಿ ಮಾಡಿದ್ದಾರೆ.

ನನ್ನನ್ನು ಬೆಂಬಲಿಸಿ ಯಾರಾದರೂ ಶಾಸಕರು ಸಾರ್ವಜನಿಕವಾಗಿ ಹೇಳಿಕೆ ನೀಡಿದರೆ, ಅವರಿಗೆ ಪಕ್ಷದ ಶಿಸ್ತು ಸಮಿತಿ ನೋಟಿಸ್ ಜಾರಿ ಮಾಡುತ್ತದೆ. ಆದರೆ, ಮುಖ್ಯಮಂತ್ರಿ ಪರವಾಗಿ ನೀಡುವ ಹೇಳಿಕೆಗಳಿಗೆ ಇದುವರೆಗೂ ಯಾರಿಗೂ ನೋಟಿಸ್ ಜಾರಿ ಮಾಡಿಲ್ಲ, ಇದು ಸರಿಯೇ ಎಂದಿದ್ದಾರೆ.

ಪ್ರಿಯಾಂಕ್ ಖರ್ಗೆ, ಆರ್‌ಎಸ್‌ಎಸ್ ವಿರುದ್ಧ ನೀಡಿದ ಹೇಳಿಕೆ ನಂತರದ ಬೆಳವಣಿಗೆಯಿಂದ ಅವರಿಗೆ ಬೆದರಿಕೆ ಕರೆಯೂ ಬಂದಿತ್ತು. ನನ್ನನ್ನು ಹೊರತುಪಡಿಸಿ ಗೃಹ ಮಂತ್ರಿಯೂ ಸೇರಿದಂತೆ ಯಾವ ಸಚಿವರೂ ಅವರ ಬೆನ್ನಿಗೆ ನಿಲ್ಲಲಿಲ್ಲ.

ನಿಮ್ಮ ಕುಟುಂಬದ ಬಗ್ಗೆಯೂ ಅವಹೇಳನಕಾರಿ ಹೇಳಿಕೆಗಳು ಬಂದರೂ ಪ್ರತಿಭಟಿಸಿ ಹೇಳಿಕೆ ನೀಡಲಿಲ್ಲ.

ಇತ್ತೀಚಿನ ಎಲ್ಲಾ ಬೆಳವಣಿಗೆ, ಪಕ್ಷ ಹಾಗೂ ಸರ್ಕಾರದ ಕೆಲಸ-ಕಾರ್ಯಗಳ ಬಗ್ಗೆ ಮಾಹಿತಿ ನೀಡಿದ ಶಿವಕುಮಾರ್, ನವೆಂಬರ್‌ನಲ್ಲಿ ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದಂತೆ ವರಿಷ್ಠರು ನೀಡಿರುವ ಭರವಸೆಯನ್ನು ಖರ್ಗೆ ಗಮನಕ್ಕೆ ತಂದಿದ್ದಾರೆ.

ಎಲ್ಲವನ್ನೂ ಆಲಿಸಿದ ಖರ್ಗೆ, ಕೆಲವು ಸಲಹೆ-ಸೂಚನೆ ನೀಡಿ, ನವೆಂಬರ್ 14ರವರೆಗೆ ನಿಮ್ಮ ಕೆಲಸ ಮಾಡಿಕೊಂಡು ಹೋಗಿ ನಂತರ ಪಕ್ಷ ತೀರ್ಮಾನಿಸಲಿದೆ.

ಆರೋಗ್ಯದ ಹಿತದೃಷ್ಟಿಯಿಂದ ಬಿಹಾರ ವಿಧಾನಸಭಾ ಚುನಾವಣಾ ಪ್ರಚಾರ ಕಾರ್ಯದಲ್ಲಿ ತಾವು ಹೆಚ್ಚಾಗಿ ತೊಡಗಿಸಿಕೊಳ್ಳುತ್ತಿಲ್ಲ ಎಂಬುದಾಗಿ ಖರ್ಗೆ ತಿಳಿಸಿದ್ದಲ್ಲದೆ, ಚುನಾವಣಾ ಸಂಬಂಧಿ ವಿವರ ಹಂಚಿಕೊಂಡರು. ಖರ್ಗೆ ಭೇಟಿ ನಂತರ ಟ್ವೀಟ್ ಮಾಡಿರುವ ಶಿವಕುಮಾರ್, ಎಐಸಿಸಿ ಅಧ್ಯಕ್ಷರೂ ಆಗಿರುವ ಪಕ್ಷದ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ಭೇಟಿ ಮಾಡಿ, ಆರೋಗ್ಯ ವಿಚಾರಿಸಿದೆ ಎಂದು ಬರೆದುಕೊಂಡಿದ್ದಾರೆ.

ಯುವತಿಯೊಂದಿಗಿನ ಖಾಸಗಿ ವೀಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟ ಕಾಂಗ್ರೆಸ್ ಕಾರ್ಯಕರ್ತನ ಬಂಧನ

ಮೈಸೂರು, ಅ.18- ಯುವತಿಯೊಂದಿಗಿನ ಖಾಸಗಿ ವೀಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟ ಆರೋಪದಡಿ ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತನನ್ನು ಪೊಲೀಸರು ಬಂಧಿಸಿದ್ದಾರೆ.

ಸಾಲಿಗ್ರಾಮ ತಾಲೂಕಿನ ಗ್ರಾಮವೊಂದರ ಕಾಂಗ್ರೆಸ್ ಕಾರ್ಯಕರ್ತ ಲೋಹಿತ್‌ನನ್ನು ಶನಿವಾರ ಬಂಧಿಸಿ, ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ ನಂತರ ಅವರ ಆದೇಶದಂತೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಸಂತ್ರಸ್ತೆಯ ತಂದೆ ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿರುವುದನ್ನು ಜಿಲ್ಲಾ ಸೈಬರ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಸುನೀಲ್ ಖಚಿತಪಡಿಸಿದ್ದಾರೆ.

ದೂರಿನ ವಿವರ: ಮೂರು ತಿಂಗಳ ಹಿಂದೆ ಮಗಳಿಗೆ ವಿವಾಹ ಮಾಡಿಕೊಡಲಾಗಿದ್ದು, ದೀಪಾವಳಿ ಹಬ್ಬಕ್ಕೆಂದು ಊರಿಗೆ ಬಂದಿದ್ದಾಳೆ. ಅ.16ರಂದು ಬೆಳಗ್ಗೆ ಜಮೀನಿನ ಬಳಿ ಬೇರೆ ಊರಿನ ಸಂಬಂಧಿಯೊಬ್ಬರು ನನ್ನನ್ನು ಭೇಟಿಯಾಗಿ, ನಿಮ್ಮ ಮಗಳು ಹಾಗೂ ಲೋಹಿತನ ಖಾಸಗಿ ವಿಡಿಯೋವನ್ನು ನಿಮ್ಮ ಊರಿನ ವ್ಯಕ್ತಿಯೇ ಕಳುಹಿಸಿದ್ದ. ಅದು ತುಂಬಾ ಕೆಟ್ಟದಾಗಿದ್ದರಿಂದ ಕೂಡಲೇ ಆತ ಡಿಲೀಟ್ ಮಾಡಿರುವುದಾಗಿ ತಿಳಿಸಿದರು.


ನನ್ನ ಮಗಳ ಮತ್ತು ನಮ್ಮ ಕುಟುಂಬದ ಮಾನ ಮರ್ಯಾದೆಯನ್ನು ಬೀದಿಪಾಲು ಮಾಡುವ ಉದ್ದೇಶದಿಂದ ದುಷ್ಕೃತ್ಯವೆಸಗಿದ್ದಾನೆ. ಈ ಮೂಲಕ ನನ್ನ ಮಗಳ ಸಂಸಾರ ಹಾಗೂ ನಮ್ಮ ಸಂಸಾರವನ್ನು ಹಾಳು ಮಾಡಿದ್ದಾನೆ ಎಂದು ಸಂತ್ರಸ್ತೆಯ ತಂದೆ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಆರೋಪಿ ಶಾಸಕರ ಬೆಂಬಲಿಗನೇ?

ಅಶ್ಲೀಲ ವೀಡಿಯೋ ಹಂಚಿದ ಆರೋಪಿ ಲೋಹಿತ್, ಕೆ.ಆರ್.ನಗರ ಕ್ಷೇತ್ರದ ಶಾಸಕ ಡಿ.ರವಿಶಂಕರ್ ಅವರ ಕಟ್ಟಾ ಬೆಂಬಲಿಗ ಎಂದು ಕೆಲ ಯ್ಯೂಟ್ಯೂಬ್ ವಾಹಿನಿಗಳಲ್ಲಿ ಪ್ರಸಾರವಾಗಿದ್ದು, ಈ ಬಗ್ಗೆ ಕಾರ್ಯಕ್ರಮವೊಂದರಲ್ಲಿ ಶಾಸಕರು ಸ್ಪಷ್ಟನೆ ನೀಡಿದ್ದಾರೆ. ಈ ಪ್ರಕರಣದಲ್ಲಿ ವಿನಾಕಾರಣ ನನ್ನ ಹೆಸರು ಪ್ರಸ್ತಾಪಿಸಲಾಗುತ್ತಿದೆ. ನಾವು ಹಲವಾರು ಗ್ರಾಮಗಳಿಗೆ ಭೇಟಿ ನೀಡುತ್ತೇವೆ. ಆ ವೇಳೆ ಫೋಟೊ ತೆಗೆಸಿಕೊಳ್ಳುವುದು ಸಹಜ. ಜನರೊಟ್ಟಿಗಿರುವ ಹಳೇ ಫೋಟೊ ಇಟ್ಟುಕೊಂಡು ಆರೋಪಿಯು ಕಾಂಗ್ರೆಸ್ ಕಾರ್ಯಕರ್ತ, ನನ್ನ ಕಟ್ಟಾ ಬೆಂಬಲಿಗ ಎಂದೆಲ್ಲಾ ಅಪಪ್ರಚಾರ ಮಾಡುತ್ತಿದ್ದಾರೆ. ಆ ವ್ಯಕ್ತಿಗೂ, ನನಗೂ ಯಾವುದೇ ರೀತಿಯ ಸಂಬಂಧವಿಲ್ಲ. ಘೋರ ಅಪರಾಧ ಎಸಗಿರುವವನು ಯಾರೇ ಆಗಿರಲಿ ತಕ್ಷಣ ಕ್ರಮ ವಹಿಸುವಂತೆ ನಾನೇ ಪೊಲೀಸರಿಗೆ ಸೂಚಿಸಿದ್ದೇನೆ ಎಂದು ತಿಳಿಸಿದ್ದಾರೆ.

ಜಾತಿಗಣತಿ ಸಮೀಕ್ಷೆಯಲ್ಲಿ ಸರ್ಕಾರದಿಂದ ನ್ಯಾಯಾಂಗ ನಿಂದನೆ!

- ವಿಪಕ್ಷ ನಾಯಕ ಆರ್.ಅಶೋಕ್ ಟೀಕೆ
- ಕೋರ್ಟ್‌ಗೆ ಮಾಹಿತಿ ಗೌಪ್ಯತೆ ವಾಗ್ದಾನ ಮಾಡಿದ್ದ ಸರ್ಕಾರ ಈಗ ಅದನ್ನು ಬಯಲು ಮಾಡಿದೆ



ಬೆಂಗಳೂರು, ಅ.18(ಕೆಎಂಶಿ)-ಜಾತಿಗಣತಿ ಸಮೀಕ್ಷೆಯಲ್ಲಿ ಭಾಗವಹಿಸುವುದು ಕಡ್ಡಾಯವಲ್ಲ. ಸಾರ್ವಜನಿಕರು ನೀಡುವ ಮಾಹಿತಿಯ ಗೌಪ್ಯತೆ ಕಾಪಾಡಬೇಕು ಎಂಬ ಹೈಕೋರ್ಟ್ ಆದೇಶವನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಗಾಳಿಗೆ ತೂರಿ ನ್ಯಾಯಾಂಗ ನಿಂದನೆ ಎಸಗುತ್ತಿದೆ ಎಂದು ವಿಧಾನಸಭೆಯಲ್ಲಿನ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಇಂದಿಲ್ಲಿ ಟೀಕಿಸಿದ್ದಾರೆ.

ಈ ಎರಡೂ ಅಂಶಗಳ ಬಗ್ಗೆ ಸ್ವತಃ ಹೈಕೋರ್ಟ್ ಸ್ಪಷ್ಟನೆ ನೀಡಿದಾಗ ಮಾಹಿತಿಯ ಗೌಪ್ಯತೆ ಕಾಪಾಡುವುದಾಗಿ ರಾಜ್ಯ ಸರ್ಕಾರ ಒಪ್ಪಿಕೊಂಡಿತ್ತು, ಆದರೆ, ಇನ್ಫೋಸಿಸ್‌ನ ಸುಧಾಮೂರ್ತಿ ಹಾಗೂ ನಾರಾಯಣಮೂರ್ತಿ ಕುಟುಂಬ ನೀಡಿದ ಮಾಹಿತಿ ಹೇಗೆ ಬಹಿರಂಗವಾಯಿತು.

ಸಾರ್ವಜನಿಕರು ನೀಡುವ ಮಾಹಿತಿ ಸೋರಿಕೆ ಮಾಡಿದ ಸರ್ಕಾರಿ ಅಧಿಕಾರಿ, ಸಿಬ್ಬಂದಿಗಳ ಮೇಲೆ ಕ್ರಮ ಜರುಗಿಸುತ್ತೀರಾ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಶೋಕ್ ಪ್ರಶ್ನಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆ ಕಡ್ಡಾಯವಲ್ಲ ಎಂದು ಹೇಳಿರುವಾಗ ಸಮೀಕ್ಷೆಯಲ್ಲಿ ಭಾಗವಹಿಸದವರು ದೇಶದ್ರೋಹಿಗಳು ಎಂಬುದಾಗಿ ಆರೋಪಿಸಿರುವ ಕಾಂಗ್ರೆಸ್‌ನ ಹಿರಿಯ ನಾಯಕ ಬಿ.ಕೆ.ಹರಿಪ್ರಸಾದ್ ನ್ಯಾಯಾಲಯ ನಿಂದನೆಗೆ ಉತ್ತರಿಸುತ್ತಾರೆಯೇ ಎಂದಿದ್ದಾರೆ. ನ್ಯಾಯಾಲಯದ ಆದೇಶ ಪಾಲನೆ ಮಾಡಿದವರು ದೇಶದ್ರೋಹಿ ಹೇಗಾಗುತ್ತಾರೆ ಎಂಬುದನ್ನು ಹರಿಪ್ರಸಾದ್ ರಾಜ್ಯದ ಜನತೆಗೆ ವಿವರಿಸಬೇಕು.

ಬೆಂಗಳೂರಿನ ಗುಂಡಿಬಿದ್ದ ರಸ್ತೆಗಳ ಬಗ್ಗೆ ಜಾಗತಿಕ ಉದ್ಯಮಿಗಳು ದನಿ ಎತ್ತಿದಾಗ, ನಿಮ್ಮ ಸಿಎಸ್‌ಆರ್ ನಿಧಿಯಲ್ಲಿ ನೀವೇ ರಸ್ತೆಗುಂಡಿ ಮುಚ್ಚಿ, ಸಿಎಸ್‌ಆರ್ ನಿಧಿಯ ಲೆಕ್ಕಕೊಡಿ ಎಂಬುದಾಗಿ ಬೆದರಿಸಿ ಅವಮಾನ ಮಾಡಿದ ಕಾಂಗ್ರೆಸ್ ನಾಯಕರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಇನ್ಫೋಸಿಸ್‌ನವರು ಬೃಹಸ್ಪತಿಗಳಾ? ಜಾತಿಗಣತಿ ಸಮೀಕ್ಷೆಯಲ್ಲಿ ಭಾಗವಹಿಸದವರು ದೇಶದ್ರೋಹಿಗಳು ಎಂದು ಹೀಯ್ಯಾಳಿಸುವ ಮೂಲಕ ಮತ್ತೊಮ್ಮೆ ದರ್ಪ, ದುರಹಂಕಾರ ಮೆರೆದಿದ್ದಾರೆ.

ಲಕ್ಷಾಂತರ ಜನಕ್ಕೆ ಉದ್ಯೋಗ ಕೊಟ್ಟು ದೇಶದ ಆರ್ಥಿಕತೆಗೆ ಶಕ್ತಿ ತುಂಬುತ್ತಿರುವ ಉದ್ಯಮಿಗಳ ಬಗ್ಗೆ ನಾಲಿಗೆ ಹರಿಬಿಡುವ ಕಾಂಗ್ರೆಸ್ ನಾಯಕರಿಗೆ ನಿಜಕ್ಕೂ ನಾಚಿಕೆಯಾಗಬೇಕು ಎಂದು ಅಶೋಕ್ ನಿಂದಿಸಿದ್ದಾರೆ.

ಶ್ರೀ ಕಾವೇರಿ ಕೊಡವ ಅಸೋಸಿಯೇಷನ್ ಮೈಸೂರು ಪೂರ್ವದ ವಾರ್ಷಿಕ ಮಹಾಸಭೆ




ಮೈಸೂರು, ಅ.18- ಮೈಸೂರಿನ ಸಾತಗಳ್ಳಿಯ ವಿದ್ಯಾಶಂಕರ ಬಡಾವಣೆಯಲ್ಲಿರುವ ಮೈಸೂರು ಪೂರ್ವ ಶ್ರೀ ಕಾವೇರಿ ಕೊಡವ ಅಸೋಸಿಯೇಷನ್‌ನ 24ನೇ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷ ಕಡೇಮಾಡ ಎಂ.ಬೆಳ್ಯಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೈಸೂರಿನ ವಿದ್ಯಾಶಂಕರ ಬಡಾವಣೆಯ ಕಾವೇರಿ ರಸ್ತೆಯಲ್ಲಿರುವ ಕೊಡಗು ಮಾಡಲ್ ಶಾಲೆಯ ಆವರಣದಲ್ಲಿರುವ ಅಸೋಸಿಯೇಷನ್ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಸಂಘದ ಕಾರ್ಯದರ್ಶಿ ಪಿ.ಎ ದೇವಯ್ಯ ವಾರ್ಷಿಕ ವರದಿ ಮಂಡಿಸಿದರೆ, ಖಜಾಂಚಿ ಪಿ.ಟಿ.ಚರ್ಮಣ್ಣ ಹಣಕಾಸು ವರದಿ ಮಂಡಿಸಿದರು.

ಸಭೆಯಲ್ಲಿ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ಅಧ್ಯಕ್ಷರು, ಸಂಘದ ಮುಂದಿನ ಯೋಜನೆಗಳು ಹಾಗು ಆಶ್ರಯದಲ್ಲಿ ನಡೆಯುತ್ತಿರುವ ಶಾಲೆಯ ಅಭಿವೃದ್ಧಿ ಕುರಿತಾದ ರೂಪರೇಷೆಗಳನ್ನು ವಿವರಿಸಿದರು. ಸಂಘದ ಉಪಾಧ್ಯಕ್ಷರು, ಸದಸ್ಯರು, ಆಂತರಿಕ ಲೆಕ್ಕ ಪರಿಶೋಧಕರು, ಸಂಘದ ನಿಕಟ ಪೂರ್ವ ಪದಾಧಿಕಾರಿಗಳು, ದಾನಿಗಳು ಮತ್ತು ನೂರಾರು ಸದಸ್ಯರು ಭಾಗವಹಿಸಿದ್ದರು. ಸಿ. ಮನು ಸುಬ್ಬಯ್ಯ ಅವರು ಪ್ರಾರ್ಥಿಸಿ, ಸಂಘದ ಜಂಟಿ ಕಾರ್ಯದರ್ಶಿ ಎನ್. ಸುನಿಲ್ ಮುತ್ತಪ್ಪ ನಿರೂಪಿಸಿದರು. ಸಂಘದ ಉಪಾಧ್ಯಕ್ಷೆ ಪಿ. ಪದ್ಮ ಬೋಪಯ್ಯ ಅವರು ವಂದಿಸಿದರು.

ಸಿದ್ದರಾಮಯ್ಯ ಬದಲಾವಣೆ ಪ್ರಶ್ನೆಯೇ ಇಲ್ಲ



ಬೆಂಗಳೂರು, ಅ.18(ಕೆಎಂಶಿ)-ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಅವರನ್ನು ಬದಲಾವಣೆ ಮಾಡುವ ಪ್ರಶ್ನೆ ಎಲ್ಲಿದೆ? ಎಂದು ಇಂಧನ ಖಾತೆ ಸಚಿವ ಕೆ.ಜೆ. ಜಾರ್ಜ್ ಇಂದಿಲ್ಲಿ ಪ್ರಶ್ನಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ವರಿಷ್ಠರು ನಾಯಕತ್ವ ಬದಲಾವಣೆ ಎಂದಿದ್ದಾರೆಯೇ, ನಾವ್ಯಾರಾದರೂ ಬದಲಾವಣೆ ಆಗಬೇಕೆಂದು ಕೇಳಿದ್ದೇವೆಯೇ, ಇದೆಲ್ಲಾ ಬಿಜೆಪಿ ಮತ್ತು ಮಾಧ್ಯಮಗಳ ಸೃಷ್ಟಿ ಎಂದರು. ಪಕ್ಷದ ವರಿಷ್ಠರು ರಾಜಕೀಯ ನಿರ್ಧಾರಗಳನ್ನು ಕೈಗೊಳ್ಳುತ್ತಾರೆ. ಅಂತಹ ಸನ್ನಿವೇಶವೇ ಕರ್ನಾಟಕದಲ್ಲಿ ಉದ್ಭವ ಆಗಿಲ್ಲ ಅಂದ ಮೇಲೆ, ಸಿದ್ದರಾಮಯ್ಯ ಬದಲಾವಣೆ ಎಲ್ಲಿಂದ ಬರುತ್ತದೆ ಎಂದು ಮುಖ್ಯಮಂತ್ರಿ ಅವರ ಪರವಾಗಿ ಬಲವಾಗಿ ಸಮರ್ಥಿಸಿಕೊಂಡಿದ್ದಾರೆ.

ರಾಜ್ಯ ಗುತ್ತಿಗೆದಾರರ ಸಂಘ ಮಾಡಿರುವ ಕಮಿಷನ್ ಆರೋಪಕ್ಕೆ ದಾಖಲೆ ನೀಡಿ, ತನಿಖೆಗೆ ಆಗ್ರಹಿಸಲಿ ಎಂದು ಜಾರ್ಜ್ ತಿಳಿಸಿದರು. ನನ್ನ ಇಲಾಖೆ ಬಾಕಿ ಇಟ್ಟುಕೊಂಡಿಲ್ಲ, ಬೇರೆ ಯಾವುದಾದರೂ ಇಲಾಖೆಗಳಿಂದ ಬಾಕಿ ಬರಬೇಕಿದ್ದರೆ, ಸಂಬಂಧಪಟ್ಟ ಇಲಾಖೆ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಬೇಕು. ಯಾರದೋ ಒತ್ತಡಕ್ಕೆ ಮಣಿದು ಇಲ್ಲಸಲ್ಲದ ಆರೋಪ ಮಾಡುವುದು ಬೇಡ, ದಾಖಲೆ ನೀಡಲಿ ತನಿಖೆ ಮಾಡಿಸುತ್ತೇವೆ ಎಂದರು.

ಟೀ ಕುಡಿದು ಬರುವಷ್ಟರಲ್ಲಿ ಗೂಡ್ಸ್ ಆಟೋ ಕಳವು!

ಮೈಸೂರು, ಅ.18- ಚಾಲಕ ಟೀ ಕುಡಿದು ಬರುವಷ್ಟರಲ್ಲಿ ಗೂಡ್ಸ್ ಆಟೋವನ್ನು ಕದ್ದೊಯ್ದಿರುವ ಘಟನೆ ಮೈಸೂರಿನ ಬಂಡಿಪಾಳ್ಯದಲ್ಲಿ ನಡೆದಿದೆ. ನಂಜನಗೂಡು ತಾಲೂಕು ಹಾಡ್ಯ ಗ್ರಾಮದ ಹೆಚ್.ಎನ್.ಸಾಗರ್ ಅವರ ಗೂಡ್ಸ್ ಆಟೋ(ಕೆಎ 55-7727)ವನ್ನು ಹಾಡಹಗಲೇ ಖದೀಮರು ಕದ್ದೊಯ್ದಿದ್ದು, ಈ ಸಂಬಂಧ ಕೃಷ್ಣರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅ.10ರಂದು ಊರಿನಿಂದ ಟೊಮೋಟೋ ತುಂಬಿಕೊಂಡು ಬಂಡಿಪಾಳ್ಯದ ಎಪಿಎಂಸಿಯಲ್ಲಿ ಇಳಿಸಿದ ನಂತರ ಬೆಳಗ್ಗೆ 11.40ರ ವೇಳೆಯಲ್ಲಿ ಶಿವು ಟೀ ಸ್ಟಾಲ್ ಬಳಿಯ ಖಾಲಿ ಜಾಗದಲ್ಲಿ ಆಟೋ ನಿಲ್ಲಿಸಿ, ಟೀ ಕುಡಿಯಲು ಹೋಗಿದ್ದ. 20 ನಿಮಿಷದಲ್ಲಿ ವಾಪಸ್ ಬಂದಾಗ ಆಟೋ ಇರಲಿಲ್ಲ ಎಂದು ಸಾಗರ್ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಡಿ.7ಕ್ಕೆ ಶಿಕ್ಷಕರ ಅರ್ಹತಾ ಪರೀಕ್ಷೆ

ಬೆಂಗಳೂರು: ಡಿಸೆಂಬರ್ 7ರಂದು ಶಿಕ್ಷಕರ ಅರ್ಹತಾ ಪರೀಕ್ಷೆ ನಡೆಸಲು ಶಿಕ್ಷಣ ಇಲಾಖೆ ದಿನಾಂಕ ಘೋಷಣೆ ಮಾಡಿದೆ. ಈ ಸಂಬಂಧ ಶಾಲಾ ಶಿಕ್ಷಣ ಇಲಾಖೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿದೆ. ಡಿ.7ಕ್ಕೆ ಟಿಇಟಿ ಪರೀಕ್ಷೆ ನಡೆಸಲು ದಿನಾಂಕ ನಿಗದಿ ಮಾಡಿದ್ದು, ಡಿ.31ಕ್ಕೆ ಫಲಿತಾಂಶ ಪ್ರಕಟವಾಗಲಿದೆ. ಶಿಕ್ಷಕರ ಅರ್ಹತಾ ಪರೀಕ್ಷೆ ಕುರಿತ ಅಧಿಸೂಚನೆ ಹೊರಡಿಸಲಾಗುತ್ತಿದ್ದು, ಅಭ್ಯರ್ಥಿಗಳು ಅ.23ರಿಂದ ನ.09ರವರೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶದ ಮತ್ತು ಉಳಿದ ಶಿಕ್ಷಕರ ಹುದ್ದೆಗಳ ಭರ್ತಿಗೂ ಸಿಇಟಿ ಪರೀಕ್ಷೆಯ ಮೂಲಕ ಶೀಘ್ರದಲ್ಲೇ ಕ್ರಮ ಕೈಗೊಳ್ಳಲಾಗುವುದು ಎಂದು ಇಲಾಖೆ ಮಾಹಿತಿ ನೀಡಿದೆ.

ಇಂದಿನಿಂದ ಇಂಡೋ-ಆಸೀಸ್ ಏಕದಿನ ಸರಣಿ

ತಂಡಕ್ಕೆ ವಿರಾಟ್-ರೋಹಿತ್ ಪುನರಾಗಮನ

ಮೈಸೂರು, ಅ.18(ವಿವಿಹೆಚ್)- ಚಾಂಪಿಯನ್ಸ್ ಟ್ರೋಫಿ ಬಳಿಕ ಇದೇ ಮೊದಲ ಬಾರಿಗೆ ಟೀಂ ಇಂಡಿಯಾ ಏಕದಿನ ಪಂದ್ಯ ಆಡಲು ಸಜ್ಜಾಗಿದೆ. ನಾಳೆಯಿಂದ (ಅ.19) ಭಾರತ ಹಾಗೂ ಆಸ್ಟ್ರೇಲಿಯಾ ನಡುವಣ 3 ಏಕದಿನ ಹಾಗೂ 5 ಟಿ20 ಪಂದ್ಯಗಳ ಸರಣಿ ಆರಂಭವಾಗಲಿದ್ದು, ಇದಕ್ಕಾಗಿ ಟೀಂ ಇಂಡಿಯಾ ಆಸ್ಟ್ರೇಲಿಯಾ ಪ್ರವಾಸ ಕೈಗೊಂಡಿದೆ.

ಇತ್ತ ಟೆಸ್ಟ್ ಹಾಗೂ ಟಿ20 ಮಾದರಿಗೆ ವಿದಾಯ ಹೇಳಿರುವ ಟೀಂ ಇಂಡಿಯಾ ಮಾಜಿ ನಾಯಕ ರೋಹಿತ್ ಶರ್ಮಾ ಹಾಗೂ ವಿರಾಟ್ ಕೊಹ್ಲಿ ಐಸಿಸಿ ಚಾಂಪಿಯನ್ಸ್ ಟ್ರೋಫಿ ಬಳಿಕ ಇದೇ ಮೊದಲ ಬಾರಿಗೆ ಏಕದಿನ ಪಂದ್ಯಗಳಿಗಾಗಿ ಅಂಕಣಕ್ಕೆ ಇಳಿಯಲಿದ್ದಾರೆ.

ತವರಿನಂಗಳದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ 2ಟೆಸ್ಟ್ ಪಂದ್ಯಗಳನ್ನು ಕ್ಲೀನ್ ಸ್ವೀಪ್ ಮಾಡಿರುವ ಭಾರತ, ಅತಿಥೇಯ ಆಸ್ಟ್ರೇಲಿಯಾ ವಿರುದ್ಧ 3 ಏಕದಿನ ಪಂದ್ಯಗಳನ್ನು ಆಡಲಿದೆ.

ಮೊದಲ ಪಂದ್ಯ ಅ.19 ರಂದು ಪರ್ತ್ ಕ್ರೀಡಾಂಗಣದಲ್ಲಿ ಆಡಲಿದೆ. ಅ.23 ರಂದು ಅಡಿಲೇಡ್‌ನ ಓವಲ್ ಮೈದಾನದಲ್ಲಿ ಹಾಗೂ ಕೊನೆಯ ಏಕದಿನ ಪಂದ್ಯವನ್ನು ಸಿಡ್ನಿಯಲ್ಲಿ ಆಡಲಿದೆ. ಈ ತಂಡಕ್ಕೆ ಶುಬ್‌ಮನ್ ಗಿಲ್ ನಾಯಕರಾಗಿದ್ದಾರೆ. ನಾಯಕನಾಗಿ ಗಿಲ್ ಇದೇ ಮೊದಲ ಬಾರಿಗೆ ಏಕದಿನ ತಂಡವನ್ನು ಮುನ್ನಡೆಸಲಿದ್ದಾರೆ.



ಟ್ರೋಫಿಯೊಂದಿಗೆ ಆಸೀಸ್ ನಾಯಕ ಮಿಚೆಲ್ ಮಾರ್ಷ್ ಹಾಗೂ ಶುಬ್‌ಮನ್ ಗಿಲ್

ತಂಡದಲ್ಲಿ ಕನ್ನಡಿಗರಾದ ಕೆ.ಎಲ್. ರಾಹುಲ್ ಹಾಗೂ ಪ್ರಸಿದ್ಧ್ ಕೃಷ್ಣ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ. ವಿರಾಟ್ ಕೊಹ್ಲಿ, ರೋಹಿತ್ ಶರ್ಮಾರಂತಹ ಅನುಭವಿ ಬ್ಯಾಟರ್‌ಗಳಿದ್ದು, ತಂಡಕ್ಕೆ ಶ್ರೇಯಸ್ ಅಯ್ಯರ್ ಮರಳಿರುವುದು ಬ್ಯಾಟಿಂಗ್‌ಗೆ ದೊಡ್ಡ ಬಲ ತಂದುಕೊಟ್ಟಿದೆ.

ಅಕ್ಷರ್ ಪಟೇಲ್, ವಾಷಿಂಗ್‌ಟನ್ ಸುಂದರ್ ಹಾಗೂ ನಿತೀಶ್ ಕುಮಾರ್ ರೆಡ್ಡಿ ಆಲ್‌ರೌಂಡರ್ ವಿಭಾಗಕ್ಕೆ ಬಾರೀ ಪೈಪೋಟಿ ಒಡ್ಡಲಿದೆ. ಬೌಲಿಂಗ್ ವಿಭಾಗದಲ್ಲಿ ಅನುಭವಿ ಸಿರಾಜ್‌ಗೆ ಅರ್ಶ್‌ದೀಪ್ ಸಿಂಗ್ ಹಾಗೂ ಹರ್ಷಿತ್ ರಾಣಾ ಜೊತೆಯಾಗಲಿದ್ದಾರೆ. ಸ್ಪಿನ್ ವಿಭಾಗದಲ್ಲಿ ಕುಲ್ದೀಪ್ ಉತ್ತಮ ಪ್ರದರ್ಶನ ತೋರುವ ನಿರೀಕ್ಷೆಯಿದೆ.

ಇತ್ತ ಮಿಚೆಲ್ ಮಾರ್ಷ್ ನಾಯಕತ್ವದ ಆಸೀಸ್ ತಂಡದಲ್ಲಿ ಅನುಭವಿ ಬ್ಯಾಟರ್ ಲ್ಯಾಬುಷೇನ್, ಟ್ರಾವಿಸ್ ಹೆಡ್, ಮಿಚೆಲ್ ಸ್ಟಾರ್ಕ್, ಜೋಸ್ ಹೇಜಲ್‌ವುಡ್ ಇದ್ದು, ಭಾರತದ ಬ್ಯಾಟರ್ಸ್ ಹಾಗೂ ಆಸೀಸ್ ಬೌಲರ್ಸ್ ವಿರುದ್ಧ ಬಾರೀ ಪೈಪೋಟಿ ಇರಲಿದೆ.

ಭಾರತ ಹಾಗೂ ಆಸ್ಟ್ರೇಲಿಯಾ ನಡುವಣ 3 ಏಕದಿನ ಪಂದ್ಯಗಳು ಭಾರತೀಯ ಕಾಲಮಾನ ಬೆಳಿಗ್ಗೆ 9 ಗಂಟೆ ಆರಂಭವಾಗುತ್ತದೆ. ಈ ಪಂದ್ಯಗಳನ್ನು 'ಸ್ಟಾರ್‌ಸ್ಪೋರ್ಟ್ಸ್'ನಲ್ಲಿ ವೀಕ್ಷಣೆ ಮಾಡಬಹುದಾಗಿದ್ದು, 'ಜಿಯೋಸ್ಟಾರ್'ನಲ್ಲಿ ಲೈವ್‌ಸ್ಟ್ರೀಮಿಂಗ್ ವೀಕ್ಷಣೆ ಇರಲಿದೆ. ಜೊತೆಗೆ 'ಡಿಡಿ ಸ್ಪೋರ್ಟ್ಸ್' ಚಾನೆಲ್‌ನಲ್ಲಿ ಉಚಿತವಾಗಿ ವೀಕ್ಷಣೆ ಮಾಡಬಹುದಾಗಿದೆ.

ವಿರಾಟ್ ದಾಖಲೆ: ಅಂತರಾಷ್ಟ್ರೀಯ ಏಕದಿನದಲ್ಲಿ ಅತಿಹೆಚ್ಚು ರನ್ ಕಲೆಹಾಕಿದ ಆಟಗಾರರ ಪೈಕಿ ಎರಡನೇ ಸ್ಥಾನಕ್ಕೇರಲು ವಿರಾಟ್‌ಗೆ 54 ರನ್ ಗಳ ಅವಶ್ಯಕತೆಯಿದೆ. ಸದ್ಯ ವಿರಾಟ್ 14,181 ರನ್ ಕಲೆಹಾಕಿ ಮೂರನೇ ಸ್ಥಾನದಲ್ಲಿದ್ದಾರೆ. ಮೊದಲ ಸ್ಥಾನದಲ್ಲಿ ಸಚಿನ್ ತೆಂಡುಲ್ಕರ್ 18,426 ರನ್, ಕುಮಾರ್ ಸಂಗಕ್ಕಾರ 14,234 ಎರಡನೇ ಸ್ಥಾನದಲಿದ್ದಾರೆ.

ಇನ್ನು ಏಕದಿನ ಮಾದರಿಯಲ್ಲಿ 51 ಶತಕ ಸಿಡಿಸಿರುವ ವಿರಾಟ್ ಸಚಿನ್‌ರೊಂದಿಗೆ ಜಂಟಿ ಮೊದಲ ಸ್ಥಾನದಲ್ಲಿದ್ದು, ಈ ಟೂರ್ನಿಯಲ್ಲಿ ಒಂದು ಶತಕ ದಾಖಲಿಸಿದರೇ ವಿಶ್ವದಲ್ಲೇ ಒಂದು ಮಾದರಿಯಲ್ಲಿ ಅತೀಹೆಚ್ಚು ಶತಕ ಗಳಿಸಿದ ಪೈಕಿಯಲ್ಲಿ ಅಗ್ರ ಆಟಗಾರರಾಗಲಿದ್ದಾರೆ.

ಭಾರತ ಏಕದಿನ ತಂಡ

ಶುಬ್‌ಮನ್ ಗಿಲ್ (ನಾಯಕ), ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್ (ವಿ.ಕೀ), ಯಶಸ್ವಿ ಜೈಸ್ವಾಲ್, ಅಕ್ಷರ್ ಪಟೇಲ್, ಕುಲ್ದೀಪ್ ಯಾದವ್, ಹರ್ಷಿತ್ ರಾಣಾ, ಅರ್ಶದೀಪ್ ಸಿಂಗ್, ಮೊಹಮದ್ ಸಿರಾಜ್, ವಾಷಿಂಗ್‌ಟನ್ ಸುಂದರ್, ನಿತೀಶ್ ಕುಮಾರ್ ರೆಡ್ಡಿ ಧ್ರುವ್ ಜುರೆಲ್ ಹಾಗೂ ಪ್ರಸಿದ್ಧ್ ಕೃಷ್ಣ.

ಇಂಡೋ-ಆಸೀಸ್ ಏಕದಿನ ಸರಣಿ ವೇಳಾಪಟ್ಟಿ

ಮೊದಲ ಪಂದ್ಯ: ಅಕ್ಟೋಬರ್ 19, ಬೆಳಿಗ್ಗೆ 9 ಗಂಟೆ, (ಪರ್ತ್)
ಎರಡನೇ ಪಂದ್ಯ: ಅಕ್ಟೋಬರ್ 23, ಬೆಳಿಗ್ಗೆ 9 ಗಂಟೆ, (ಅಡಿಲೇಡ್)
ಮೂರನೇ ಪಂದ್ಯ: ಅಕ್ಟೋಬರ್ 25, ಬೆಳಿಗ್ಗೆ 9 ಗಂಟೆ, (ಸಿಡ್ನಿ)

ಟಿ20 ಸರಣಿ ವೇಳಾಪಟ್ಟಿ

ಮೊದಲ ಪಂದ್ಯ: ಅಕ್ಟೋಬರ್ 29, ಮಧ್ಯಾಹ್ನ 1.45, (ಕ್ಯಾನ್‌ಬೆರಾ)
ಎರಡನೇ ಪಂದ್ಯ: ಅಕ್ಟೋಬರ್ 31, ಮಧ್ಯಾಹ್ನ 1.45, (ಮೆಲ್ಬೋರ್ನ್)
ಮೂರನೇ ಪಂದ್ಯ: ನವೆಂಬರ್ 2, ಮಧ್ಯಾಹ್ನ 1.45, (ಹೋಬಾರ್ಟ್)
ನಾಲ್ಕನೇ ಪಂದ್ಯ: ನವೆಂಬರ್ 6, ಮಧ್ಯಾಹ್ನ 1.45, (ಗೋಲ್ಡ್ ಕೋಸ್ಟ್)
ಐದನೇ ಪಂದ್ಯ: ನವೆಂಬರ್ 8, ಮಧ್ಯಾಹ್ನ 1.45, (ಬ್ರಿಸ್ಬೇನ್)

ನಕ್ಕರೆ ಅದೇ ಸ್ವರ್ಗ

ಹೆಂಡತಿ (ತನ್ನ ಗಂಡನಿಗೆ) : ನಿಮಗೆ ಎಷ್ಟು ಸಾರಿ ಹೇಳೋದು, ಕೆಲಸ ಮಾಡುವಾಗ ಮುತ್ತು ಕೊಡಬೇಡಿ ಅಂತ!

ಕೆಲಸದವಳು : ಹೌದು ಅಮ್ಮಾವ್ರೇ... ಇವರಿಗೆ ಎಷ್ಟು ಹೇಳಿದ್ರು ಅಷ್ಟೇನೆ. ನನಗಂತೂ ಹೇಳಿ ಹೇಳಿ ಸಾಕಾಗಿದೆ!!

ಮೈಸೂರು ಮಿತ್ರ

ಭಾನುವಾರ, 19 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ನಿಮ್ಮಿಂದ ಮಹಾನ್ ಕೆಲಸಗಳನ್ನು ಮಾಡಲಾಗದಿದ್ದರೆ, ಸಣ್ಣ ಸಣ್ಣ ಕೆಲಸಗಳನ್ನು ಮಹಾನ್ ರೀತಿಯಲ್ಲಿ ಮಾಡಿರಿ. –ನೆಪೋಲಿಯನ್ ಹಿಲ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಚಿಂತೆ ಮಾಡಿದರೆ ಸಂತೆ ಸಾಗೀತೆ?

ನಿಮ್ಮ ಪತ್ರಗಳು

ಡಾ. ಸುಧಾಮೂರ್ತಿಯವರಿಗೆ ಸ್ವವಿವೇಚನೆಯ ಸ್ವಾತಂತ್ರ್ಯವಿಲ್ಲವೇ?

ಮಾನ್ಯರೆ,

ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ನಾರಾಯಣಮೂರ್ತಿ ಮತ್ತು ಸುಧಾಮೂರ್ತಿಯವರು ಮಾಹಿತಿ ನೀಡಲು ನಿರಾಕರಿಸಿ, ಸ್ವಯಂ ದೃಢೀಕರಣ ಪತ್ರ ನೀಡಿರುವುದಕ್ಕೆ ಪ್ರತಿಯಾಗಿ, ಹಲವು ಮಂದಿ ಅದರಲ್ಲೂ ಕಾಂಗ್ರೆಸ್ ಪಕ್ಷಕ್ಕೆ ಸೇರಿದ ನಾಯಕರು ಹಲವು ರೀತಿಯಲ್ಲಿ ಅವರ ನಡೆಯನ್ನು ವಿರೋಧಿಸಿ ಕೆಲವರು ನಯವಾಗಿ ಇನ್ನೂ ಕೆಲವರು ಕಟುವಾಗಿ ಹೇಳಿಕೆ ನೀಡುತ್ತಿದ್ದಾರೆ. ಉಚ್ಚ ನ್ಯಾಯಾಲಯವು ತಿಳಿಸಿರುವಂತೆ ಮಾಹಿತಿ ಸಂಗ್ರಹಿಸಲು ಅಧಿಕಾರಿಗಳು ಬಲವಂತ ಅಥವಾ ಒತ್ತಡ ಹೇರಬಾರದು. ಸ್ವಯಂಪ್ರೇರಣೆಯಿಂದ ನೀಡಿದರಷ್ಟೇ ಮಾಹಿತಿ ಪಡೆಯಬೇಕು. ಈ ಅವಕಾಶದಂತೆ ಅವರ ವೈಯಕ್ತಿಕ ದತ್ತಾಂಶದ ದೃಷ್ಟಿಯಿಂದಲೋ ಅಥವಾ ಯಾವುದೋ ಕಾರಣದಿಂದ ಅವರು ಮಾಹಿತಿ ನೀಡದಿರುವುದು ಅವರ ಸ್ವವಿವೇಚನೆಗೆ ಸಂಬಂಧಿಸಿದ್ದಾಗಿರುತ್ತದೆ. ನ್ಯಾಯಾಲಯವೇ ಅವಕಾಶ ಕೊಟ್ಟಿರುವಾಗ ಅವರ ವೈಯಕ್ತಿಕ ನಿರ್ಧಾರಕ್ಕೆ ಈ ಕಾಂಗ್ರೆಸ್ ಮಂದಿಯ ಆಕ್ಷೇಪವೇಕೆ? ಸರ್ಕಾರದ ಭಾಗವಾಗಿರುವ ಉಪಮುಖ್ಯಮಂತ್ರಿಗಳೇ ಪ್ರಶ್ನೆಗಳಿಗೆ ಅಸಹನೆ ವ್ಯಕ್ತಪಡಿಸಿರುವುದೂ ಕೂಡಾ ವರದಿಯಾಗಿದೆ. ಇದನ್ನು ಏಕೆ ಅವರ ಪಕ್ಷದವರು ವಿರೋಧಿಸಿಲ್ಲ. ನ್ಯಾಯಾಲಯದ ಸೂಚನೆಯ ಹಿನ್ನೆಲೆಯಲ್ಲಿ ಆಯೋಗವು ಕೂಡಾ ಪತ್ರಿಕಾ ಪ್ರಕಟಣೆ ನೀಡಿ ಸಮೀಕ್ಷೆಯಲ್ಲಿ ಭಾಗವಹಿಸುವುದು ಜನರ ಸ್ವಯಂ ಇಚ್ಛೆಗೆ ಬಿಡಲಾಗಿದೆಯೆಂದೂ ಹಾಗೂ ಮಾಹಿತಿಯನ್ನು ನೀಡುವ ಬಗ್ಗೆ ಆಯೋಗವು ಒತ್ತಾಯ ಮಾಡುತ್ತಿಲ್ಲವೆಂದು ಸ್ಪಷ್ಟೀಕರಿಸಿ, ಸಾರ್ವಜನಿಕರ ಗಮನಕ್ಕೆ ತಂದಿರುತ್ತದೆ. ಇದೆಲ್ಲದರ ಹಿನ್ನೆಲೆಯಲ್ಲಿ ನಾರಾಯಣ ಮೂರ್ತಿಯವರು ನ್ಯಾಯಲಯ ಮತ್ತು ಸರ್ಕಾರ ನೀಡಿರುವ ಅವಕಾಶದಂತೆ ಮಾಹಿತಿ ನೀಡಲು ನಿರಾಕರಿಸಿರುವುದು ಕಾನೂನು ವಿರೋಧಿಯಲ್ಲದಿದ್ದರೂ, ತಾವು ಬೃಹಸ್ಪತಿಗಳಾದುದರಿಂದಲೇ ತಮ್ಮ ಸ್ವಸಾಮರ್ಥ್ಯದಿಂದ ಕಷ್ಟಪಟ್ಟು ಮೇಲೆ ಬಂದು ಈ ದೇಶಕ್ಕೆ ನೀಡಿರುವ ಕೊಡುಗೆಯನ್ನು ಮತ್ತು ಅವರ ಸಮಾಜಸೇವೆಯನ್ನು ಮರೆತು ಅವರ ಸ್ವವಿವೇಚನಾ ಸ್ವಾತಂತ್ರ್ಯವನ್ನು ಪ್ರಶ್ನಿಸುತ್ತಿರುವುದು ಎಷ್ಟು ಸರಿ? ಅಷ್ಟಕ್ಕೂ ಸ್ವತಃ ಆಯೋಗವೇ ಮಾಹಿತಿ ನೀಡುವವರ ಪರವಾಗಿ ಸ್ವಯಂ ಪ್ರೇರಣೆಯಿಂದ ಮಾಹಿತಿ ನೀಡುತ್ತಿರುವುದಾಗಿ ಹಾಗೂ ನೀಡುತ್ತಿಲ್ಲದಿರುವುದಾಗಿ ಘೋಷಣೆಗಳನ್ನು ಸಿದ್ಧಪಡಿಸಿ ಜನರಿಂದ ಸಹಿ ಪಡೆಯುತ್ತಿದ್ದು ನಿರಾಕರಿಸುವ ಘೋಷಣೆಗೆ ಇವರು ಸಹಿ ಮಾಡಿರುತ್ತಾರಷ್ಟೇ. ಇದನ್ನೇ ಮಹಾನ್ ಅಪರಾಧವಾಗಿ ಬಿಂಬಿಸುತ್ತಿದ್ದಾರೆ. ಈ ರೀತಿ ಬಹಳಷ್ಟು ಜನ ನಿರಾಕರಿಸಿರುವುದು ಕಂಡುಬಂದಿರುತ್ತದೆ. ಸಂಗ್ರಹಿಸಲಾದ ಮಾಹಿತಿಯನ್ನು ಸಂಪೂರ್ಣ ಗೌಪ್ಯವಾಗಿಡಬೇಕು ಎಂದು ನ್ಯಾಯಾಲಯ ಸೂಚಿಸಿದೆ. ಸರ್ಕಾರವು ಈ ಬಗ್ಗೆ ಪ್ರಮಾಣ ಪತ್ರ ನೀಡಿದೆ. ಆದಗ್ಯೂ ಕೂಡ ಅವರ ಮಾಹಿತಿ ನೀಡಲು ನಿರಾಕರಣೆ ಸ್ವಯಂ ದೃಢೀಕರಣ ಪತ್ರವನ್ನು ಬಹಿರಂಗ ಪಡಿಸಿರುವುದು ನ್ಯಾಯಾಲಯದ ಸೂಚನೆ ಮತ್ತು ಸರ್ಕಾರದ ಪ್ರಮಾಣ ಪತ್ರದ ಉಲ್ಲಂಘನೆಯಲ್ಲವೇ? ಇದರ ಗೌಪ್ಯತೆ ಕಾಪಾಡಲು ವಿಫಲವಾಗಿರುವ ಆಯೋಗ ದತ್ತಾಂಶದ ಮಾಹಿತಿ ಗೌಪ್ಯತೆ ಕಾಪಾಡುತ್ತದೆ ಎಂಬುದಕ್ಕೆ ಗ್ಯಾರಂಟಿ ಏನು?

–ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು.

ಅನಧಿಕೃತ ಫುಟ್‌ಪಾತ್ ವ್ಯಾಪಾರಿಗಳನ್ನು ತೆರವುಗೊಳಿಸಿ

ಮಾನ್ಯರೆ,

ಮೈಸೂರು ನಗರಪಾಲಿಕೆಯ ಆಯುಕ್ತರು ಅಂಗಡಿ, ಮುಂಗಟ್ಟು, ಹೋಟೆಲುಗಳು, ವಾಣಿಜ್ಯ, ಮಳಿಗೆಗಳು, ಉದ್ದಿಮೆಗಳ ನಾಮಫಲಕಗಳಲ್ಲಿ ಶೇ 60 ರಷ್ಟು ಕನ್ನಡ ಬಳಕೆಗೆ ಆದೇಶ ಮಾಡಿರುವುದು ಸ್ವಾಗತಾರ್ಹ. ಹೋಟೆಲುಗಳು ಸೇರಿದಂತೆ ವಾಣಿಜ್ಯೋದ್ಯಮಿಗಳು ಚಾಚೂ ತಪ್ಪದೇ ಕೂಡಲೇ ಪಾಲಿಸಬೇಕು. ಇದು ಸರಕಾರ ಆದೇಶ ಸಹ ಆಗಿರುತ್ತದೆ. ನಮ್ಮ ರಾಜ್ಯದ ಕನ್ನಡ ಬಾಷೆಯನ್ನು ನಾವು ಹೆಚ್ಚು ಪ್ರೀತಿಯಿಂದ ಪ್ರೋತ್ಸಾಹಿಸಬೇಕು. ನಾಮಫಲಕಗಳನ್ನು ಶೇ60 ರಷ್ಟು ಕನ್ನಡ ಇರುವಂತೆ ಬದಲಾವಣೆ ಮಾಡಬೇಕು. ನಮ್ಮ ವ್ಯಾಪಾರಿಗಳು ಪ್ರಥಮ ಆದ್ಯತೆ ಕನ್ನಡಕ್ಕೆ ನೀಡಿ ಬೆಂಬಲಿಸಬೇಕು. ಅದೇ ರೀತಿ ಪಾಲಿಕೆ ಆಯುಕ್ತರು ಸಹ ಕಾರ್ಯೋನ್ಮುಖರಾಗಿ ಅನಧಿಕೃತ ಫುಟ್‌ಪಾತ್ ವ್ಯಾಪಾರಿಗಳನ್ನು ಕೂಡಲೇ ತೆರವುಗೊಳಿಸಬೇಕು. ಈ ಬಗ್ಗೆ ಅನಧಿಕೃತ ವ್ಯಾಪಾರಿಗಳನ್ನು ತೆರವುಗೊಳಿಸಿದರೆ, MCC ಲೈಸೆನ್ಸ್ ಪಡೆದು ಹಲವಾರು ತೆರಿಗೆಗಳು ಪಾವತಿಸುವವರಿಗೆ ನ್ಯಾಯ ಸಿಗುವಂತಾಗುತ್ತದೆ. ನಮ್ಮ ಪ್ರವಾಸಿಗರ ನಗರ ಪ್ರವಾಸೋದ್ಯಮಕ್ಕೆ ಆದ್ಯತೆ ಸಿಗುವುದು. ಆಗ ಅತ್ಯುತ್ತಮನಗರವೆನಿಸಿಕೊಳ್ಳುವಲ್ಲಿ ಸಂದೇಹವಿಲ್ಲ. ನಗರಪಾಲಿಕೆ ಆಯುಕ್ತರು ಈ ಅನಧಿಕೃತ ಫುಟ್‌ಪಾತ್ ಅಂಗಡಿಗಳ ತೆರವು ಬಗ್ಗೆ ಕ್ರಮ ಕೈಗೊಳ್ಳಬೇಕು. ಕನ್ನಡ ನಾಮಫಲಕಕ್ಕೂ ಬೆಂಬಲ ಸಿಗುತ್ತದೆ.

–ಸಿ. ನಾರಾಯಣಗೌಡ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ, ಮೈಸೂರು.

ವಾಟರ್‌ಮ್ಯಾನ್ ಆತ್ಮಹತ್ಯೆ ನಿಜಕ್ಕೂ ಕಳವಳಕಾರಿ

ಮಾನ್ಯರೆ,

ಚಾಮರಾಜನಗರ ಜಿಲ್ಲೆಯ ಹೊಂಗನೂರು ಗ್ರಾಮದ ವಾಟರ್‌ಮ್ಯಾನ್ ಚಿಕ್ಕೂಸನಾಯಕ ಆತ್ಮಹತ್ಯೆ ನಿಜಕ್ಕೂ ಕಳವಳಕಾರಿ ಹಾಗೂ ದುರದೃಷ್ಟಕರ ಸಂಗತಿಯಾಗಿದೆ. (ಮೈಮಿ.18.10.2025). ಪ್ರತಿ ತಿಂಗಳೂ ಬರುವ ವೇತನ ಒಂದೆರಡು ದಿನ ತಡವಾದರೆ ಕಸಿವಿಸಿಯಾಗುವ, ವಿಚಲಿತರಾಗುವ ನಮ್ಮಂತವರೇ ಇರುವಾಗ 27 ತಿಂಗಳುಗಳಿಂದ ವೇತನ ಬಾರದೇ ಸಂಸಾರ ದೂಡುವ ಎಂಥಹ ವಿಷಮ ಪರಿಸ್ಥಿತಿ ಅವರಿಗೆ ಎದುರಾಗಿರಬಹುದು. ತನ್ನೆಲ್ಲಾ ಪ್ರಯತ್ನಗಳೂ ಮೇಲಧಿಕಾರಿಗಳಲ್ಲಿ ಅಲವತ್ತುಕೊಂಡಾಗ್ಯೂ, ಯಾರೊಬ್ಬರೂ ಅವರಿಗೆ ನೆರವು ನೀಡದೇ, ಕಡೆಗೆ ತನ್ನ ಜೀವನಕ್ಕೇ ಅಂತ್ಯ ತಂದುಕೊಂಡ ಅವರ ಮನಸ್ಥಿತಿ ಎಷ್ಟು ಕೆಟ್ಟಿರಬಹುದು. ಇಂದು ಹಲವೆಡೆ ಪ್ರತಿಭಟನೆಗಳ ನಂತರ ಜಿಲ್ಲಾಡಳಿತ ಅಷ್ಟೋ ಇಷ್ಟೋ ಪರಿಹಾರವೋ ಏನೋ ನೀಡಿ ಕೈ ತೊಳೆದುಕೊಂಡರೂ, ಮನೆಯ ಹಿರಿಯ ಯಜಮಾನ ಇದ್ದಾಗ, ಒಂದು ಹೊತ್ತು ಗಂಜಿಯೋ ಅಂಬಲಿಯೋ ತಿಂದುಂಡುಕೊಂಡಿದ್ದ ನೆಮ್ಮದಿ ಇದೀಗ ಆ ಕುಟುಂಬದಲ್ಲಿರುವುದಿಲ್ಲ. ಚಿಕ್ಕೂಸನಾಯಕರ ಸಾವಿನೊಂದಿಗೆ ಕುಟುಂಬದವರ ಕನಸುಗಳು ಕಮರಿ ಹೋಗಬಹುದು. ಇಂಥಹ ಪ್ರಕರಣಗಳು ಆತ್ಮಹತ್ಯೆ ಎಂದೇ ದಾಖಲಾದರೂ, ವಾಸ್ತವವಾಗಿ ಆತ್ಮಹತ್ಯೆಗೆ ಇಂಬು ಕೊಡುವ ಹಿಂದಿನ ಕೈಗಳು ಕಾಣುವುದೇ ಇಲ್ಲ ಮತ್ತು ಅವರಿಗೆ ಯಾವುದೇ ಶಿಕ್ಷೆಯೂ ಆಗುವುದಿಲ್ಲ. ಒಂದೇ ಎರಡೇ ಹತ್ತೇ ಹದಿನೈದೇ, ಬರೋಬ್ಬರಿ ಇಪ್ಪತ್ತೇಳು ತಿಂಗಳು ಪಗಾರ ನೀಡದೆ ಸತಾಯಿಸಿದ ಬಗ್ಗೆ ತನಿಖೆಯಾಗಲೇ ಬೇಕು. ಎಲ್ಲಾದಕ್ಕೂ ಪರಿಹಾರವಿರುತ್ತದೆ. ಆದರೆ ಮಾಡುವ ಮನಸ್ಸಿರಬೇಕಷ್ಟೆ. ಕೆಲವರಿಗೆ ಮನಸ್ಸಿದ್ದರೂ, ಮೇಲಧಿಕಾರಿಗಳ ಭಯ. ಮತ್ತೆ ಕೆಲವರು ಅದನ್ನೇ ಹಿಡಿದು ಹಣ ಮಾಡಲೂ ಬಹುದು. ಒಟ್ಟಾರೆ ಇಂತಹ ಪ್ರಕರಣಗಳಲ್ಲಿ ಬಹುತೇಕ ಬಡವರೇ, ಅಮಾಯಕರೇ ಬಲಿಯಾಗುತ್ತಿರುವುದು ನಿಜಕ್ಕೂ ದುರ್ದೈವದ ಸಂಗತಿ. ಇನ್ನು ಮುಂದಾದರೂ ಇಂತಹ ಪ್ರಕರಣಗಳು ಮರುಕಳಿಸದಿರಲಿ ಹಾಗೂ ಅಧಿಕಾರಿಗಳು ಮಾನವೀಯತೆ ಪ್ರವೃತ್ತಿ ಪ್ರದರ್ಶಿಸಲಿ ಎಂಬುದೇ ಎಲ್ಲರ ಆಶಯವಷ್ಟೆ.

–ವಿಜಯ್ ಹೆಮ್ಮಿಗೆ, ಮೈಸೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ


ಮನಸ್ಸು ಹಿಡಿತದಲ್ಲಿದ್ದರೆ ಸನ್ಮಾರ್ಗ...!

ನಾವು ಬದುಕಿದ್ದೇವೆ ಎನ್ನಲು ಆಧಾರ ಏನು? ಇದೇನು ಹೀಗಂತೀರಿ? ಉಸಿರಾಡುತ್ತಿದ್ದೇವಲ್ಲ! ಅದಕ್ಕಿಂತ ಸಾಕ್ಷಿ ಬೇಕೆ? ಅಂದಿರಾ? ನಿಜ. ನಾವು ಉಸಿರಾಡುತ್ತಿರುವುದರಿಂದ ಬದುಕಿದ್ದೇವೆ ಎಂದು ಖಂಡಿತಾ ಹೇಳಬಹುದು. ಉಸಿರಿರುವ ತನಕ ಇದು 'ನಾನು–ನೀವು' ಎಂದು ಕರೆಸಿಕೊಳ್ಳುತ್ತದೆ. ಉಸಿರು ನಿಂತ ಮರುಕ್ಷಣದಿಂದ ಅದು ಕೇವಲ 'ದೇಹ' ಆಗಿಬಿಡುತ್ತದೆ. ಭಕ್ತ ಕುಂಬಾರ ಹೇಳಿದಂತೆ 'ಮಾನವ ದೇಹವು ಮೂಳೆ ಮಾಂಸದ ತಡಿಕೆ' ಎಂಬ ಆಧ್ಯಾತ್ಮಿಕ ವಿಶ್ಲೇಷಣೆಯನ್ನು ನಾನು ಕೊಡಲು ಹೊರಟಿಲ್ಲ. ಬದಲಿಗೆ ಈ ದೇಹವನ್ನು ಕುರಿತ ನನ್ನ ಅನಿಸಿಕೆಗಳನ್ನು ನಿಮ್ಮೊಡನೆ ಹಂಚಿಕೊಳ್ಳಲು ಬಯಸಿದ್ದೇನೆ.

ಈ ಬದುಕು ಎನ್ನುವುದು ಆ ಭಗವಂತ ನೀಡಿರುವ ಭಿಕ್ಷೆ ಎಂಬುದೇ ನನ್ನ ಭಾವನೆ. ಯಾವುದೋ ಉದ್ದೇಶದಿಂದಲೇ ನಮಗೆ ಇದು ಕೊಡಲ್ಪಟ್ಟಿದೆ. ಅದನ್ನು ಅರಿತು, ಸರಿಯಾದ ಮಾರ್ಗದಲ್ಲಿ, ಸತ್ಯ, ಕರುಣೆ, ಪ್ರಾಮಾಣಿಕತೆ ಮುಂತಾದ ಮೌಲ್ಯಗಳನ್ನು ಅಳವಡಿಸಿಕೊಂಡು ಇತರರಿಗೆ ಕಿಂಚಿತ್ತಾದರೂ ಉಪಯೋಗವಾಗುವಂತೆ, ಕೊನೆಯ ಪಕ್ಷ ಬೇರೆಯವರಿಗೆ ತೊಂದರೆ ಮಾಡದೆ, ಕೆಡುಕು ಮಾಡದೆ, ಸನ್ಮಾರ್ಗದಲ್ಲಿ ಕಳೆದರೆ, ಸಮಾಜಕ್ಕೆ ಎಷ್ಟೋ ಉಪಕಾರವಾದೀತು. ಇದೆಲ್ಲವನ್ನೂ ಸಾಧಿಸಲು ನಮಗೆ ಆ ದೇವರು ಕೊಟ್ಟ ವರವೇ ಈ ದೇಹ. ನಮ್ಮ ಬದುಕಿನ ಗುರಿಯನ್ನು ಸಾಧಿಸಲು, ತಲುಪಲು, ಇದನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವುದು ನಮ್ಮ ಆದ್ಯ ಕರ್ತವ್ಯಗಳಲ್ಲಿ ಒಂದು ಅಲ್ಲವೇ. ಈ ದೇಹ ಆರೋಗ್ಯವಾಗಿದ್ದರೆ ತಾನೆ ನಮ್ಮ ಕೆಲಸ, ಕರ್ತವ್ಯವನ್ನು ನಿಭಾಯಿಸಲು ಸಾಧ್ಯವಾಗುವುದು.

ನಮ್ಮ ದೇಹವನ್ನು ನೀಡಿದ ಭಗವಂತ ಅದರೊಳಗೆ ನಾನಾ ಆಮಿಷಗಳಿಗೆ ಬಲಿಯಾಗಬಲ್ಲ ಅಂಗಗಳನ್ನೂ, ಅಂದರೆ ಪಂಚೇಂದ್ರಿಯ ಮುಂತಾದ ಕಠಿಣ ಪರೀಕ್ಷಾ ಸಂದರ್ಭಗಳನ್ನು ಉಂಟುಮಾಡುವ ಅವಯವಗಳನ್ನು ಕೊಟ್ಟು, ನೋಡೋಣ, ಈ ಮನುಷ್ಯ ಇದನ್ನೆಲ್ಲ ಹೇಗೆ ಗೆದ್ದು ಬರುತ್ತಾನೆ ಎಂಬುದನ್ನು ನೋಡುತ್ತಾ ಒಳಗೊಳಗೇ ನಗುತ್ತಾ ಕುಳಿತ. ಚಪಲಚಿತ್ತ ಕೋತಿಯಂತಹ ಮನಸ್ಸನ್ನು ಬೇರೆ ಕೊಟ್ಟಿದ್ದಾನೆ. ಯಾವುದನ್ನು ಮಾಡಬಾರದೋ, ನೋಡ ಬಾರದೋ, ಅಂತಹುದರ ಕಡೆಗೇ ಎಳೆಯುತ್ತದೆ ಮನಸ್ಸು. ಅದನ್ನು ನಿಗ್ರಹಿಸುವ ಶಕ್ತಿ ಒತ್ತಟ್ಟಿಗಿರಲಿ, ನಿಗ್ರಹಿಸಬೇಕು ಎಂಬ ತಿಳುವಳಿಕೆ ಯಾದರೂ ನಮಗೆ ಇರಬೇಕಲ್ಲವೆ. ಮೊದಲೇ ಹೇಳಿದಂತೆ ಮನವೆಂಬ ಮರ್ಕಟನ ಕೈಯಲ್ಲಿ ಸಿಕ್ಕ ಬಡ, ಪಾಪದ ಮನುಜನ ಅವಸ್ಥೆ ಏನಾಗಿರಬೇಡ! ಸಕ್ಕರೆ ಖಾಯಿಲೆ ಉಳ್ಳವರಿಗೇ ಸಿಹಿ ತಿನ್ನಬೇಕೆಂಬ ಚಪಲ ಜಾಸ್ತಿಯಾಗಿರುತ್ತದೆ ಎಂಬುದನ್ನು ಗಮನಿಸಿದ್ದೀರಾ? ಕೊಲೆಸ್ಟ್ರಾಲ್ ಹೆಚ್ಚಾದಾಗ ಕೊಬ್ಬಿನ ಪದಾರ್ಥಗಳ ಮೇಲಿನ ವ್ಯಾಮೋಹ ಧುತ್ತನೆ ಹೆಚ್ಚಾಗುವುದನ್ನು ನೋಡಿದ್ದೀರಾ?

ಹದಿಹರೆಯದಲ್ಲಿ ಕುತೂಹಲಕ್ಕೋ ಶೋಕಿಗೋ ಶುರು ಹಚ್ಚಿಕೊಂಡ ಧೂಮಪಾನ ಚಟವು, ಕ್ಯಾನ್ಸರಿಗೆ ದಾರಿ ಮಾಡಿಕೊಡುತ್ತದೆ ಎಂಬ ಜಾಹಿರಾತನ್ನು ಸಾವಿರಾರು ಬಾರಿ ನೋಡಿದರೂ ಕಡಿಮೆ ಮಾಡಿಕೊಳ್ಳಲು ಆಗದೆ ಒದ್ದಾಡುವವರು ಅದೆಷ್ಟು ಮಂದಿ ಈ ಭಯಂಕರ ಸತ್ಯವನ್ನು ಎಲ್ಲರಿಗಿಂತ ಚೆನ್ನಾಗಿ ಬಲ್ಲವರು ವೈದ್ಯರು. ಅವರ ಕೈಯಲ್ಲೇ ಉರಿಯುವ ಸಿಗರೇಟನ್ನು ನೋಡಿದಾಗ ಇದನ್ನು ಏನೆಂದು ಕರೆಯಬೇಕೆಂದು ತಿಳಿಯದೆ ಒದ್ದಾಡಿದ್ದಿದೆ. ನಮ್ಮ ದೇಹವನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ಪ್ರತಿನಿತ್ಯ ವ್ಯಾಯಾಮ ಮಾಡುವುದು ಅತ್ಯಗತ್ಯ ಎಂಬ ಮಾತ ನ್ನಂತೂ ಕೇಳುತ್ತಲೇ ಇರುತ್ತೇವೆ. ಅದಕ್ಕಾಗಿ ನಾನಾ ರೀತಿಯ ಜಿಮ್‌ಗಳು, ಯೋಗ ತರಬೇತಿ ನೀಡುವ ಕೇಂದ್ರಗಳು, ಸಂಗೀತ ದೊಡನೆ ಹೆಜ್ಜೆ ಹಾಕುತ್ತಾ ದೇಹಕ್ಕೆ ವ್ಯಾಯಾಮ ಒದಗಿಸುವ ಆಕರ್ಷಕ ಕೇಂದ್ರಗಳು, ಅಷ್ಟೇ ಏಕೆ ಪುಕ್ಕಟೆಯಾಗಿ ಕಲಿಸುವ ಶಿಕ್ಷಕರೂ ಇದ್ದಾರೆ. ಆದರೂ ವ್ಯಾಯಾಮ ಮಾಡದಿರುವುದಕ್ಕೆ ಸಾವಿರ ಕಾರಣಗಳನ್ನು ನೀಡಬಲ್ಲ ಶಕ್ತಿವಂತರು ನಾವು.



> 66 ಬದುಕನ್ನು ನಾವು ನೋಡುವ ದೃಷ್ಟಿಕೋನವನ್ನು ಸ್ವಲ್ಪ ಬದಲಿಸಿಕೊಂಡರೆ ಸಾಕು, ಯಾವುದೂ ಅಸಾಧ್ಯವಲ್ಲ ಎಂಬುದು ನಿಮ್ಮ ಅನುಭವಕ್ಕೇ ಬರುತ್ತದೆ. ಬದುಕು ಎಂಬುದು ಕೇವಲ ತಿನ್ನಲು, ಕುಡಿಯಲು, ಮಜಾ ಮಾಡಲು ಇರುವುದಲ್ಲ. ಅದಕ್ಕೂ ಮೀರಿದುದು ಇದೆ. ಅದು ಏನು ಎಂಬುದರ ಹುಡುಕಾಟ ನಮ್ಮಲ್ಲಿ ಆರಂಭವಾದರೆ, ನಾವು ಮೊದಲ ಹೆಜ್ಜೆ ಇಟ್ಟೆವು ಎಂದೇ ಅರ್ಥ.

ಬೇಕಾದರೆ ಮನದಲ್ಲೇ ನಾನಾ ಭಂಗಿಗಳನ್ನು, ಆಸನಗಳನ್ನು ಮಾಡುತ್ತೇವೆಯೇ ವಿನಃ ಮೈಬಗ್ಗಿಸಿ ಕಸರತ್ತು ಮಾಡಲು ಈ ಮನಸ್ಸು ರಾಜಿಯಾಗುವುದೇ ಇಲ್ಲ ಎಂಬುದು ವಾಸ್ತವ ಹೌದಲ್ಲವೋ. ಇದೆಲ್ಲವನ್ನೂ ಬೇಕಾದಷ್ಟು ನಾನು ಸಣ್ಣ ವಯಸ್ಸಿನಲ್ಲಿಯೇ ಮಾಡಿಬಿಟ್ಟಿದ್ದೇನೆ. ಇದರಲ್ಲಿ ನನಗೆ ತಿಳಿಯದಿರುವುದು ಏನೂ ಇಲ್ಲ ನನಗೆ ಇದನ್ನೆಲ್ಲ ಮಾಡಲು ಪುರುಸೊತ್ತಾದರೂ ಎಲ್ಲಿದೆ. ಸಮಯವೇ ಇಲ್ಲ. ಇತ್ಯಾದಿ ನೆವಗಳನ್ನು ಹುಡುಕಿ ಕೊಡುವುದರಲ್ಲಿ ಈ ಕಳ್ಳ ಮನಸ್ಸು ನಿಸ್ಸೀಮ. ಹೆಂಗಸರಂತೂ ಮನೆಗೆಲಸ ಮಾಡುವುದಕ್ಕೇ ಸಮಯ ಸರಿ ಹೋಗುತ್ತದೆ. ಇನ್ನು ಇದಕ್ಕೆ ಎಲ್ಲಿಂದ ಬಿಡುವು ಮಾಡಿಕೊಳ್ಳುವುದು ಎಂಬ ಅದೇ ರಾಗ ಹಾಡುತ್ತಾರೆ.

ವ್ಯಾಯಾಮ ಮಾಡುವುದು, ಹೆಚ್ಚು ಸಿಹಿ ಮತ್ತು ಉಪ್ಪನ್ನು ಬಳಸದಿರುವುದು, ಕರಿದ ಪದಾರ್ಥಗಳನ್ನು ಬಹಳ ಮಿತವಾಗಿ ತಿನ್ನುವುದು, ಬೇಕರಿ ಪದಾರ್ಥಗಳನ್ನು ತ್ಯಜಿಸಿಯೇ ಬಿಡುವುದು ಇವೆಲ್ಲವೂ ಯಾರ ಒಳಿತಿಗಾಗಿ ಹೇಳುವ ಮಾತುಗಳು, ಭಗವಂತ ನೀಡಿರುವ ಈ ಅದ್ಭುತ ಕೊಡುಗೆಯಾದ ದೇಹವನ್ನು ಆರೋಗ್ಯ ಸ್ಥಿತಿಯಲ್ಲಿ ಇಡಲು ತಾನೆ! ಅಂದಮೇಲೆ, ಅವುಗಳನ್ನು ನಿರಾಕರಿಸುವುದು ಎಷ್ಟರಮಟ್ಟಿಗೆ ಸರಿ ನಾಲಿಗೆಯ ಚಪಲ–ಜಿಹ್ವಾ ಚಾಪಲ್ಯ ಎನ್ನುವುದು ನಮ್ಮ ದೊಡ್ಡ ಶತ್ರು. ಅದನ್ನು ನಿಯಂತ್ರಣದಲ್ಲಿ ಇರಿಸಿಕೊಳ್ಳುವುದು ದೊಡ್ಡ ಸವಾಲು ನಿಜ. ಆದರೆ, ಅಸಾಧ್ಯ ಖಂಡಿತಾ ಅಲ್ಲ. ಬದುಕನ್ನು ನಾವು ನೋಡುವ ದೃಷ್ಟಿಕೋನವನ್ನು ಸ್ವಲ್ಪ ಬದಲಿಸಿಕೊಂಡರೆ ಸಾಕು, ಯಾವುದೂ ಅಸಾಧ್ಯವಲ್ಲ ಎಂಬುದು ನಿಮ್ಮ ಅನುಭವಕ್ಕೇ ಬರುತ್ತದೆ. ಬದುಕು ಎಂಬುದು ಕೇವಲ ತಿನ್ನಲು, ಕುಡಿಯಲು, ಮಜಾ ಮಾಡಲು ಇರುವುದಲ್ಲ. ಅದಕ್ಕೂ ಮೀರಿದುದು ಇದೆ. ಅದು ಏನು ಎಂಬುದರ ಹುಡುಕಾಟ ನಮ್ಮಲ್ಲಿ ಆರಂಭವಾದರೆ, ನಾವು ಮೊದಲ ಹೆಜ್ಜೆ ಇಟ್ಟೆವು ಎಂದೇ ಅರ್ಥ.

ಅದಕ್ಕೇ ನಮ್ಮ ಹಿರಿಯರು ಧ್ಯಾನ, ಯೋಗ ಮುಂತಾದವುಗಳ ಮೂಲಕ ಬದುಕಿಗೆ ಆಧ್ಯಾತ್ಮದ ಹೊಳಹನ್ನು ನೀಡಿದರು. ಮನಸ್ಸನ್ನು ಶಾಂತವಾಗಿ ಇರಿಸಲು ಪ್ರತಿನಿತ್ಯ ಐದು ಹತ್ತು ನಿಮಿಷಗಳ ಕಾಲವಾದರೂ ಮೌನವಾಗಿ ಕಣ್ಣು ಮುಚ್ಚಿ ಕುಳಿತುಕೊಳ್ಳುವ ಅಭ್ಯಾಸವನ್ನು ಮಾಡಿದರೆ, ಕ್ರಮೇಣ ಧ್ಯಾನದ ಕಡೆಗೆ ಹೊರಳಬಹುದು. ಕಣ್ಣು ಮುಚ್ಚಿದಾಕ್ಷಣ ತಲೆ ತುಂಬ ಯೋಚನೆಗಳು ಸಾಲು ಸಾಲಾಗಿ ಬರುತ್ತವೆ ಎಂಬುದು ಸಾಮಾನ್ಯವಾಗಿ ಎಲ್ಲರೂ ತೋಡಿಕೊಳ್ಳುವ ಅಳಲು. ಬರಲಿ ಬಿಡಿ. ಬಂದು ಹೋದರೆ, ಒಳ್ಳೆಯದು. ಪ್ರಯತ್ನ ನಿಲ್ಲದಿದ್ದರೆ, ಒಂದಲ್ಲ ಒಂದು ದಿನ ಗುರಿ ಮುಟ್ಟುವುದರಲ್ಲಿ ಸಂಶಯವಿಲ್ಲ.

ಜಗತ್ತಿನಲ್ಲಿ ಅತ್ಯಂತ ಶಕ್ತಿಯುತವಾದುದು ಏನಾದರೂ ಇದ್ದರೆ, ಅದು, ಮನಸ್ಸು. ಮನಸ್ಸು ಮಾಡಿದರೆ, ಏನನ್ನು ಬೇಕಾದರೂ ಸಾಧಿಸಬಹುದು. ಅಸಾಧ್ಯ ಎಂಬುದು ಯಾವುದೂ ಇಲ್ಲ–ಮನಸ್ಸು ಮಾಡಿದರೆ. ಅದನ್ನು ಸಾಧಿಸಲು ಅತ್ಯಂತ ಸಹಾಯಕವಾಗುವ ವಿಷಯ ಎಂದರೆ, ಬದುಕಿನಲ್ಲಿ ಶಿಸ್ತನ್ನು ಅಳವಡಿಸಿಕೊಳ್ಳುವುದು. ನಾವು ಅದನ್ನು ಪಾಲಿಸಿದರೆ, ಅದನ್ನು ನೋಡಿಯೇ ನಮ್ಮ ಮಕ್ಕಳೂ ಅದನ್ನು ಕಲಿಯುತ್ತಾರೆ. ಕೇವಲ ಕೃತಿಯಿಂದ ಅವರ ಬದುಕೂ ಹಸನಾಗಲು ನಾವು ಸಹಕರಿಸಿದಂತಾಗುತ್ತದೆ.

ಈಗ ದೇಹದ ಕಡೆಗೆ ಮತ್ತೆ ಹೊರಳೋಣ. ನಾವು ಬದುಕಿರುವವರೆಗೂ ರೋಗ ರುಜಿನಗಳಿಗೆ ಈಡಾಗದಂತೆ ನಮ್ಮ ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳಬೇಕಾದುದು ನಮ್ಮ ಆದ್ಯ ಕರ್ತವ್ಯ ಎಂಬುದನ್ನು ಒಪ್ಪುತ್ತೀರಿ ಎಂದು ಭಾವಿಸುತ್ತೇನೆ. ನಮ್ಮ ಮನಸ್ಸನ್ನು ನಮ್ಮ ನಿಯಂತ್ರಣದಲ್ಲಿ ಇರಿಸಿಕೊಳ್ಳುವ ಪ್ರಯತ್ನದ ಹಾದಿಯಲ್ಲಿ ಹೆಜ್ಜೆ ಇಡೋಣ. ಇತರರಿಗೆ ಮಾದರಿ ಆಗುವಂತೆ ಬದುಕಲು ಪ್ರಯತ್ನಿಸೋಣ.

ದೇಹವಿದು ನೀನಿರುವ ಗುಡಿಯೆಂದು ತಿಳಿದು
ಗುಡಿಸುವೆನು ದಿನದಿನವು ದೇವದೇವಾ ।
ಬುದ್ಧಿಯಿದು ಗುಡಿಯೊಳುರಿಯುವಾ ದೀಪವೆಂದು
ಅಮರ ಚಿಂತೆಯ ತೈಲವನು ತುಂಬುವೆ ॥

ಸೆನ್ಸೇಷನ್ ಸುದ್ದಿಗಳು, ಎಐ ಫೋಟೋ, ವೀಡಿಯೊಗಳ ಬಗ್ಗೆ ಎಚ್ಚರವಾಗಿರಿ

- ಪತ್ರಕರ್ತರು, ಫೋಟೊಗ್ರಾಫರ್‌ಗಳಿಗೆ ಸಿಎಂ ಸಿದ್ದರಾಮಯ್ಯ ಕಿವಿಮಾತು
- ರಾಜ್ಯ ಮಟ್ಟದ ಸುದ್ದಿ ಛಾಯಾಚಿತ್ರ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ

ಮೈಸೂರು,ಅ.18(ಎಂಟಿವೈ)–ಮಾಧ್ಯಮಗಳು ಸಮಾಜಕ್ಕೆ ಯಾವುದೇ ಪ್ರಯೋಜನವಿಲ್ಲದ ಸೆನ್ಸೇಷನ್ ಸುದ್ದಿಗಳಿಂದ ದೂರವಿದ್ದು, ಕೃತಕ ಬುದ್ಧಿಮತ್ತೆ(ಎಐ)ಯ ವೀಡಿಯೊ, ಫೋಟೊಗಳ ಬಗ್ಗೆಯೂ ಎಚ್ಚರಿಕೆಯಿಂದ ಇರಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಮೈಸೂರು ಫೋಟೊ ಜರ್ನಲಿಸ್ಟ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ 'ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯಮಟ್ಟದ ಸುದ್ದಿ ಛಾಯಾಚಿತ್ರ ಸ್ಪರ್ಧೆ'ಯ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳು ಸೆನ್ಸೇಷನ್ ಸುದ್ದಿಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿವೆ. ಇಂತಹ ಸುದ್ದಿಗಳಿಂದ ಸಮಾಜಕ್ಕೆ ಏನು ಪ್ರಯೋಜನವಿಲ್ಲ. ಸುದ್ದಿಗಳಿಂದ ದೂರ ಇರಬೇಕು. ಜನರ ಸಂಕಷ್ಟ ನಿವಾರಿಸುವ ಸುದ್ದಿಗೆ ಆದ್ಯತೆ ನೀಡಬೇಕು ಎಂದರು.

ಪತ್ರಿಕೋದ್ಯಮವನ್ನು ಪ್ರಜಾಪ್ರಭುತ್ವದ ನಾಲ್ಕನೇ ಆಧಾರಸ್ತಂಭ ಎಂದು ಕರೆಯಲಾಗುತ್ತದೆ. ಆ ಕಾರಣದಿಂದ ಜನ ಪತ್ರಕರ್ತರ ಮೇಲೆ ಹೆಚ್ಚಿನ ನಂಬಿಕೆ ಇಟ್ಟಿದ್ದಾರೆ. ಯಾವಾಗಲೂ ಪತ್ರಕರ್ತರು ಸತ್ಯವನ್ನೇ ಹೇಳುತ್ತಾರೆ. ಸತ್ಯದ ಪರ ಹಾಗೂ ವಾಸ್ತವ ಸುದ್ದಿಯನ್ನೇ ನೀಡುತ್ತಾರೆ ಎಂದು ನಂಬಿದ್ದಾರೆ. ಆ ನಂಬಿಕೆಯನ್ನು ಉಳಿಸಿಕೊಳ್ಳುವ ಕೆಲಸವನ್ನ ಪತ್ರಕರ್ತರು ಮಾಡಬೇಕು. ಊಹಾಪೋಹದ ಸುದ್ದಿಗಳಿಂದ ದೂರ ಇರಬೇಕು. ಈ ಮಾರ್ಗದಲ್ಲಿ ಸುದ್ದಿ ಮಾಡುವುದು ಗೌರವ ತರುವುದಿಲ್ಲ ಎಂದು ತಿಳಿಸಿದರು.

ಇತ್ತೀಚಿನ ವರ್ಷಗಳಲ್ಲಿ ಪತ್ರಕರ್ತರು ಪತ್ರಿಕಾ ಧರ್ಮಕ್ಕೆ ಅನುಗುಣವಾಗಿ ಕೆಲಸ ಮಾಡುತ್ತಿಲ್ಲ. ಸಮಾಜಕ್ಕೆ ಒಳಿತಾಗುವ ಪ್ರಶ್ನೆ ಕೇಳದೆ, 'ಅವರು ಹೀಗೆ ಹೇಳಿದ್ದಾರೆ, ಅದಕ್ಕೆ ನೀವೇನು ಹೇಳುತ್ತೀರಾ' ಎಂದು ಪ್ರಶ್ನಿಸಲು ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ. ಇದು ಸರಿಯಾದ ಪತ್ರಿಕೋದ್ಯಮವಲ್ಲ. ನೀವು ಸಾಮಾಜಿಕ ವ್ಯವಸ್ಥೆಯನ್ನು ಜನರ ಮುಂದೆ ವಾಸ್ತವವಾಗಿ ಇಡುವ ಕೆಲಸ ಮಾಡುತ್ತಲೇ ಇಲ್ಲ. ನೂರಾರು ವರ್ಷಗಳ ಕಾಲ ಶೂದ್ರ ಸಮುದಾಯವನ್ನು ಶಿಕ್ಷಣದಿಂದ ದೂರ ಇಟ್ಟಿದ್ದ ಕಾರಣಕ್ಕೆ ಅಸಮಾನತೆ ಬೆಳೆದಿದೆ. ಇದನ್ನೆಲ್ಲಾ ಪತ್ರಕರ್ತರು ಜನರಿಗೆ ಅರ್ಥ ಮಾಡಿಸಬೇಕು ಎಂದರು.

ಪತ್ರಕರ್ತರು ಮೌಢ್ಯವನ್ನು ಬೆಂಬಲಿಸಬಾರದು. ಬಸವಣ್ಣನವರು 12ನೇ ಶತಮಾನದಲ್ಲೇ ಮೌಢ್ಯದ ವಿರುದ್ಧ ಚಳವಳಿ ನಡೆಸಿದರು. ಆದರೆ ಇವತ್ತಿನ ಪತ್ರಕರ್ತರು ಮೌಢ್ಯದ ವಿರುದ್ಧ ಜನರನ್ನು ಎಚ್ಚರಿಸುವ ಕೆಲಸವನ್ನೇ ಮಾಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಒಂದು ಫೋಟೋ ಸಾವಿರ ಪದಗಳಿಗೆ ಸಮ. ಹೀಗಾಗಿ ಫೋಟೋ ಜರ್ನಲಿಸ್ಟ್‌ಗಳು ಪತ್ರಿಕಾ ವೃತ್ತಿಯ ಮುಖ್ಯ ಭಾಗ. ಆದರೆ, ತೆಗೆದಂತಹ ಫೋಟೋಗಳನ್ನು ಬೇರೆ ಸಂದರ್ಭಗಳಲ್ಲಿ ಬಳಸಿ ತಿರುಚಿದ ಅಭಿಪ್ರಾಯ ಮೂಡಿಸುವುದು ಆರೋಗ್ಯಕರವಲ್ಲ. ಮೈಸೂರು ಪತ್ರಕರ್ತರ ಸಂಘ ಹಾಗೂ ಮೈಸೂರು ಫೋಟೊ ಜರ್ನಲಿಸ್ಟ್ ಅಸೋಸಿಯೇಷನ್ ರಾಜ್ಯಕ್ಕೆ ಮಾದರಿಯಾಗುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಇದಕ್ಕೂ ಮುನ್ನ ವಿಧಾನಪರಿಷತ್ ಸದಸ್ಯ ಕೆ.ಶಿವಕುಮಾರ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಸಣ್ಣ ಪತ್ರಿಕೆಗಳನ್ನು ನಡೆಸಲು ಕಷ್ಟವಾಗುತ್ತಿದೆ. ಹಾಗಾಗಿ ಹೊಸ ಜಾಹಿರಾತು ನೀತಿ ಜಾರಿಗೊಳಿಸಿ ಸಣ್ಣ ಪತ್ರಿಕೆಗಳಿಗೆ ನೆರವಾಗಬೇಕು. ಈಗಾಗಲೇ ಪತ್ರಕರ್ತರಿಗೆ ಆರೋಗ್ಯ ಸೇವೆ, ಗ್ರಾಮೀಣ ಪತ್ರಕರ್ತರಿಗೆ ಬಸ್ ಪಾಸ್ ವ್ಯವಸ್ಥೆ ಮಾಡಿಕೊಟ್ಟಿರುವುದಕ್ಕೆ ರಾಜ್ಯ ಸರ್ಕಾರಕ್ಕೆ ಧನ್ಯವಾದ ಅರ್ಪಿಸುವುದಾಗಿ ಹೇಳಿದರು.

ವಿಜೇತರಿಗೆ ಬಹುಮಾನ: ನಾಡಹಬ್ಬ ದಸರಾ ಹಿನ್ನೆಲೆಯಲ್ಲಿ ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಆಯೋಜಿಸಿದ್ದ 'ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯಮಟ್ಟದ ಸುದ್ದಿ ಛಾಯಾಚಿತ್ರ ಸ್ಪರ್ಧೆ'ಯಲ್ಲಿ ವಿಜೇತ ಬೆಂಗಳೂರಿನ ನ್ಯೂಸ್ ಟ್ರಯಲ್ ಪತ್ರಿಕೆ ಬಿ.ಸತೀಶ್ ಪ್ರಥಮ(25 ಸಾವಿರ ರೂ. ನಗದು), ಬೆಂಗಳೂರಿನ ಪ್ರಜಾವಾಣಿ ಪತ್ರಿಕೆಯ ಎಂ.ಎಸ್.ಮಂಜುನಾಥ್ ದ್ವಿತೀಯ(15 ಸಾವಿರ ರೂ.), ಬೆಂಗಳೂರಿನ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಪಿ.ರಂಜು ತೃತೀಯ(10 ಸಾವಿರ), ಬಿಜಾಪುರದ ವಿಜಯ ಕರ್ನಾಟಕ ಸುಧೀಂದ್ರ ಕುಲಕರ್ಣಿ ಅವರಿಗೆ ಹಿರಿಯ ಛಾಯಾಗ್ರಾಹಕ ದಿ.ನೇತ್ರರಾಜು ಸ್ಮರಣಾರ್ಥ ಬಹುಮಾನ(15 ಸಾವಿರ ರೂ.), ಮಂಗಳೂರಿನ ಪ್ರಜಾವಾಣಿಯ ಫಕ್ರುದ್ದೀನ್, ಚಾಮರಾಜನಗರದ ಸುದ್ದಿ ಸಂಜೆ ಪತ್ರಿಕೆ ಎಸ್.ಚರಣ್, ಬಾಗಲಕೋಟೆಯ ಹಳ್ಳಿ ಸಂದೇಶ ಪತ್ರಿಕೆ ಇಂದ್ರಕುಮಾರ್ ದಸ್ತನವರ್ ಅವರಿಗೆ ಸಮಾಧಾನಕರ ಬಹುಮಾನವಾಗಿ ತಲಾ 1 ಸಾವಿರ ರೂ. ಪ್ರೋತ್ಸಾಹ ಧನ ನೀಡಲಾಯಿತು.

ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಅಸೋಸಿಯೇಷನ್ ಅಧ್ಯಕ್ಷ ಪ್ರಗತಿ ಗೋಪಾಲಕೃಷ್ಣ, ಪ್ರಧಾನ ಕಾರ್ಯದರ್ಶಿ ಎಂ.ಎನ್.ಲಕ್ಷ್ಮೀನಾರಾಯಣ ಯಾದವ್, ಉಪಾಧ್ಯಕ್ಷ ಎಸ್.ಆರ್.ಮಧುಸೂದನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ರಾಜ್ಯಮಟ್ಟದ ಛಾಯಾಚಿತ್ರ ಸ್ಪರ್ಧೆಯ ವಿಜೇತರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಹುಮಾನ ವಿತರಿಸಿದರು.

ಇಂದು ಮೈಸೂರಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ



ಕೆ.ವಿ.ಶ್ರೀಧರ್

ಮೈಸೂರು,ಅ.18(ಜಿಎ)–ರಾಜ್ಯ ಒಕ್ಕಲಿಗರ ಸಂಘ ಮತ್ತು ಕೃಷ್ಣಪ್ಪ ಒಕ್ಕಲಿಗರ ಸಂಘದ ವತಿಯಿಂದ ಅ.19ರಂದು ಬೆಳಗ್ಗೆ 11 ಗಂಟೆಗೆ ವಿಜಯನಗರ 1ನೇ ಹಂತದ ಸಪ್ತಪದಿ ಕಲ್ಯಾಣ ಮಂಟಪದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ನಗರಪಾಲಿಕೆ ಮಾಜಿ ಸದಸ್ಯ ಹಾಗೂ ಸಂಘದ ನಿರ್ದೇಶಕರಾದ ಕೆ.ವಿ.ಶ್ರೀಧರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಫಟಿಕಪುರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ.ನಂಜಾವಧೂತ ಸ್ವಾಮೀಜಿ, ಆದಿಚುಂಚನಗಿರಿ ಶಾಖಾ ಮಠದ ಶ್ರೀಸೋಮೇಶ್ವರನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶಾಸಕ ಜಿ.ಟಿ.ದೇವೇಗೌಡ ಕಾರ್ಯಕ್ರಮ ಉದ್ಘಾಟಿಸುವರು. ಸಂಘದ ಅಧ್ಯಕ್ಷ ಬಿ.ಕೆಂಚಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕರಾದ ಕೆ.ಹರೀಶ್‌ಗೌಡ, ಜಿ.ಡಿ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯ ವಿವೇಕಾನಂದ, ಮಾಜಿ ಸದಸ್ಯ ಮರಿತಿಬ್ಬೇಗೌಡ, ಮಾಜಿ ಶಾಸಕರಾದ ಸಾ.ರಾ.ಮಹೇಶ್, ಎಲ್.ನಾಗೇಂದ್ರ ಮಾಜಿ ಸಂಸದ ಪ್ರತಾಪ್‌ಸಿಂಹ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಡಾ.ಡಿ.ಮಾದೇಗೌಡ, ಡಾ.ಎಂ.ಎಸ್.ರಾಮೇಗೌಡ, ಕೆ.ಅರ್ಕೇಶ್, ಶ್ರೇಯಸ್, ಶಾಂತ ಮಲ್ಲಪ್ಪ, ವಿನೋದ್ ಬೈರಪ್ಪ ಅವರನ್ನು ಸನ್ಮಾನಿಸಲಾಗುತ್ತದೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ 5 ಸಾವಿರ ನಗದು, ಪಾರಿತೋಷಕ ನೀಡಲಾಗುವುದು ಎಂದರು. ಗೋಷ್ಠಿಯಲ್ಲಿ ಡಾ.ಎಂ.ಬಿ.ಮಂಜೇಗೌಡ, ಸಿ.ಜಿ.ಗಂಗಾಧರ್, ವೆಂಕಟೇಶ್‌ಗೌಡ, ಲೋಕೇಶ್‌ಗೌಡ, ಹನುಮಂತಯ್ಯ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಆರ್‌ಎಸ್‌ಎಸ್ ಟಾರ್ಗೆಟ್ ಮಾಡಿಲ್ಲ

ಸಿಎಂ ಸಿದ್ದರಾಮಯ್ಯ ಸ್ಪಷ್ಟನೆ

ಮೈಸೂರು, ಅ.18(ಬಿಎಲ್‌ಯು)– ಆರ್‌ಎಸ್‌ಎಸ್ ಅನ್ನು ನಾವು ಟಾರ್ಗೆಟ್ ಮಾಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.



ಮೈಸೂರಿನ ಟಿ.ಕೆ.ಬಡಾವಣೆಯ ತಮ್ಮ ನಿವಾಸದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಆರ್‌ಎಸ್‌ಎಸ್ ಸೇರಿದಂತೆ ಯಾವುದೇ ಸಂಘಟನೆಯನ್ನು ಗುರಿಯಾಗಿಸಿಕೊಂಡು ಸರ್ಕಾರ ಆದೇಶ ಮಾಡುತ್ತಿಲ್ಲ ಎಂದು ಸ್ಪಷ್ಟನೆ ನೀಡಿದರು.

ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ರೀತಿಯಲ್ಲೂ ಜನರಿಗೆ ತೊಂದರೆ ಆಗದಂತೆ ಕಾರ್ಯಕ್ರಮ ಮಾಡಬೇಕು. ಈ ಸಂಬಂಧ ಕಡ್ಡಾಯವಾಗಿ ಅನುಮತಿ ಪಡೆಯಬೇಕು ಎಂದು ತಾಕೀತು ಮಾಡಿದ್ದೇವೆ. ಇದರಲ್ಲಿ ಯಾರನ್ನೂ ಗುರಿಯಾಗಿಸಿಕೊಂಡು ಆದೇಶ ಮಾಡಿಲ್ಲ ಎಂದು ಪುನರ್ ಸ್ಪಷ್ಟಪಡಿಸಿದರು.

ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥ ಸಂಚಲನದ ಬಗ್ಗೆ ಗೊಂದಲ ಉಂಟಾಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ ಅವರು, ಈ ಮೊದಲು ಜಗದೀಶ್ ಶೆಟ್ಟರ್ ಸರ್ಕಾರ ಹೊರಡಿಸಿದ್ದ ಆದೇಶದ ಮಾದರಿಯಲ್ಲಿ ನಮ್ಮ ಸರ್ಕಾರ ಆದೇಶ ಹೊರಡಿಸಿದೆ ಎಂದು ಹೇಳಿದರು. ಆದರೆ ಬಿಜೆಪಿ ಜನರ ಹಿತ ಚಿಂತನೆ ಬಿಟ್ಟು ರಾಜಕಾರಣದಲ್ಲಿ ತೊಡಗಿದೆ. ಯಾವುದೇ ಕಾರಣಕ್ಕೂ ಕರ್ನಾಟಕದಲ್ಲಿ ಶಾಂತಿ ಭಂಗ ತರಲು ಬಿಜೆಪಿಗೆ ಬಿಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಸಿದ್ದಾರೆ.

ಬಾಕಿ ಪಾವತಿಗೆ ಗುತ್ತಿಗೆದಾರರ ಸಂಘ ಡೆಡ್‌ಲೈನ್ ವಿಧಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ ಅವರು, ಅವರನ್ನು ಕರೆಸಿ ಮಾತನಾಡುತ್ತೇನೆ ಎಂದು ಸ್ಪಷ್ಟಪಡಿಸಿದರು.

ಗಾಂಧಿ ಕೊಂದ ನಿಮ್ಮ ಮನಃಸ್ಥಿತಿ ನೂರು ವರ್ಷವಾದರೂ ಹೋಗಿಲ್ಲ

ಆರ್‌ಎಸ್‌ಎಸ್ ವಿರುದ್ಧ ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್.ಉಗ್ರಪ್ಪ ಕಿಡಿ

ಮೈಸೂರು, ಅ.18(ಬಿಎಲ್‌ಯು)– ರಾಷ್ಟ್ರಪಿತ ಮಹಾತ್ಮಾಗಾಂಧಿ ಅವರನ್ನು ಕೊಂದ ಮನಃಸ್ಥಿತಿ ನೂರು ವರ್ಷವಾದರೂ ಹೋಗಿಲ್ಲ ಎಂದು ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್.ಉಗ್ರಪ್ಪ, ಸಂಘ ಪರಿವಾರದವರ ವಿರುದ್ಧ ಟೀಕಾ ಪ್ರಹಾರ ನಡೆಸಿದರು.



ನಗರದ ಕಾಂಗ್ರೆಸ್ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಿಮ್ಮ ಮನಃಸ್ಥಿತಿಯನ್ನು ಈಗಲಾದರೂ ಬದಲಾಯಿಸಿಕೊಳ್ಳದಿದ್ದರೆ ಜನರೇ ನಿಮಗೆ ತಕ್ಕ ಪಾಠ ಕಲಿಸುತ್ತಾರೆ ಎಂದು ಎಚ್ಚರಿಸಿದರು.

ಆರ್‌ಎಸ್‌ಎಸ್ ನೋಂದಣಿ ಮಾಡಿಸಿಕೊಳ್ಳದೆ ನಡೆಯುತ್ತಿರುವ ಸಂಘಟನೆಯಾಗಿದ್ದು, ಇದು ರಾಷ್ಟ್ರ ದ್ರೋಹವೋ ಅಥವಾ ರಾಷ್ಟ್ರ ಭಕ್ತಿಯೋ ಎಂದು ಖುದ್ದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೇ ಹೇಳಲಿ ಎಂದು ಸಲಹೆ ನೀಡಿದರು.

ಒಂದೆಡೆ ಮತಗಳ್ಳತನ, ಮತ್ತೊಂದೆಡೆ ಸಮಾಜವನ್ನೆ ಚೋರ್ ಮಾಡುವ ಕೆಲಸ ಬಿಜೆಪಿಯಿಂದ ನಡೆಯುತ್ತಿದೆ. ದೇಶದಲ್ಲಿ ಬಡತನ ನಿವಾರಣೆ, ಜಾತಿ ಮುಕ್ತ ವ್ಯವಸ್ಥೆ ಹಾಗೂ ಅಭಿವೃದ್ಧಿಗೆ ಆರ್‌ಎಸ್‌ಎಸ್ ಕಿಂಚಿತ್ತೂ ಕೊಡುಗೆ ನೀಡಿಲ್ಲ ಎಂದು ಉಗ್ರಪ್ಪ ಕಿಡಿಕಾರಿದರು.

ಕಳೆದ ನೂರು ವರ್ಷದಲ್ಲಿ ಭಾರತದ ಅಭಿವೃದ್ಧಿಗೆ ಯಾವ ಕೊಡುಗೆ ನೀಡಿದ್ದೀರಾ ಎಂಬ ಬಗ್ಗೆ ಶ್ವೇತಪತ್ರ ಹೊರಡಿಸುಂತೆ ಆರ್‌ಎಸ್‌ಎಸ್‌ಗೆ ಆಗ್ರಹಿಸಿದ ಉಗ್ರಪ್ಪ ಬಿಜೆಪಿ, ಆರ್‌ಎಸ್‌ಎಸ್, ಭಜರಂಗದಳ ಸೇರಿ 42 ಸಂಘಟನೆಗಳಿವೆ ಆದರೆ ನೋಂದಾಯಿತವಲ್ಲದ ಸಂಘಟನೆ ನಡೆಯಲು ಹೇಗೆ ಅವಕಾಶ ನೀಡಿದ್ದೀರಾ ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಪ್ರಶ್ನಿಸಿದರು.

ಒಬ್ಬನೆ ಒಬ್ಬ ದಲಿತನನ್ನು ಆರ್‌ಎಸ್‌ಎಸ್ ಸರಸ್ವತಿ ಸಂಚಾಲಕರನ್ನಾಗಿ ಮಾಡಿದ್ದೀರಾ ಎಂದು ಪ್ರಶ್ನಿಸಿದ ಉಗ್ರಪ್ಪ, ಆರ್‌ಎಸ್‌ಎಸ್ ಬ್ರಾಹ್ಮಣ ಸ್ವಯಂ ಸೇವಕ ಸಂಘ ಎಂದು ಕರೆಯಬಹುದು ಎಂದು ಆರೋಪಿಸಿದರು.

ಜಾತಿ ವ್ಯವಸ್ಥೆ ಜಾರಿ ಮಾಡುತ್ತಾ, ಶ್ರೇಣೀಕೃತ ವ್ಯವಸ್ಥೆ ಗಟ್ಟಿಗೊಳಿಸಿದ್ದೀರಾ ಎಂದು ದೂರಿದರು. ಕರ್ನಾಟಕ ಸಿವಿಲ್ ಸರ್ವಿಸ್‌ನಲ್ಲಿ ರಾಜಕೀಯ ಸಂಘಟನೆಯವರು ಇರಬಾರದೆಂಬ ಕಾನೂನು ನಿಯಮ ಇದೆ. ಆದರೆ ಕ್ಲಾಸ್ 4ರಿಂದ 1ರವರೆಗೆ ಆರ್‌ಎಸ್‌ಎಸ್‌ನವರನ್ನೆ ತುಂಬಿದ್ದೀರಾ. ಇಂತಹವರಿಂದ ಸಮಾಜಕ್ಕೆ ಪೂರಕ ವಾತಾವರಣ ನಿರ್ಮಾಣವಾಗುವುದಿಲ್ಲ ಎಂದು ಉಗ್ರಪ್ಪ ಆತಂಕ ವ್ಯಕ್ತಪಡಿಸಿದರು.

ಬೆಂಗಳೂರು ಲಾಡ್ಜ್‌ನಲ್ಲಿ ಪುತ್ತೂರು ಯುವಕ ನಿಗೂಢ ಸಾವು

ವಿರಾಜಪೇಟೆಯ ಗರ್ಲ್ ಫ್ರೆಂಡ್ ನಾಪತ್ತೆ

ಬೆಂಗಳೂರು, ಅ.18– ಬೆಂಗಳೂರಿನ ಮಡಿವಾಳದ ಗ್ರ್ಯಾಂಡ್ ಚಾಯ್ಸ್ ಲಾಡ್ಜ್‌ನಲ್ಲಿ ಕಳೆದ 8 ದಿನಗಳಿಂದ ಪ್ರೇಯಸಿ ಜೊತೆ ತಂಗಿದ್ದ ಯುವಕನೋರ್ವ ನಿಗೂಢವಾಗಿ ಸಾವನ್ನಪ್ಪಿದ್ದಾನೆ. ಪುತ್ತೂರು ಮೂಲದ 20 ವರ್ಷದ ತಕ್ಷಿತ್ ವಿರಾಜಪೇಟೆಯ ಯುವತಿ ಜೊತೆ ಲಾಡ್ಜ್‌ನಲ್ಲಿ ರೂಂ ಮಾಡಿಕೊಂಡಿದ್ದರು. ಆದರೆ ತಕ್ಷಿತ್ ಇಂದು ಶವವಾಗಿ ಪತ್ತೆಯಾಗಿದ್ದಾನೆ. ತಕ್ಷಿತ್ ಸಾವಿಗೂ ಮುನ್ನ ಆತನ ಜೊತೆಗಿದ್ದ ಯುವತಿ ಲಾಡ್ಜ್‌ನಿಂದ ಹೊರಹೋಗಿದ್ದು, ನಾಪತ್ತೆಯಾಗಿದ್ದಾಳೆ. ಸದ್ಯ ಯುಡಿಆರ್ ದಾಖಲಿಸಿಕೊಂಡಿರುವ ಮಡಿವಾಳ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.



ಪ್ರಾಥಮಿಕ ಮಾಹಿತಿ ಪ್ರಕಾರ ಕಳೆದ ಎಂಟು ದಿನಗಳಿಂದ ಲಾಡ್ಜ್‌ನಲ್ಲಿ ವಾಸ್ತವ್ಯ ಹೂಡಿದ್ದ ಈ ಜೋಡಿ ಸ್ವಿಗ್ಗಿಯಲ್ಲಿ ಫುಡ್ ಆರ್ಡರ್ ಮಾಡಿ ಊಟ ತರಿಸಿಕೊಂಡು ತಿಂದಿದ್ದಾರೆ. ಆದರೆ, ನಿನ್ನೆ ಊಟದ ನಂತರ ಇಬ್ಬರಿಗೂ ಫುಡ್ ಪಾಯ್ಸನ್ ಆಗಿ ಮಾತ್ರೆಗಳನ್ನು ತಂದು ತಿಂದಿದ್ದಾರೆ. ಊಟಕ್ಕೆ ಬೇಕಂತಲೆ ವಿಷ ಬೆರೆಸಿ ತಿಂದಿದ್ದಾರಾ ಎಂಬ ಅನುಮಾನಗಳು ಮೂಡಿವೆ. ಫುಡ್ ಪಾಯ್ಸನ್‌ನಿಂದ ಸುಧಾರಿಸಿ ಕೊಂಡ ಯುವತಿ ನಿನ್ನೆ ರೂಂನಿಂದ ಹೊರಹೋದ ಬಳಿಕ ಕೋಣೆಯನ್ನು ಪರಿಶೀಲಿಸಲು ಹೋಟೆಲ್ ಸಿಬ್ಬಂದಿ ಹೋಗಿದ್ದಾಗ ತಕ್ಷಿತ್ ಮೃತದೇಹ ಪತ್ತೆಯಾಗಿದೆ. ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಎಲ್ಲಾ ಆಯಾಮಗಳೂ ತನಿಖೆ ನಡೆಸುತ್ತಿದ್ದಾರೆ.

ಬಿವಿಬಿ 154ನೇ ಸಾಂಸ್ಕೃತಿಕ ಕಾರ್ಯಕ್ರಮ

ಘಟಂಗಳಿಂದ ಹೊಮ್ಮಿದ ಸ್ವರ ಸಂಗೀತ ; ಗಾನ–ವಾದ್ಯಗಳ ನಾದ ಸಮ್ಮಿಳಿತ

ಸಂಗೀತದ ಸೆಲೆಯಲ್ಲಿ ಸಂಭ್ರಮಿಸಿದ ಸಭಿಕರು



ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಬಿವಿಬಿ ಸಭಾಂಗಣದಲ್ಲಿ ಶನಿವಾರ ಸಂಗೀತ ಕಛೇರಿ ನಡೆಯಿತು.



ಸಂಗೀತ ಕಛೇರಿಯನ್ನು ಗಣ್ಯರು ಉದ್ಘಾಟಿಸುತ್ತಿರುವುದನ್ನು ಕಾಣಬಹುದು.

ಮೈಸೂರು,ಅ.18(ಪಿಎಂ)– ಘಟಂಗಳಿಂದ ಹೊಮ್ಮಿದ ಸ್ವರ ಸಂಗೀತ ಸುಧೆಯೊಂದಿಗೆ ಗಾಯನ ಸೇರಿದಂತೆ ಇನ್ನಿತರ ವಾದ್ಯಗಳ ನಾದ ಸಮ್ಮಿಳಿತಗೊಂಡು ಸಭಿಕರು ಸಂಗೀತದ ಸೆಲೆಯಲ್ಲಿ ಸಂಭ್ರಮಿಸಿದರು. ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಬಿವಿಬಿ (ಭಾರತೀಯ ವಿದ್ಯಾಭವನ) ಸಭಾಂಗಣದಲ್ಲಿ ಶನಿವಾರ ಸಂಜೆ ಇಂತಹ ಸಂಗೀತದ ಸೊಗಸು ಸೂಸುವ ವಾತಾವರಣ ಸೃಷ್ಟಿಯಾಗಿತ್ತು.

ಇನ್ಫೋಸಿಸ್ ಪ್ರತಿಷ್ಠಾನ ಬೆಂಗಳೂರು ಹಾಗೂ ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು–ಮೈಸೂರು ಘಟಕಗಳ ಸಂಯುಕ್ತಾಶ್ರಯದಲ್ಲಿ 154ನೇ ಸಾಂಸ್ಕೃತಿಕ ಕಾರ್ಯಕ್ರಮವಾಗಿ 'ಲಯ ರಾಗ ಸಮರ್ಪಣಂ–ಸ್ತ್ರೀ ತಾಳ ತರಂಗ್' ಶೀರ್ಷಿಕೆಯಡಿ ನಡೆದ ಸಂಗೀತ ಕಛೇರಿಯಲ್ಲಿ ವಿದುಷಿ ಸುಕನ್ಯಾ ರಾಮಗೋಪಾಲ್ ಅವರು ಐದಾರು ಘಟಂಗಳನ್ನು ಏಕಕಾಲದಲ್ಲಿ ನುಡಿಸಿ ಹೊಮ್ಮಿಸಿದ ಮಾಧುರ್ಯದ ಹೊನಲು ಹಾಗೂ ವಿದುಷಿ ಶ್ರೀವಿದ್ಯಾ ರಾಮನಾಥ್ ಅವರ ಶಾಸ್ತ್ರೀಯ ಗಾಯನದ ಲಹರಿಯಲ್ಲಿ ಸಭಿಕರು ತೇಲಿದರು.

ಎಲ್ಲರೂ ಹಿರಿಯ ಮಹಿಳಾ ಕಲಾವಿದರೆ ನಡೆಸಿಕೊಟ್ಟ ವಿಶಿಷ್ಟ ಕಾರ್ಯಕ್ರಮ ಇದಾಗಿದ್ದು, ವಿದುಷಿ ವಾಣಿ ಮಂಜುನಾಥ್ ಅವರ ಕೊಳಲು ವಾದನ, ವಿದುಷಿ ಲಕ್ಷ್ಮೀ ರಾಜಶೇಖರ್ ಅವರ ಮೃದಂಗ ನಾದ, ವಿದುಷಿ ಭಾಗ್ಯಲಕ್ಷ್ಮೀ ಎಂ.ಕೃಷ್ಣ ಅವರ ಮೋರ್ಚಿಂಗ್ ಸುನಾದ ಮೇಳೈಸಿ ಸಂಗೀತದ ರಸಧಾರೆ ಹರಿಯಿತು.

ಸಾವೇರಿ ರಾಗ ವರ್ಣದಿಂದ ಕಛೇರಿ ಪ್ರಾರಂಭಿಸಲಾಯಿತು. ಜಯಚಾಮರಾಜ ಒಡೆಯರ್ ಸಂಯೋಜನೆಯ 'ಶ್ರೀ ಮಹಾಗಣಪತಿಂ ಭಜೇಹಂ...' ಸಂಸ್ಕೃತ ಗೀತೆಯನ್ನು 'ಅಠಾನ' ರಾಗ ಹಾಗೂ 'ಆದಿ' ತಾಳದಲ್ಲಿ ವಿದುಷಿ ಶ್ರೀವಿದ್ಯಾ ರಾಮನಾಥ್ ಸಾದರಪಡಿಸಿದರು. ಘಟಂಗಳ ತರಂಗ ಸಂಯೋಜನೆಯಾದ 'ಆನಂದಂ' ಅನ್ನು 'ಕುಂತಲವರಾಳಿ' ರಾಗ, 'ಆದಿ' ತಾಳದಲ್ಲಿ ನುಡಿಸಿ ವಿದುಷಿ ಸುಕನ್ಯಾ ರಾಮಗೋಪಾಲ್ ನಾದಮಯ ಲೋಕ ಸೃಷ್ಟಿಸಿದರು. ಘಟಂಗಳೇ ಇಲ್ಲಿ ಪ್ರಧಾನವಾಗಿದ್ದು, ಶರವೇಗದಲ್ಲಿ ಅವರು ಐದಾರು ಘಟಂಗಳನ್ನು ನುಡಿಸಿ ಹೊಮ್ಮಿಸಿದ ಸಂಗೀತಕ್ಕೆ ಸಭಿಕರು ಮನಸೋತು ಚಪ್ಪಾಳೆ ಮಳೆ ಸುರಿಸಿದರು.

ನಂತರ 'ಲತಾಂಗಿ' ರಾಗ ಹಾಗೂ 'ರೂಪಕ' ತಾಳದಲ್ಲಿ 'ವೆಂಕಟರಮಣ...' ಗೀತೆಯನ್ನು ವಿದುಷಿ ಶ್ರೀವಿದ್ಯಾ ರಾಮನಾಥ್, ಸುಶ್ರಾವ್ಯವಾಗಿ ಸಾದರಪಡಿಸಿ ಸಭಿಕರನ್ನು ಮಂತ್ರಮುಗ್ಧರನ್ನಾಗಿಸಿದರು. ಮೈಸೂರು ಆಸ್ಥಾನ ವಿದ್ವಾನ್ ಆಗಿದ್ದ ಮುತ್ತಯ್ಯ ಭಾಗವತರು ಸಂಯೋಜಿಸಿರುವ 'ಪಶುಪತಿ ಪ್ರಿಯ' ರಾಗವನ್ನು ವಿದುಷಿ ಸುಕನ್ಯಾ ರಾಮಗೋಪಾಲ್ ಘಟಂಗಳಲ್ಲಿ ಹೊಮ್ಮಿಸಿ ಸಂಗೀತದ ಸಡಗರದಲ್ಲಿ ಸಭಿಕರು ತೇಲುವಂತೆ ಮಾಡಿದರು.

ಇದಲ್ಲದೆ, ವಾಲಜಿ ರಾಗದಲ್ಲಿ 'ಪಂಚಾಕ್ಷರಿ' ಸಂಯೋಜನೆಯನ್ನು ಘಟಂಗಳಲ್ಲಿ ನುಡಿಸಿ ಸಭಿಕರನ್ನು ತನ್ಮಯಗೊಳಿಸಿದರು. ಒಂದೊಂದು ಘಟಂನಲ್ಲೂ ಒಂದೊಂದು ಸ್ವರಗಳನ್ನು ಹೊಮ್ಮಿಸಿ ಶ್ರೋತೃಗಳನ್ನು ಮಂತ್ರಮುಗ್ಧರನ್ನಾಗಿಸಿದರು. ಜೊತೆಗೆ 'ಕಾಳಿಂಗ ನರ್ತನ ತಿಲ್ಲಾನ' ಸಂಯೋಜನೆಯಲ್ಲಿ ಸಂಗೀತ ಸೂಸಿ ಶ್ರೀಕೃಷ್ಣನು ಕಾಳಿಂಗನ ಮೇಲೆ ನರ್ತನ ಮಾಡುವ ಸನ್ನಿವೇಶವನ್ನು ಸ್ವರ ರಾಗದಲ್ಲಿ ಅನಾವರಣಗೊಳಿಸಿ ಸಭಿಕರ ಅಭಿಮಾನದ ಚಪ್ಪಾಳೆಗೆ ಭಾಜನರಾದರು.

ಬಿವಿಬಿ ಮೈಸೂರು ಕೇಂದ್ರದ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಗೌರವ ಖಜಾಂಚಿ ಎ.ಟಿ.ಭಾಷ್ಯಂ, ಆಡಳಿತ ಮಂಡಳಿ ಸದಸ್ಯ ಗಂಗಾಧರ್, ಆಡಳಿತಾಧಿಕಾರಿ ರವಿಕುಮಾರ್, ಬಿವಿಬಿ ಶಾಲೆಯ ಪ್ರಾಂಶುಪಾಲರಾದ ಲೇಖಾ ನಾಯರ್, ಉಪಪ್ರಾಂಶುಪಾಲರಾದ ಪ್ರಫುಲ್ಲಾ ಮತ್ತಿತರರು ಹಾಜರಿದ್ದರು.

ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನಕ್ಕೆ ಗುದ್ದಲಿಪೂಜೆ

ಮೈಸೂರು,ಅ.18– ಚಾಮುಂಡೇಶ್ವರಿ ಕ್ಷೇತ್ರದ ನಾಡನಹಳ್ಳಿ ಗ್ರಾಮದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಇಂದು ಗುದ್ದಲಿಪೂಜೆ ನೆರವೇರಿಸಲಾಯಿತು.

ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಂಬೇಡ್ಕರ್ ಭವನ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ, ವಿದ್ಯುಕ್ತ ಚಾಲನೆ ನೀಡಿದರು.



ಮೈಸೂರು ಚಾಮುಂಡೇಶ್ವರಿ ಕ್ಷೇತ್ರದ ನಾಡನಹಳ್ಳಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರು ಶಾಸಕ ಜಿ.ಟಿ.ದೇವೇಗೌಡರೊಂದಿಗೆ ಗುದ್ದಲಿ ಪೂಜೆ ನೆರವೇರಿಸಿದರು.

ನಾನು ಪ್ರತಿಮೆಯಲ್ಲಿಲ್ಲ, ಸಂವಿಧಾನ ಮತ್ತು ಪುಸ್ತಕಗಳಲ್ಲಿದ್ದೇನೆ ಎಂದು ಡಾ.ಬಿ. ಆರ್.ಅಂಬೇಡ್ಕರ್ ಅವರೇ ಹೇಳಿದ್ದಾರೆ. ಆದರೂ ಗೌರವದ ಸಂಕೇತವಾಗಿ ಪ್ರತಿಮೆಗಳು ಹಾಗೂ ಭವನಗಳನ್ನು ನಿರ್ಮಿಸುತ್ತಿದ್ದೇವೆ. ಎಲ್ಲರೂ ಬಾಬಾಸಾಹೇಬರ ಆಶಯವನ್ನು ಮನದಟ್ಟು ಮಾಡಿಕೊಳ್ಳಬೇಕು. ಶಿಕ್ಷಣ ಪಡೆಯುವುದರ ಜೊತೆಗೆ ಪುಸ್ತಕಗಳ ಅಧ್ಯಯನವನ್ನು ರೂಢಿಸಿಕೊಂಡು ಜ್ಞಾನವಂತರಾಗಬೇಕು ಎಂದು ಕಿವಿಮಾತು ಹೇಳಿದರು.

ನಾಡನಹಳ್ಳಿಯ ಜನ ರಾಜಕೀಯವಾಗಿ ಪ್ರಬುದ್ಧರಾಗಿದ್ದಾರೆ. ಗ್ರಾಮಕ್ಕೆ ಅಗತ್ಯ ಮೂಲ ಸೌಕರ್ಯ ಕಲ್ಪಿಸಲಾಗುವುದು. ಗ್ರಂಥಾಲಯ, ಆಟದ ಮೈದಾನ ಸೇರಿದಂತೆ ವಿವಿಧ ಅಭಿವೃದ್ಧಿಗೆ ಮನವಿ ಮಾಡಿದ್ದು, ಈ ಸಂಬಂಧ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು. ಹಂತಹಂತವಾಗಿ ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ಭರವಸೆ ನೀಡಿದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಈ ಗ್ರಾಮವು ಪಟ್ಟಣ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟು ಮೇಲ್ದರ್ಜೆಗೇರಿದೆ. ಆದರೂ ಇಲ್ಲಿನ ಜನರಿಗೆ ಕೆಲವು ಸಮಸ್ಯೆಗಳಿದ್ದು, ಸೂರಿಲ್ಲದ ಗ್ರಾಮಸ್ಥರಿಗೆ ಆಶ್ರಯ ಯೋಜನೆಯಡಿ ನಿವೇಶನ ವಿತರಿಸುವ ಸಂಬಂಧ ಸಚಿವರೊಂದಿಗೆ ಚರ್ಚಿಸಿ, ಕ್ರಮವಹಿಸಲಾಗುವುದು ಎಂದು ಹೇಳಿದರು.

ಈ ವೇಳೆ ಗ್ರಾಮಸ್ಥರಾದ ಎಂ.ಪ್ರಸಾದ್, ಸಿದ್ದಯ್ಯ, ಎಂ.ಕುಮಾರ್, ಎಸ್.ಸಂತೋಷ್ ಕುಮಾರ್, ಮಹಾಲಿಂಗಸ್ವಾಮಿ, ಮಧುಸೂದನ್, ಎಂ.ಹರೀಶ, ಗ್ರಾಮ ಪಂಚಾಯ್ತಿ ಸದಸ್ಯರು, ಡಾ.ಬಿ.ಆರ್.ಅಂಬೇಡ್ಕರ್ ಸಂಘದ ಪದಾಧಿಕಾರಿಗಳು, ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ಮಹಿಳೆಯರ ಮೇಲಿನ ದೌರ್ಜನ್ಯ ಖಂಡಿಸಿ ಮಹಿಳಾ ಒಕ್ಕೂಟ ಪ್ರತಿಭಟನೆ

ಮೈಸೂರು, ಅ.18– ಮಹಿಳೆಯರ ಮೇಲಿನ ದೌರ್ಜನ್ಯ ಖಂಡಿಸಿ ಮೈಸೂರಿನ ಮಹಿಳೋದಯ ಮಹಿಳಾ ಒಕ್ಕೂಟದ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು. ಜಿಲ್ಲಾಧಿಕಾರಿಗಳ ಕಚೇರಿ ಬಳಿ ಜಮಾಯಿಸಿದ ಒಕ್ಕೂಟದ ಸದಸ್ಯರು, ಮಹಿಳೆಯರ ಮೇಲಿನ ಅತ್ಯಾಚಾರ, ಕೊಲೆ ಮತ್ತು ಲೈಂಗಿಕ ಕಿರುಕುಳ ಪ್ರಕರಣಗಳು ಹೆಚ್ಚುತ್ತಿದ್ದು, ಮನುಕುಲವೇ ತಲೆತಗ್ಗಿಸುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಮಾಹಿತಿ ಪ್ರಕಾರ 2025ರ ಜುಲೈವರೆಗೆ ರಾಜ್ಯದಲ್ಲಿ ಸುಮಾರು 340 ಅತ್ಯಾಚಾರ ಪ್ರಕರಣ, 3089 ಪೋಕ್ಸೋ ಪ್ರಕರಣ, 3643 ಲೈಂಗಿಕ ಕಿರುಕುಳ ಪ್ರಕರಣ ದಾಖಲಾಗಿದ್ದು, ಸುಮಾರು 25 ಸಾವಿರ ಬಾಲ ಗರ್ಭಿಣಿ ಪ್ರಕರಣ ಪತ್ತೆಯಾಗಿವೆ. ಇವುಗಳಲ್ಲಿ ಬಹುತೇಕ ಪ್ರಕರಣಗಳು ತಾರ್ಕಿಕ ಅಂತ್ಯ ಕಂಡಿಲ್ಲ. ಪರಿಣಾಮ ಮಕ್ಕಳು ಹಾಗೂ ಮಹಿಳೆಯರು ನಿರಾತಂಕವಾಗಿರಲು ಸಾಧ್ಯವಾಗುತ್ತಿಲ್ಲ ಎಂದು ಪ್ರತಿಭಟನಾಕಾರರು ಆತಂಕ ವ್ಯಕ್ತಪಡಿಸಿದರು.

ಅತ್ಯಾಚಾರ ಆರೋಪಿಗಳಿಗೆ ಯಾವುದೇ ಕಾರಣಕ್ಕೂ ಜಾಮೀನು ನೀಡದೆ, ತ್ವರಿತ ವಿಚಾರಣೆ ನಡೆಸಿ ಕಠಿಣ ಶಿಕ್ಷೆ ವಿಧಿಸಬೇಕು. ಸಮಾಜದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಎಲ್ಲಾ ಇಲಾಖೆಗಳು ಸಮರೋಪಾದಿಯಲ್ಲಿ ಶ್ರಮಿಸಬೇಕು. ವಿಧವಾ, ವೃದ್ಧಾಪ್ಯ ಹಾಗೂ ವಿಶೇಷ ಚೇತನರ ಮಾಸಿಕ ಪಿಂಚಣಿಯನ್ನು ಕನಿಷ್ಠ 3 ಸಾವಿರಕ್ಕೆ ಹೆಚ್ಚಿಸಬೇಕು ಎಂದು ಇದೇ ವೇಳೆ ಒತ್ತಾಯಿಸಿದರು. ಒಕ್ಕೂಟದ ಅಧ್ಯಕ್ಷೆ ಭುವನೇಶ್ವರಿ, ಆರೋಗ್ಯ ಮೇರಿ, ಶಾಂತಾ, ದಾರ್ತಿ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ದಸರಾ ವಸ್ತು ಪ್ರದರ್ಶನದಲ್ಲಿ

ಸಿಎಂ ಸಿದ್ದರಾಮಯ್ಯರ ಜೀವನದ ಅಪರೂಪದ ಛಾಯಾಚಿತ್ರ ಪ್ರದರ್ಶನ



'ಸಿದ್ದಿ ಸಾಧಕ ಸಿದ್ದರಾಮಯ್ಯ' ಪುಸ್ತಕವನ್ನು ಸಿಎಂ ಸಿದ್ದರಾಮಯ್ಯ ಬಿಡುಗಡೆಗೊಳಿಸಿದರು.

ಮೈಸೂರು, ಅ.18(ಎಸ್‌ಪಿಎನ್)– ಮುಖ್ಯಮಂತ್ರಿ ಸಿದ್ದರಾಮಯ್ಯ ಕಳೆದ 45 ವರ್ಷಗಳ ಸುದೀರ್ಘ ರಾಜಕೀಯ ಹಾದಿಯನ್ನು ಬಿಂಬಿಸುವ ವಿವಿಧ ಸಂದರ್ಭದಲ್ಲಿ ಸೆರೆಹಿಡಿದ 'ಸಿದ್ದಿ ಸಾಧಕ ಸಿದ್ದರಾಮಯ್ಯ' ಛಾಯಾಚಿತ್ರ ಪ್ರದರ್ಶನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಚಾಲನೆ ನೀಡಿದರು.

ಮೈಸೂರು ದಸರಾ ವಸ್ತು ಪ್ರದರ್ಶನ ಪ್ರಾಧಿಕಾರ ಆವರಣದಲ್ಲಿ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಪ್ರಾಯೋಜಕತ್ವದಲ್ಲಿ ಹಿರಿಯ ಪತ್ರಕರ್ತ ಟಿ.ಗುರುರಾಜ್ ಏರ್ಪಡಿಸಿರುವ ಛಾಯಾಚಿತ್ರ ಪ್ರದರ್ಶನ, ಕನ್ನಡ ಕಾವಲು ಸಮಿತಿ ಅಧ್ಯಕ್ಷ ಸ್ಥಾನದಿಂದ ಮುಖ್ಯಮಂತ್ರಿ ಸ್ಥಾನದವರೆಗೆ ಸಿದ್ದರಾಮಯ್ಯರ ನಡೆ ಬಿಂಬಿಸುವ ಅಪರೂಪದ ಭಾವಚಿತ್ರಗಳು ಅನಾವರಣಗೊಂಡಿವೆ. ಈ ಪ್ರದರ್ಶನವನ್ನು ಸಿಎಂ ವೀಕ್ಷಣೆ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ಟಿ.ಗುರುರಾಜ್ ಪ್ರಕಟಿಸಿರುವ 'ಸಿದ್ದಿ ಸಾಧಕ ಸಿದ್ದರಾಮಯ್ಯ' ಪುಸ್ತಕ ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಶಾಸಕರಾದ ತನ್ವೀರ್ ಸೇಠ್, ಡಾ.ತಿಮ್ಮಯ್ಯ, ಕೆ.ಹರೀಶ್ ಗೌಡ, ರಂಗಾಯಣ ಮಾಜಿ ನಿರ್ದೇಶಕ ಎಚ್.ಜನಾರ್ಧನ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಸಿಇಒ ರುದ್ರೇಶ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್,ಮಾಜಿ ಮೇಯರ್‌ಗಳಾದ ಶ್ರೀಕಂಠಯ್ಯ, ಬಿ.ಎಲ್.ಭೈರಪ್ಪ ಇದ್ದರು.

ಸಂಗೀತ ಕಾರಂಜಿ: ಛಾಯಾಚಿತ್ರ ಗ್ಯಾಲರಿ ಉದ್ಘಾಟಿಸಿ ಹೊರ ಬಂದ ಸಿದ್ದರಾಮಯ್ಯ, ಸಂಗೀತ ಕಾರಂಜಿಯನ್ನು ವೀಕ್ಷಣೆ ಮಾಡಿದರು. 'ಟಗರು ಬಂತು ಟಗರು' ಹಾಡಿನ ಸಂಗೀತ ಕಾರಂಜಿ ಸಿಎಂ ಸಿದ್ದರಾಮಯ್ಯರ ಮನಸೆಳೆಯಿತು. ಅಂಗಳದಲ್ಲಿನ ಮಳಿಗೆಗಳಿಗೆ ಭೇಟಿ ನೀಡಿ ಅಲ್ಲಿಯೇ ಉಪಹಾರ ಸೇವನೆ ಮಾಡಿ ಬಳಿಕ ತೆರಳಿದರು.

ಇಂದು ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಸಿಬ್ಬಂದಿಗಳಿಗೆ ಚಾಲನಾದೇಶ

ಮೈಸೂರು, ಅ.18(ಎಸ್‌ಪಿಎನ್)–ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಜಾತಿಗಣತಿ ಸಮೀಕ್ಷೆ ಶನಿವಾರ ಮುಕ್ತಾಯಗೊಂಡಿದ್ದು, ಮುಂದುವರೆಸುವ ಕುರಿತು ರಾಜ್ಯ ಸರ್ಕಾರ ಯಾವುದೇ ಆದೇಶ ನೀಡಿಲ್ಲ. ಆದರೆ, ಮೈಸೂರು ಜಿಲ್ಲೆಯಲ್ಲಿ ಭಾನುವಾರವೂ ಶಿಕ್ಷಕರು ಸೇರಿದಂತೆ ಇತರೆ ಇಲಾಖೆ ಸಿಬ್ಬಂದಿ ಸಮೀಕ್ಷೆಯಲ್ಲಿ ಪಾಲ್ಗೊಳ್ಳಬೇಕು. ಈ ಸಿಬ್ಬಂದಿಗಳಿಗೆ ಮಧ್ಯಾಹ್ನ 3 ಗಂಟೆ ನಂತರ ಎಲ್ಲಾ ಸಿಬ್ಬಂದಿಗಳಿಗೆ ಚಾಲನಾ ಆದೇಶ ನೀಡಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಮಾಧ್ಯಮಗಳಿಗೆ ತಿಳಿಸಿದರು.

ಮಕ್ಕಳ ಹಕ್ಕುಗಳ ಮರುಸ್ಥಾಪನೆಗೆ ಹಲವು ಕಾರ್ಯಕ್ರಮ

ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ಯೋಗೇಶ್ ಮಾಹಿತಿ



ಮೈಸೂರು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತಿತರ ಸಂಸ್ಥೆಗಳ ಸಹಯೋಗದಲ್ಲಿ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ 'ಮಕ್ಕಳ ಸುರಕ್ಷತೆ, ಯುವ ಸಮುದಾಯ ಸಬಲೀಕರಣ, ಬಾಲ್ಯವಿವಾಹ, ಪೋಕ್ಸೋ ಕಾಯ್ದೆ' ಕುರಿತ ಅರಿವು ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಮೈಸೂರು,ಅ.18– ವಿವಿಧ ಕಾರ್ಯಕ್ರಮಗಳ ಮಕ್ಕಳ ಹಕ್ಕುಗಳ ಮರುಸ್ಥಾಪನೆಗೆ ಶ್ರಮಿಸಲಾಗುತ್ತಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಗಳಾದ ಎನ್.ಟಿ.ಯೋಗೇಶ್ ಹೇಳಿದರು.

ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಡಾನ್ ಬಾಸ್ಕೋ ಮಕ್ಕಳಾಲಯ, ಮಕ್ಕಳ ವಿಶೇಷ ಪೊಲೀಸ್ ಘಟಕ ಹಾಗೂ ಮಕ್ಕಳ ಸಹಾಯವಾಣಿ ಘಟಕ(1098/112) ಸಹಯೋಗದೊಂದಿಗೆ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 'ಮಕ್ಕಳ ಸುರಕ್ಷತೆ, ಯುವ ಸಮುದಾಯ ಸಬಲೀಕರಣ, ಬಾಲ್ಯವಿವಾಹ, ಪೋಕ್ಸೋ ಕಾಯ್ದೆ' ಕುರಿತ ಅರಿವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪೋಷಕರಿಲ್ಲದ, ನಿರ್ಗತಿಕ, ನಿರ್ಲಕ್ಷ್ಯಕ್ಕೊಳಪಟ್ಟ ಬೀದಿಬದಿಯ ಮಕ್ಕಳು ಹಾಗೂ ಸಂಕಷ್ಟ ಪರಿಸ್ಥಿತಿಯಲ್ಲಿರುವ ಯಾವುದೇ ಮಕ್ಕಳ ರಕ್ಷಣೆ, ಪೋಷಣೆ, ಆರೈಕೆಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕಾರ್ಯನಿರ್ವಹಿಸುತ್ತಿದೆ. ಅಗತ್ಯವಿರುವ ಮಕ್ಕಳಿಗೆ ಪುನರ್ವಸತಿ, ಶಿಕ್ಷಣ, ಆರ್ಥಿಕ ಸಹಾಯ, ಪೋಷಕರಿಲ್ಲದ ಮಕ್ಕಳಿಗೆ ಕುಟುಂಬ ವ್ಯವಸ್ಥೆ, ಸಾಮಾಜಿಕ ಮರು ಸ್ಥಾಪನೆ ಹೀಗೆ ಹಲವು ಕಾರ್ಯಕ್ರಮಗಳ ಮೂಲಕ ಮಕ್ಕಳ ಹಕ್ಕುಗಳ ಮರುಸ್ಥಾಪನೆಗೆ ಶ್ರಮಿಸಲಾಗುತ್ತಿದೆ ಎಂದು ತಿಳಿಸಿದರು.

ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ರವಿಚಂದ್ರ ಮಾತನಾಡಿ, ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ಅವರಿಗೆ ಹಕ್ಕು ಆಧಾರಿತ ಮಕ್ಕಳ ಸ್ನೇಹಿ ವಾತಾವರಣ ಕಲ್ಪಿಸಲು ಮಕ್ಕಳ ಕಲ್ಯಾಣ ಸಮಿತಿಯು ಮಕ್ಕಳ ವಿಶೇಷ ನ್ಯಾಯ ಪೀಠವಾಗಿ ಕಾರ್ಯನಿರ್ವಹಿಸುತ್ತಿದೆ ಎಂದರು.

ಮಕ್ಕಳ ಸಹಾಯವಾಣಿ ಘಟಕದ ಜಿಲ್ಲಾ ಯೋಜನಾ ಸಂಯೋಜಕ ಎ.ಎಸ್.ರಘು ಮಾತನಾಡಿ, ಹೆಚ್ಚು ಮೊಬೈಲ್ ಬಳಕೆಯಿಂದ ಮಕ್ಕಳು ಶಿಕ್ಷಣವನ್ನು ನಿರ್ಲಕ್ಷಿಸುತ್ತಿದ್ದಾರೆ. ಪ್ರೀತಿ–ಪ್ರೇಮದ ಸೆಳೆತಕ್ಕೆ ಸಿಲುಕಿ ಪೋಷಕರು ಹಾಗೂ ಸಂಬಂಧಿಕರ ತೊರೆದು ಮದುವೆಯಾಗುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ. ಬಾಲ್ಯವಿವಾಹದಿಂದ ಮಕ್ಕಳ ಹಕ್ಕುಗಳ ಉಲ್ಲಂಘನೆ ಜೊತೆಗೆ ಹಲವು ಸಾಮಾಜಿಕ ಸಮಸ್ಯೆಗಳು ಸೃಷ್ಟಿಯಾಗುತ್ತಿವೆ. ಬಾಲ್ಯವಿವಾಹವೆಂಬ ಅನಿಷ್ಟವನ್ನು ಹೋಗಲಾಡಿಸಲು ಸಾರ್ವಜನಿಕರ ಸಹಕಾರ ಬಹಳ ಮುಖ್ಯ. ಬಾಲ್ಯವಿವಾಹದ ಬಗ್ಗೆ ತಿಳಿದ ಕೂಡಲೇ ಮಕ್ಕಳ ಉಚಿತ ಸಹಾಯವಾಣಿ ಸಂಖ್ಯೆ–1098ಕ್ಕೆ ಕರೆ ಮಾಡಿ, ಮಾಹಿತಿ ನೀಡಬೇಕೆಂದು ಮನವಿ ಮಾಡಿದರು.

ಮಕ್ಕಳ ವಿಶೇಷ ಪೊಲೀಸ್ ಘಟಕದ ಟಿ.ಶ್ರೀನಿವಾಸ್ ಮಕ್ಕಳ ಕಾಯ್ದೆಗಳ ಕುರಿತು, ಕಾಲೇಜಿನ ಪ್ರಾಂಶುಪಾಲೆ ಡಾ.ಎಂ.ಎಸ್.ಅನಿತಾ ಮಕ್ಕಳ ಸುರಕ್ಷತೆ ಮತ್ತು ರಕ್ಷಣೆಯಲ್ಲಿ ಕಾಲೇಜು ವಿದ್ಯಾರ್ಥಿಗಳ ಸಹಕಾರದ ಮಹತ್ವದ ಬಗ್ಗೆ ವಿವರಿಸಿದರು.

ಈ ಸಂದರ್ಭದಲ್ಲಿ ಡಾನ್ ಬಾಸ್ಕೋ ಸಂಸ್ಥೆ ನಿರ್ದೇಶಕ ಜೀವನ್ ಜೋಸ್, ಯೋಜನಾ ಸಂಯೋಜಕ ಇಮ್ಯಾನ್ಯುಯಲ್, ಸಂತೋಷ್, ರುಬೀನ ಬಾನು, ಪಿ.ಎಸ್.ರಘು, ಡಾ.ಮರಿಗೌಡ, ಕೆ.ವೆಂಕಟೇಶ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಬೌದ್ಧ ಮಹಾ ಸಮ್ಮೇಳನ ಯಶಸ್ಸಿಗೆ ಸಹಕರಿಸಿದವರಿಗೆ ಸನ್ಮಾನ; ಪ್ರಮಾಣಪತ್ರ



ಮೈಸೂರಿನ ವಿಶ್ವ ಮೈತ್ರಿ ಬುದ್ಧ ವಿಹಾರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಹಾರಾಜ ಕಾಲೇಜು ಎನ್‌ಎಸ್‌ಎಸ್ ವಿದ್ಯಾರ್ಥಿಗಳನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಸನ್ಮಾನಿಸಿದರು.

ಮೈಸೂರು, ಅ.18(ವಿವಿಹೆಚ್)– ಇತ್ತೀಚೆಗೆ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಬೌದ್ಧ ಸಮ್ಮೇಳನ ಅಚ್ಚುಕಟ್ಟಾಗಿ ಯಾವುದೇ ಸಮಸ್ಯೆ ಆಗದೇ ಯಶಸ್ವಿಯಾದ ಹಿನ್ನೆಲೆಯಲ್ಲಿ ಶನಿವಾರ ಮೈಸೂರು ಬಲ್ಲಾಳ್ ವೃತ್ತದ ಬಳಿಯ ವಿಶ್ವಮೈತ್ರಿ ಬುದ್ಧ ವಿಹಾರದ ಆವರಣದಲ್ಲಿ ತೆರೆ ಹಿಂದಿನ ಸೇನಾನಿಗಳಿಗೆ ಅಭಿನಂದನೆ ಸಲ್ಲಿಸಲಾಯಿತು.

ಕರ್ನಾಟಕ ರಾಜ್ಯ ಭಿಕ್ಕು ಸಂಘ, ರಾಜ್ಯ ಬೌದ್ಧ ಸಂಘ–ಸಂಸ್ಥೆಗಳು ಹಾಗೂ ರಾಜ್ಯ ಅಂಬೇಡ್ಕರ್‌ವಾದಿ ಸಂಘ–ಸಂಸ್ಥೆಗಳು ಮತ್ತು ವಿಶ್ವಮೈತ್ರಿ ಬುದ್ಧ ವಿಹಾರದ ವತಿಯಿಂದ ಆಯೋಜಿಸಲಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಎನ್‌ಎಸ್‌ಎಸ್, ಎನ್‌ಸಿಸಿ ವಿದ್ಯಾರ್ಥಿಗಳು ಹಾಗೂ ಪೌರಕಾರ್ಮಿಕರಿಗೆ ಸನ್ಮಾನಿಸಿ, ಪ್ರಮಾಣ ಪತ್ರ ವಿತರಿಸಲಾಯಿತು.

ಈ ವೇಳೆ ಮಾಜಿ ಮೇಯರ್ ಪುರುಷೋತಮ್ ಮಾತನಾಡಿ, ಬೌದ್ಧ ಮಹಾ ಸಮ್ಮೇಳನ ಮೈಸೂರಿನಲ್ಲಿ ಅಭೂತಪೂರ್ವವಾಗಿ ನಡೆಯಿತು. ಎನ್‌ಎಸ್‌ಎಸ್, ಎಸ್‌ಸಿಸಿ ವಿದ್ಯಾರ್ಥಿಗಳು ಶಿಸ್ತಿನ ಸಿಪಾಯಿಗಳಂತೆ ಮೆರವಣಿಗೆಯಲ್ಲಿ ಪಾಲ್ಗೊಂಡು ಅತಿ ಹೆಚ್ಚು ಸಹಕಾರ ನೀಡಿದ್ದು ವಿಶೇಷ. ಹೀಗಾಗಿ ಎಲ್ಲರಿಗೂ ಪ್ರಮಾಣ ಪತ್ರ ನೀಡುವ ಮೂಲಕ ಅಭಿನಂದನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಪೌರ ಕಾರ್ಮಿಕರೊಂದಿಗೆ ಅಡುಗೆ ಸಿಬ್ಬಂದಿಗಳಿಗೂ ಸನ್ಮಾನಿಸಲಾಗಿದೆ. ಜಿಲ್ಲಾಡಳಿತ, ಪೊಲೀಸ್ ಇಲಾಖೆ, ನಗರಪಾಲಿಕೆ, ಮೈಸೂರು ವಿ.ವಿ, ಪತ್ರಕರ್ತರ ಸಹಕಾರ ಅನನ್ಯ. ಎಲ್ಲರ ಸೇವೆ ಸ್ಮರಿಸಲಾಗಿದೆ. ಅವರಿಗಾಗಿ ಈ ಅಭಿನಂದನಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದರು.

ಬೌದ್ಧ ಸಮ್ಮೇಳನ ರಾಜಕೀಯೇತರ ಕಾರ್ಯಕ್ರಮ. ಬುದ್ಧನ ಚಿಂತನೆ ವಿಶ್ವದೆಲ್ಲೆಡೆ ಹರಡಬೇಕು. ಅಂಬೇಡ್ಕರ್ ಆಶಯ ಈಡೇರಬೇಕು ಎಂಬುದು ನಮ್ಮ ಧ್ಯೇಯ. ಬೌದ್ಧ ಸಮ್ಮೇಳನ ಪ್ರತಿವರ್ಷ ಒಂದೊಂದು ಜಿಲ್ಲೆಯಲ್ಲಿ ನಡೆಯಬೇಕು. ಹಾಗಾಗಿಯೇ ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರಿಗೆ ಜ್ಞಾನ ಜ್ಯೋತಿಯನ್ನು ಹಸ್ತಾಂತರಿಸಲಾಗಿದೆ ಎಂದು ಇದೇ ವೇಳೆ ತಿಳಿಸಿದರು.

ಮಹಾರಾಜ ಕಾಲೇಜು ಎನ್‌ಎಸ್‌ಎಸ್ ವಿದ್ಯಾರ್ಥಿಗಳಿಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಪ್ರಮಾಣ ಪತ್ರ ವಿತರಿಸಿ, ಸನ್ಮಾನಿಸಿದರು. ಉರಿಲಿಂಗಿ ಪೆದ್ದಿಮಠದ ಜ್ಞಾನ ಪ್ರಕಾಶ ಸ್ವಾಮೀಜಿ, ಮನೋರಖ್ಖಿತ ಭಂತೇಜಿ, ನರಸೀಪುರದ ಬೋಧಿರತ್ನ ಭಂತೇಜಿ, ವಿಶ್ವಮೈತ್ರಿ ಬುದ್ಧ ವಿಹಾರದ ಉಪಾಸಕ ಹಾಗೂ ಉಪಾಸಕಿಯರು ಭಾಗವಹಿಸಿದ್ದರು.

ಈ ವೇಳೆ ಮಕ್ಕಳು ಬುದ್ಧ ಬೆಳಕು ನಾಟಕ ಪ್ರದರ್ಶಿಸಿ, ಎಲ್ಲರಿಂದ ಶಿಳ್ಳೆ, ಚಪ್ಪಾಳೆ ಗಿಟ್ಟಿಸಿಕೊಂಡರು.

ನ.3, ಜಿಲ್ಲೆಯಲ್ಲಿ ಪಂಚ ಗ್ಯಾರಂಟಿ ಸಮಾವೇಶ

ಅಗತ್ಯ ಕ್ರಮಕ್ಕೆ ಅಧಿಕಾರಿಗಳಿಗೆ ಆದೇಶ



ಜಿಲ್ಲಾ ಗ್ಯಾರಂಟಿ ಸಮಾವೇಶ ಹಿನ್ನೆಲೆಯಲ್ಲಿ ಅನುಷ್ಠಾನ ಪ್ರಾಧಿಕಾರದ ಸಮಿತಿ ಸಭೆ ನಡೆಯಿತು.

ಮಂಡ್ಯ, ಅ.18– ಜಿಲ್ಲೆಯಲ್ಲಿ ನ.3 ರಂದು ಪಂಚ ಗ್ಯಾರಂಟಿ ಯೋಜನೆ ಕುರಿತು ಜಿಲ್ಲಾ ಗ್ಯಾರಂಟಿ ಸಮಾವೇಶ ಮತ್ತು ಗ್ಯಾರಂಟಿ ಸಂವಾದ ನಡೆಸಲು ನಿರ್ಧರಿಸಿದ್ದು, ಅಧಿಕಾರಿಗಳು ಸಿದ್ಧತೆ ಮಾಡಿಕೊಳ್ಳಿ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ. ಆರ್ ನಂದಿನಿ ಸೂಚಿಸಿದ್ದಾರೆ.

ಜಿಲ್ಲಾ ಪಂಚಾಯತ್ ಮಿನಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಸಮಾವೇಶದಲ್ಲಿ ಪಂಚ ಗ್ಯಾರಂಟಿ ಯೋಜನೆಗಳಿಂದ ಜಿಲ್ಲೆಯಲ್ಲಿ ಆದಂತಹ ಬದಲಾವಣೆ ಹಾಗೂ ಫಲಾನುಭವಿಗಳಿಗಾದ ಅನಾನುಕೂಲತೆ ಕುರಿತು ಸಾಕ್ಷ್ಯ ಚಿತ್ರಗಳ ಪ್ರದರ್ಶನವಾಗಬೇಕಾಗಿದೆ. ಗೃಹಲಕ್ಷ್ಮಿ ಮತ್ತು ಶಕ್ತಿ ಯೋಜನೆಯಿಂದ ಬದುಕಿನಲ್ಲಿ ಬದಲಾವಣೆ, ಉಳಿತಾಯ ಕಂಡಂತಹ ಜಿಲ್ಲೆಯಲ್ಲಿನ ಮಹಿಳೆಯರನ್ನು ಗುರುತಿಸಿ ಯಶೋಗಾಥೆ ತಯಾರಿಸಿ ಎಂದು ಆದೇಶಿಸಿದರು.

ಅಧಿಕಾರಿಗಳಿಗಿಂತಲೂ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಸಾರ್ವಜನಿಕರೊಂದಿಗೆ ಹೆಚ್ಚಿನ ಸಂಪರ್ಕ ಹೊಂದಿರುವುದರಿಂದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳು ಸಾರ್ವಜನಿಕರಿಂದ ಮಾಹಿತಿ ಪಡೆದು ಸಾಕ್ಷ್ಯ ಚಿತ್ರ ಮಾಡಿಸುವಲ್ಲಿ ಅಧಿಕಾರಿಗಳಿಗೆ ಸಹಕರಿಸಬೇಕು ಎಂದು ಹೇಳಿದರು. ಪಂಚ ಗ್ಯಾರಂಟಿ ಯೋಜನೆಗಳ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ನಾಟಕ ಪ್ರದರ್ಶನಗಳನ್ನು ಸಹ ಕಾರ್ಯಕ್ರಮದಲ್ಲಿ ಪ್ರದರ್ಶಿಸಲು ಕ್ರಮ ಕೈಗೊಳ್ಳಿ. ಗ್ಯಾರಂಟಿ ಸಮಾವೇಶ ಯಶಸ್ವಿಗೊಳಿಸಲು ಅಚ್ಚುಕಟ್ಟಾಗಿ ಕೆಲಸ ನಿರ್ವಹಿಸಿ ಎಂದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಚಿಕ್ಕಲಿಂಗಯ್ಯ ಮಾತನಾಡಿ, ಜಿಲ್ಲಾ ಪಂಚ ಗ್ಯಾರಂಟಿ ಸಮಾವೇಶ ಕುರಿತು ಸಾರ್ವಜನಿಕರಿಗೆ ಮಾಹಿತಿ ಒದಗಿಸಿ ಮತ್ತು ಫಲಾನುಭವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಮಾವೇಶದಲ್ಲಿ ಭಾಗವಹಿಸಿ ಗ್ಯಾರಂಟಿ ಸಮಾವೇಶ ಯಶಸ್ವಿಗೊಳಿಸಿ ಎಂದು ಹೇಳಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಧನುಷ್, ಉಪಾಧ್ಯಕ್ಷ ಪ್ರಶಾಂತ್ ಬಾಬು, ರಾಜೇಂದ್ರ ಪ್ರಸಾದ್, ಸದಸ್ಯ ಮಹಮ್ಮದ್ ಅನ್ಸರ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಆಶಾ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕ್ರೀಡಾ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

ಮಂಡ್ಯ, ಅ.18– ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಮಂತ್ರಾಲಯದ ಕ್ರೀಡಾ ಇಲಾಖೆಯ ವತಿಯಿಂದ ಕ್ರೀಡಾ ಸಾಧನೆಗೆ ಸಂಬಂಧಪಟ್ಟಂತೆ ವಿವಿಧ ಕ್ರೀಡಾ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವ ಸಾಧಕರಿಗೆ ಅರ್ಜುನ ಪ್ರಶಸ್ತಿ, ರಾಷ್ಟ್ರೀಯ ಕ್ರೀಡಾ ಪ್ರೋಷಕ ಪ್ರಶಸ್ತಿ, ದ್ರೋಣಾಚಾರ್ಯ ಪ್ರಶಸ್ತಿ ಹಾಗೂ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿಯನ್ನು ನೀಡಲಾಗುತ್ತಿದ್ದು ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅರ್ಹ ಆಸಕ್ತ ಕ್ರೀಡಾಪಟುಗಳು ಪ್ರಶಸ್ತಿಗಳಿಗೆ ಆನ್ಲೈನ್ ತಂತ್ರಾಂಶ www.dbtyas.sports.gov ಮೂಲಕ ಅ.28 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ

ಅರ್ಹ ಆಸಕ್ತ ಅರ್ಜಿದಾರರು ಮಾರ್ಗ ಸೂಚಿಯಲ್ಲಿ ಸೂಚಿಸಿರುವ ಮಾಹಿತಿಯನ್ನು ಖಚಿತಪಡಿಸಿಕೊಂಡು ಆನ್ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ 18002025155 1800–258–5155 ಸಂಪರ್ಕಿಸಬಹುದಾಗಿದೆ ಎಂದು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳು ಪಟಾಕಿ ಬಿಟ್ಟಾಕಿ ಪರಿಸರ ಉಳಿಸಿ



ಕಾರ್ಯಕ್ರಮದಲ್ಲಿ ಅಧ್ಯಕ್ಷ ಕೆ.ಟಿ.ಹನುಮಂತು ಮಾತನಾಡಿದರು.

ಮಂಡ್ಯ, ಅ.18– ದೀಪಾವಳಿಯಲ್ಲಿ ಪಟಾಕಿ ಸಿಡಿಸಿ ಅನಾಹುತಕ್ಕೆ ಎಡೆಮಾಡಿಕೊಡದೆ ಗಿಡ ನೆಡುವುದರ ಮುಖೇನ ಪರಿಸರ ಉಳಿಸಿ ಎಂದು ಅಲಯನ್ಸ್ ಸಂಸ್ಥೆಯ ಸೌತ್ ಮಲ್ಟಿಪಲ್ ಕೌನ್ಸಿಲ್ ಅಧ್ಯಕ್ಷ ಕೆ.ಟಿ ಹನುಮಂತು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದ್ದಾರೆ.

ಕೃಷಿಕ ಅಲಯನ್ಸ್ ಸಂಸ್ಥೆ, ಸಕ್ಕರೆ ನಾಡು ಅಲಯನ್ಸ್ ಸಂಸ್ಥೆ ಹಾಗೂ ಮಾಂಡವ್ಯ ನಗರ ಅಲಯನ್ಸ್ ಸಂಸ್ಥೆ ಜಂಟಿಯಾಗಿ ಆಯೋಜಿಸಿದ್ದ ಪಟಾಕಿ ಬಿಟ್ಟಾಕಿ ಪರಿಸರ ಉಳಿಸಿ ಜಾಗೃತಿ ಕಾರ್ಯಕ್ರಮ ತಾಲೂಕಿನ ಹೆಚ್. ಮಲ್ಲಿಗೆರೆ ಗ್ರಾಮದ ಬಿಎಲ್ಎಸ್ ಪ್ರೌಢ ಶಾಲೆಯಲ್ಲಿ ಗಿಡ ವಿತರಿಸುವ ಮೂಲಕ ಯಶಸ್ವಿಯಾಗಿ ನಡೆಯಿತು.

ಮಲ್ಟಿಪಲ್ ಕೌನ್ಸಿಲ್ ಅಧ್ಯಕ್ಷ ಕೆ ಟಿ ಹನುಮಂತು ಉದ್ಘಾಟಿಸಿ ಹಿಂದೂ ಸಂಪ್ರದಾಯ ಹಬ್ಬಗಳಲ್ಲಿ ದೀಪ ಮತ್ತು ದೀಪಾವಳಿ ಹಬ್ಬಕ್ಕೆ ಹೆಚ್ಚು ಮಹತ್ವವಿದೆ, ದೀಪಾವಳಿ ಎಂದರೆ ಬೆಳಕಿನ ಹಬ್ಬವಾಗಿದೆ. ಬೆಳಕಿನ ಹಬ್ಬವನ್ನು ವಿದೇಶಗಳಲ್ಲೂ ಆಚರಿಸುತ್ತಾರೆ. ಹೆಸರು ಮತ್ತು ಆಚರಣೆಗಳು ವಿಭಿನ್ನ, ಆದರೆ ಉದ್ದೇಶ ಒಂದೇ ಕತ್ತಲನ್ನು ಓಡಿಸಿ ಬೆಳಕನ್ನು ತುಂಬುವುದು. ದುಷ್ಟತನವನ್ನು ನಿವಾರಿಸಿ ಸದ್ಭಾವನೆಯ ಸಂದೇಶ ಸಾರುವುದೇ ದೀಪಾವಳಿಯ ಉದ್ದೇಶ ಎಂದರು.

ಮಾಂಡವ್ಯ ನಗರ ಅಲಯನ್ಸ್ ಸಂಸ್ಥೆ ಅಧ್ಯಕ್ಷ ಪ್ರೊ.ಶಿವ ಕುಮಾರ್, 2ನೇ ಉಪ ರಾಜ್ಯಪಾಲ ಕೆಎಸ್.ಚಂದ್ರಶೇಖರ್, ಶಾಲೆಯ ಮುಖ್ಯ ಶಿಕ್ಷಕ ಲಿಂಗರಾಜು, ಶಿಕ್ಷಕರಾದ ಗೋಪಿನಾಥ್, ಸಹ ಶಿಕ್ಷಕಿ ಜಿ.ಪಿ.ದಿವ್ಯ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಎಚ್‌ಡಿಡಿ ಆರೋಗ್ಯ ವಿಚಾರಿಸಿದ ಮೈತ್ರಿ ನಾಯಕರು



ಡಾ.ಸಿ.ಎನ್.ಅಶ್ವಥ್‌ನಾರಾಯಣ ಹಾಗೂ ಸಿ.ಎಸ್.ಪುಟ್ಟರಾಜು ಎಚ್.ಡಿ.ದೇವೇಗೌಡರ ಆರೋಗ್ಯ ವಿಚಾರಿಸಿದರು

ಮಂಡ್ಯ, ಅ.18– ಅನಾರೋಗ್ಯದಿಂದಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ಮರಳಿರುವ ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರನ್ನು ಮಾಜಿ ಉಪ ಮುಖ್ಯಮಂತ್ರಿ ಡಾ. ಸಿ.ಎನ್ ಅಶ್ವಥ್ ನಾರಾಯಣ ಹಾಗೂ ಮಾಜಿ ಸಚಿವ ಸಿ ಎಸ್ ಪುಟ್ಟರಾಜು ಶನಿವಾರ ಭೇಟಿ ಮಾಡಿದರು.

ಬೆಂಗಳೂರಿನ ಪದ್ಮನಾಭ ನಗರದಲ್ಲಿರುವ ನಿವಾಸಕ್ಕೆ ಭೇಟಿ ನೀಡಿದ ಉಭಯ ಪಕ್ಷದ ನಾಯಕರು ಜಿಲ್ಲಾ ರಾಜಕಾರಣದ ಕುರಿತು ಚರ್ಚಿಸಿದ್ದಾರೆ. ಪ್ರಸ್ತುತ ಜಿಲ್ಲೆಯಲ್ಲಿನ ರಾಜಕೀಯ ಬೆಳವಣಿಗೆ ಜೊತೆಗೆ ರಾಜ್ಯ ಸರ್ಕಾರದ ಆಡಳಿತ ವೈಫಲ್ಯ, ಆರ್‌ಎಸ್‌ಎಸ್ ಮೇಲಿನ ನಿಷೇಧ, ಜನರ ಸಮಸ್ಯೆಗೆ ಸ್ಪಂದಿಸುವಲ್ಲಿ ವಿಫಲವಾಗಿರುವುದು ಹಾಗೂ ಈ ಕುರಿತು ಹೋರಾಟ ನಡೆಸುವುದು ಸೇರಿ ದಂತೆ ಹಲವು ಮಹತ್ವದ ವಿಷಯದ ಬಗ್ಗೆ ಮಾತುಕತೆ ನಡೆಸಿದ್ದಾರೆ. ಈ ವೇಳೆ ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್ ಇದ್ದರು.

ಶ್ರೀರಂಗಪಟ್ಟಣದಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರ ಪಥಸಂಚಲನ



ಪಟ್ಟಣದಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರು ಆರ್‌ಎಸ್‌ಎಸ್‌ಗೆ ನೂರು ವರ್ಷದ ಸಂಭ್ರಮ ಹಿನ್ನಲೆ ಪಥಸಂಚಲನ ನಡೆಸಿದರು.

ಶ್ರೀರಂಗಪಟ್ಟಣ, ಅ.18–ರಾಷ್ಟ್ರೀಯ ಸ್ವಯಂಸೇವಕ ಸಂಸ್ಥೆಗೆ ನೂರು ವರ್ಷದ ಸಂಭ್ರಮ ಹಿನ್ನಲೆ ಪಟ್ಟಣದಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರು ಶನಿವಾರ ಪಥ ಸಂಚಲನ ನಡೆಸಿದರು.

ಪಟ್ಟಣದ ಕುವೆಂಪು ವೃತ್ತದಿಂದ ತಾಲೂಕು ಕಚೇರಿವರೆಗೆ ನಂತರ ಬಂಡಿಕೇರಿ ಬೀದಿ, ಪೂರ್ಣಯ್ಯ ಬೀದಿ, ಎ ರಾಮಣ್ಣ ಬೀದಿ, ದರ್ಜಿ ಬೀದಿ ಸೇರಿದಂತೆ ರಾಜ ಬೀದಿಗಳಲ್ಲಿ ಗಣವೇಶಧಾರಿಗಳಾಗಿ ಪಥಸಂಚಲನ ನಡೆಸಿ, ಶ್ರೀರಂಗನಾಥಸ್ವಾಮಿ ದೇವಸ್ಥಾನದ ಬಳಿ ಪೂರ್ಣಗೊಳಿಸಿದರು. ಪಥ ಸಂಚಲನದ ಉದ್ದಕ್ಕೂ ಸಾರ್ವಜನಿಕರು ಅಂಗಡಿ ಮುಂಗಟ್ಟು ಹಾಗೂ ತಮ್ಮ ಮನೆ ಮೇಲೆ ನಿಂತು ಪಥ ಸಂಚಲನದಲ್ಲಿ ಪಾಲ್ಗೊಂಡಿದ್ದ ಗಣವೇಶಧಾರಿಗಳ ಮೇಲೆ ಪುಷ್ಪ ವೃಷ್ಟಿಗೈದು ಶುಭಕೋರಿದರು.

ಮುಖ್ಯಸ್ಥ ರಂಗಣ್ಣ, ಬಿಜೆಪಿ ತಾಲೂಕು ಅಧ್ಯಕ್ಷ ಪಿ. ಹಳ್ಳಿ ರಮೇಶ್, ಉಮೇಶ್ ಕುಮಾರ್, ವಕೀಲರಾದ ಬಾಲರಾಜ್, ಎ.ಟಿ ಜಯಕುಮಾರ್, ಚಂದನ್ ಸೇರಿದಂತೆ 100ಕ್ಕೂ ಹೆಚ್ಚು ಮಂದಿ ಪಥಸಂಚಲನದಲ್ಲಿ ಭಾಗವಹಿಸಿದ್ದರು. ಮುನ್ನೆಚ್ಚರಿಕಾ ಕ್ರಮವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಿ, ಬಿಗಿಭದ್ರತೆ ಒದಗಿಸಲಾಗಿತ್ತು.

ಬೂಕನಕೆರೆ ವೈದ್ಯರಿಗೆ ಗ್ರಾಮಸ್ಥರ ಸನ್ಮಾನ



ಬೂಕನಕೆರೆ ಗ್ರಾಮದಲ್ಲಿ ಬಡವರಿಗೆ ಉಚಿತ ಸೇವೆ ಸಲ್ಲಿಸುತ್ತಿದ್ದ ಡಾ.ಕೃಷ್ಣಮಾಚಾರಿ ಗಡಚಿಂತಿ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು.

ಕೆ.ಆರ್.ಪೇಟೆ :ತಾಲೂಕಿನ ಬೂಕನಕೆರೆಯಲ್ಲಿ 45 ವರ್ಷಗಳಿಂದ ವೈದ್ಯರಾಗಿ ಬಡವರಿಗೆ, ರೈತರಿಗೆ ಕಡಿಮೆ ದರದಲ್ಲಿ ಚಿಕಿತ್ಸೆ ನೀಡುತ್ತಿದ್ದ ಡಾ. ಕೃಷ್ಣಮಾಚಾರಿ ಗಡಚಿಂತಿಯವರನ್ನು ಗ್ರಾಮಸ್ಥರು ಸನ್ಮಾನಿಸಿದರು.

1981ರಲ್ಲಿ ಬೂಕನಕೆರೆ ಗ್ರಾಮದಲ್ಲಿ ಖಾಸಗಿ ಕ್ಲಿನಿಕ್ ಆರಂಭಿಸಿ ಸುತ್ತಮುತ್ತಲ ಗ್ರಾಮಗಳ ಜನರಿಗೆ ಉಚಿತ ಚಿಕಿತ್ಸೆ ನೀಡುತ್ತಿದ್ದ ಮೂಲತಃ ಉತ್ತರ ಕರ್ನಾಟಕದ ಡಾ. ಗಡಚಿಂತಿ ಮೂಲತಃ ಉತ್ತರ ಕರ್ನಾಟಕದ ಡಾ. ಗಡಚಿಂತಿಯವರನ್ನು ಗ್ರಾಮದೇವತೆ ಗೊಗ್ಗಾಲ್ಲಮ್ಮ ದೇವಸ್ಥಾನ ಮತ್ತು ಲಕ್ಷ್ಮೀ ವೆಂಕಟೇಶ್ವರ ದೇವಾಲಯದ ಆವರಣದಲ್ಲಿ ಅಭಿನಂದಿಸಿ ಸೇವೆಯನ್ನು ಶ್ಲಾಘಿಸಿದರು.

ಡಾ.ಗಡಚಿಂತಿ ಮಾತನಾಡಿ, ಗ್ರಾಮಸ್ಥರು ನೀಡಿದ ಗೌರವ ಮತ್ತು ಸಹಕಾರದಿಂದ ನಿರಂತರವಾಗಿ 40 ವರ್ಷಗಳ ಕಾಲ ಜನರಿಗೆ ವೈದ್ಯಕೀಯ ಸೇವೆ ಸಲ್ಲಿಸಲು ಸಾಧ್ಯವಾಯಿತು. ದೂರದಿಂದ ಬಂದ ನನ್ನನ್ನು ಮನೆಯ ಮಗನಂತೆ ಕಂಡು ಗೌರವಿಸಿದಿರಿ.ನನಗೆ ವಯಸ್ಸಾಗಿದ್ದು ಮೈಸೂರಿನಿಂದ ಬರಲು ಕಷ್ಟವಾಗುತ್ತಿದೆ. ನನ್ನ ಕ್ಲಿನಿಕ್ ಸೇವೆಯನ್ನು ನಿಲ್ಲಿಸುತ್ತಿದ್ದೇನೆ ಎಂದರು.

ಅರ್ಚಕರಾದ ಕೇಶವ ಮೂರ್ತಿ, ವಿಜಯಕುಮಾರ್, ಬ್ಯಾಂಕ್ ಕೃಷ್ಣಮೂರ್ತಿ, ಗಡ ಚಿಂತಿ ಪತ್ನಿ, ಗ್ರಾಪಂ ಅಧ್ಯಕ್ಷ ಶ್ಯಾಮ್ ಪ್ರಸಾದ್, ಮಧು, ಉಮೇಶ, ನಾಗರಾಜು, ಸೇರಿದಂತೆ ನೂರಾರು ಮಂದಿಯಿದ್ದರು

ಹಾಲಹಳ್ಳಿ ಸುತ್ತಮುತ್ತ ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ, ಅ.18–ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ ಮಾರ್ಗದಲ್ಲಿ ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಅ.19 ರ ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ರವರೆಗೆ ಹಾಲಹಳ್ಳಿ, ಹಾಲಹಳ್ಳಿ ಸ್ಲಂ ಬೋರ್ಡ್, ದ್ವಾರಕಾನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಸೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೇನುಗಾರಿಕೆ ತರಬೇತಿಗೆ ಅರ್ಜಿ ಆಹ್ವಾನ

ಮಂಡ್ಯ: ಕೊಡಗು ಜಿಲ್ಲೆಯ ಭಾಗಮಂಡಲ ತರಬೇತಿ ಕೇಂದ್ರದಲ್ಲಿ ನ.4 ರಿಂದ ರೈತರ ಮಕ್ಕಳಿಗಾಗಿ 3 ತಿಂಗಳ ಜೇನುಗಾರಿಕೆ ತರಬೇತಿಗೆ ಆಸಕ್ತರು ಅರ್ಜಿ ಸಲ್ಲಿಸಬಹುದಾಗಿದೆ. ಜಿಲ್ಲೆಯಿಂದ ಒಬ್ಬ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಅವಕಾಶವಿದ್ದು, ಅರ್ಜಿಸಲ್ಲಿಸಲು ಅಭ್ಯರ್ಥಿಯು ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿರಬೇಕು. ತೋಟಗಾರಿಕೆ ಉಪ ನಿರ್ದೇಶಕರ ಕಛೇರಿಗೆ ಅ.30 ರ ಸಂಜೆ 5:30ರ ಒಳಗೆ ಅರ್ಜಿ ಸಲ್ಲಿಸಬಹುದಾಗಿದೆ.

ಒಂದನೇ ಪುಟದಿಂದ

ಆರ್‌ಎಸ್‌ಎಸ್–ಸರ್ಕಾರ ಸಂಘರ್ಷ

ಮಾಲೀಕತ್ವ ಹೊಂದಿದ ಸಕ್ಷಮ ಪ್ರಾಧಿಕಾರಗಳು ಅನುಮತಿ ನೀಡುವುದನ್ನು ಪರಿಶೀಲಿಸತಕ್ಕದ್ದು ಎಂದು ಆದೇಶದಲ್ಲಿ ಹೇಳಲಾಗಿದೆ. ಆಯಾ ಇಲಾಖಾ ವ್ಯಾಪ್ತಿಗೆ ಸಂಬಂಧಿಸಿದಂತೆ ಸೂಕ್ತ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸಲು ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಉನ್ನತ ಶಿಕ್ಷಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆ, ಪಂಚಾಯತ್ ರಾಜ್ ಇಲಾಖೆ, ಜಿಲ್ಲಾಧಿಕಾರಿಗಳ ಕಚೇರಿ, ಪೊಲೀಸ್ ಆಯುಕ್ತರು ಅಥವಾ ಪೊಲೀಸ್ ಅಧೀಕ್ಷರ ಕಚೇರಿಗಳು ಸಭೆ–ಸಮಾರಂಭಗಳ ವಿಚಾರಕ್ಕೆ ಸಂಬಂಧಿಸಿದಂತೆ ಸೂಕ್ತ ಮಾರ್ಗಸೂಚಿಗಳನ್ನು ಹೊರಡಿಸಬೇಕು ಎಂದು ಸರ್ಕಾರ ಆದೇಶಿಸಿದೆ.

ಸರ್ಕಾರಿ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳನ್ನು ನಿಷೇಧಿಸುವ ಸರ್ಕಾರದ ತೀರ್ಮಾನವು ವ್ಯಾಪಕ ಚರ್ಚೆಗೆ ಕಾರಣವಾಗಿದೆ. ಸಚಿವ ಸಂಪುಟ ಸಭೆಯಲ್ಲಿ ಕಾಂಗ್ರೆಸ್ ಸರ್ಕಾರವು ಈ ನಿರ್ಧಾರ ಕೈಗೊಳ್ಳುವ ಮೂಲಕ ಸಂಘಕ್ಕೆ ಪರೋಕ್ಷವಾಗಿ ಕಡಿವಾಣ ಹಾಕಲು ಯತ್ನಿಸಿದೆ. ಈ ಹಿನ್ನೆಲೆಯಲ್ಲಿ ಆರ್‌ಎಸ್‌ಎಸ್‌ನ ಸ್ಥಾಪನೆ ಯಾವಾಗ, ಅದರ ಮೂಲ ಉದ್ದೇಶಗಳೇನು, ಸಂಘದ ವಿರುದ್ಧ ಇರುವ ಪ್ರಮುಖ ಆರೋಪಗಳು ಹಾಗೂ ಆರ್‌ಎಸ್‌ಎಸ್‌ನ ಸಮರ್ಥನೆ ಏನು ಮತ್ತು ಕಾಂಗ್ರೆಸ್ ನಾಯಕರು ಏಕೆ ಸಂಘದ ವಿರುದ್ಧ ಮುಗಿಬಿದ್ದಿದ್ದಾರೆ ಎಂಬಂತಹ ಪ್ರಶ್ನೆಗಳು ಮುಂಚೂಣಿಗೆ ಬಂದಿವೆ.

ಸರ್ಕಾರಿ ನೌಕರರಾಗಿದ್ದುಕೊಂಡು ನಿಯಮಗಳನ್ನು ಮೀರಿ ಆರ್‌ಎಸ್‌ಎಸ್ ಸಂಘಟನೆಯ ಸಮವಸ್ತ್ರ (ಗಣವೇಷ) ಧರಿಸಿದ್ದ ಪಿಡಿಓ ಒಬ್ಬರನ್ನು ಈಗಾಗಲೇ ಸರ್ಕಾರ ಅಮಾನತು ಮಾಡಿರುವ ಕ್ರಮವನ್ನು ಸಚಿವ ಪ್ರಿಯಾಂಕ್ ಖರ್ಗೆ ಸಮರ್ಥಿಸಿಕೊಂಡಿದ್ದಾರೆ. ಈ ಬಗ್ಗೆ ಮಾತನಾಡಿದ ಅವರು, ನಾವು ನಿಯಮಗಳನ್ನು ರೂಪಿಸುತ್ತೇವೆ ಮತ್ತು ಅವು ಪಾಲನೆಯಾಗಬೇಕು. ಎಲ್ಲೆಲ್ಲಿ ನಿಯಮ ಉಲ್ಲಂಘನೆಯಾಗಿದೆಯೋ ಆ ಕುರಿತು ವರದಿ ಬಂದಾಗ ನಾವು ಅಮಾನತು ಮಾಡುತ್ತೇವೆ. ನಾವು ಬೇಕಂತಲೇ ಹುಡುಕಿಕೊಂಡು ಹೋಗಿ ಇದನ್ನು ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಫ್ಲೆಕ್ಸ್, ಬ್ಯಾನರ್, ಭಗವಾಧ್ವಜ ತೆರವು

ಕಡ್ಡಾಯ ಎಂಬ ನಿಯಮ ಜಾರಿಗೆ ತರಲು ನಿರ್ಧರಿಸಿದ ಸಮಯದಲ್ಲಿ ಆರ್‌ಎಸ್‌ಎಸ್ ಭಾನುವಾರ ಚಿತ್ತಾಪುರದಲ್ಲಿ 'ಪಥ ಸಂಚಲನ' ಕಾರ್ಯಕ್ರಮ ಆಯೋಜಿಸಿದ್ದು, ಇದು ತನ್ನ ಶಕ್ತಿ ಪ್ರದರ್ಶನವೆಂದು ಪರಿಗಣಿಸಲಾದ ರೂಟ್ ಮಾರ್ಚ್ ಆಗಿದೆ.

ನಾಳೆ ಪಥ ಸಂಚಲನದ ಹಿನ್ನೆಲೆಯಲ್ಲಿ ಆರ್‌ಎಸ್‌ಎಸ್ ಇಂದು ಚಿತ್ತಾಪುರದಲ್ಲಿ ಭಗವಾಧ್ವಜ, ಫ್ಲೆಕ್ಸ್, ಬ್ಯಾನರ್‌ಗಳು ಮತ್ತು ಪೋಸ್ಟರ್‌ಗಳನ್ನು ಹಾಕಿತ್ತು. ಆದರೆ ಪೊಲೀಸರು ಕಾರ್ಯಕ್ರಮಕ್ಕೆ ಅನುಮತಿ ಪಡೆದಿಲ್ಲ ಎಂದು ಅವುಗಳನ್ನು ತೆಗೆದುಹಾಕಿದ್ದಾರೆ. ಐಟಿ/ಬಿಟಿ ಸಚಿವ ಖರ್ಗೆ ಅವರು ಚಿತ್ತಾಪುರ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಾರೆ.

ಚಿತ್ತಾಪುರ ಖರ್ಗೆ ಕುಟುಂಬದ ರಿಪಬ್ಲಿಕ್ ಆಗಿದೆಯೇ: ಪ್ರಿಯಾಂಕ್ ಖರ್ಗೆ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಪ್ರತಿಪಕ್ಷ ನಾಯಕ ಆರ್.ಅಶೋಕ್, ಚಿತ್ತಾಪುರ ಭಾರತದಲ್ಲಿದೆಯೇ ಅಥವಾ ಖರ್ಗೆ ಕುಟುಂಬದ ರಿಪಬ್ಲಿಕ್ ಆಗಿದೆಯೇ? ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿದ ಖರ್ಗೆ, ಆರ್‌ಎಸ್‌ಎಸ್‌ನವರು ಅದಕ್ಕೆ ಅನುಮತಿ ಪಡೆದಿದ್ದಾರೆಯೇ ಎಂದು ಕೇಳಿದ್ದಾರೆ. ಅಧಿಕಾರಿಗಳಿಂದ ಅನುಮತಿ ಪಡೆಯದೆ ಪೋಸ್ಟರ್‌ಗಳು ಮತ್ತು ಬ್ಯಾನರ್‌ಗಳನ್ನು ಹಾಕಿದ್ದಕ್ಕಾಗಿ ದಂಡ ವಿಧಿಸಲಾಗಿದೆ ಎಂದರು.

422 ಪಿಜಿ ಸೀಟುಗಳ ಹೆಚ್ಚಳ

ಮೈಕ್ರೊ ಬಯಾಲಜಿ ಸೇರಿದಂತೆ 20ಕ್ಕೂ ಹೆಚ್ಚು ವಿಭಾಗದಲ್ಲಿ ಸ್ನಾತಕೋತ್ತರ ಸೀಟುಗಳನ್ನು ಮಂಜೂರು ಮಾಡಲಾಗಿದೆ. ಉತ್ತಮ ಗುಣಮಟ್ಟದ ಉನ್ನತ ಶಿಕ್ಷಣ ನೀಡುವುದೇ ನಮ್ಮ ಸರ್ಕಾರದ ಗುರಿ. ಪ್ರೀ ಕ್ಲಿನಿಕಲ್, ಪ್ಯಾರಾ ಕ್ಲಿನಿಕಲ್ ಮತ್ತು ಕ್ಲಿನಿಕಲ್ ವಿಭಾಗಕ್ಕೆ ಒಟ್ಟು 422 ಸ್ನಾತಕೋತ್ತರ ಸೀಟುಗಳ ಹೆಚ್ಚಳ ಆಗಲಿದೆ.

ಪ್ರತಿಬಾರಿಯಂತೆ ಈ ಬಾರಿಯೂ ಸ್ನಾತಕೋತ್ತರ ಕೋರ್ಸ್‌ಗೆ ಬೇಡಿಕೆ ಇತ್ತು, 572 ಸ್ನಾತ ಕೋತ್ತರ ಸೀಟುಗಳ ಮಂಜೂರಾತಿಗೆ ಮನವಿ ಮಾಡಿದ್ದೆವು, ನಮಗೆ 422 ಸೀಟು ಲಭ್ಯವಾಗಿವೆ. ಕಳೆದ ವರ್ಷ 1694 ಸ್ನಾತಕೋತ್ತರ ಸೀಟುಗಳಿತ್ತು, ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ 422 ಸೀಟು ಹೆಚ್ಚಳದೊಂದಿಗೆ ಒಟ್ಟು 2116 ಸೀಟು ವಿದ್ಯಾರ್ಥಿಗಳಿಗೆ ಲಭಿಸಲಿದೆ. ರಾಜ್ಯಕ್ಕೆ 450 ವೈದ್ಯಕೀಯ ಸೀಟುಗಳನ್ನು ಹೆಚ್ಚಳ ಮಾಡಿ ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಈಗಾಗಲೇ ಆದೇಶ ನೀಡಿದೆ. ಇದೇ ಮೊದಲ ಬಾರಿಗೆ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಅನಿವಾಸಿ ಭಾರತೀಯರಿಗೆ ಶೇ.15ರಷ್ಟು ಕೋಟಾ ನೀಡಲು ನಿರ್ಧರಿಸಲಾಗಿದೆ ಎಂದು ಸಚಿವರು ಹೇಳಿದರು.

ರೈತ ಮಹದೇವೇಗೌಡನ ಮೇಲೆರಗಿದ್ದ ಹುಲಿ ಸೆರೆ



ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ನಿರ್ದೇಶಕ ಎಸ್.ಪ್ರಭಾಕರ್ ಅವರೊಂದಿಗೆ ಹುಲಿ ಸೆರೆ ಹಿಡಿದ ತಂಡ.



ಸೆರೆ ಹಿಡಿದ ಹುಲಿ ನೋಡಲು ಮುಗಿ ಬಿದ್ದ ಬಡಗಲಪುರ ಗ್ರಾಮಸ್ಥರು.



ಹತ್ತಿ ಹೊಲದಲ್ಲಿ ಹುಲಿಗಾಗಿ ಆನೆಗಳೊಂದಿಗೆ ಕೂಂಬಿಂಗ್ ಕಾರ್ಯಾಚರಣೆ.

ಎಂಬುವರ ಮೇಲೆ ದಾಳಿ ನಡೆಸಿ ಪರಾರಿಯಾಗಿತ್ತು. ಘಟನೆ ಬಳಿಕ ಬಡಗಲಪುರ ಗ್ರಾಮಸ್ಥರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರು. ಶುಕ್ರವಾರ ಅರಣ್ಯಾಧಿಕಾರಿಗಳು ಗ್ರಾಮಸ್ಥರೊಂದಿಗೆ ಸಭೆ ನಡೆಸಿ, ಹುಲಿ ಸೆರೆಗೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದರು.

ದಾಳಿ ನಡೆದ ಸ್ಥಳದಲ್ಲಿಯೇ ಪತ್ತೆ: ಶನಿವಾರ ಬೆಳಗ್ಗೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎಸ್.ಪ್ರಭಾಕರನ್ ನೇತೃತ್ವದಲ್ಲಿ ಹುಲಿ ಸೆರೆ ಕಾರ್ಯಾಚರಣೆ ಆರಂಭಿಸಲಾಯಿತು. ದಸರಾ ಗಜಪಡೆಯ ಕ್ಯಾಪ್ಟನ್ ಅಭಿಮನ್ಯು, ದಸರಾ ಆನೆಗಳಾದ ಮಹೇಂದ್ರ, ಭೀಮ ಹಾಗೂ ಕ್ಯಾಂಪ್ ಆನೆ ಭಗಿರಥನೊಂದಿಗೆ ಪಶು ವೈದ್ಯರಾದ ಡಾ.ರಮೇಶ್, ಡಾ.ವಾಸಿಂ ಮಿರ್ಜಾ, ಗುರಿಕಾರ, ಡಿಆರ್‌ಎಫ್‌ಓ ರಂಜನ್ ನೇತೃತ್ವದ ತಂಡ ಕಾರ್ಯಾಚರಣೆ ನಡೆಸುತ್ತಿದ್ದಾಗ, ಗುರುವಾರ ಅರಣ್ಯ ಸಿಬ್ಬಂದಿಗೆ ಕಾಣಿಸಿಕೊಂಡಿದ್ದ ಸ್ಥಳದಿಂದ ಕೆಲವೇ ಮೀಟರ್ ಅಂತರದ ಪೊದೆಯೊಂದರಲ್ಲಿ ಅಡಗಿ ಕುಳಿತ್ತಿರುವುದು ಖಚಿತವಾಗಿದೆ. ಕೂಡಲೇ ಕಾರ್ಯ ಪ್ರವೃತ್ತರಾದ ಸಿಬ್ಬಂದಿ ನಾಲ್ಕು ಆನೆಗಳನ್ನು 4 ದಿಕ್ಕಿನಲ್ಲಿ ನಿಲ್ಲಿಸಿ ಹುಲಿ ತಪ್ಪಿಸಿಕೊಂಡು ಹೋಗದಂತೆ ಕಟ್ಟೆಚ್ಚರ ವಹಿಸಿದ್ದರು.

ಬಳಿಕ ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸಲು ಸೂಚನೆ ಬರುತ್ತಿದ್ದಂತೆಯೇ ಅಭಿಮನ್ಯು ಮೇಲೆ ಕುಳಿತಿದ್ದ ಪಶುವೈದ್ಯ ಡಾ.ರಮೇಶ್, ಪೊದೆಯಲ್ಲಿ ಅಡಗಿದ್ದ ಹುಲಿಗೆ ಗುರಿ ಇಟ್ಟು ಅತ್ಯಂತ ಸಮೀಪದಿಂದ ಅರವಳಿಕೆ ಮದ್ದನ್ನು ಡಾರ್ಟ್ ಮಾಡುವಲ್ಲಿ ಯಶಸ್ವಿಯಾದರು. ಅದು ದೇಹಕ್ಕೆ ಚುಚ್ಚುತ್ತಿದ್ದಂತೆಯೇ ಪೊದೆಯಿಂದ ಹೊರ ಬಿದ್ದು ಓಡಲಾರಂಭಿಸಿದೆ. ಸ್ವಲ್ಪ ದೂರ ಕ್ರಮಿಸಿ, ನಿಧಾನವಾಗಿ ಮಂಪರಿಗೆ ಜಾರಿ ಪೊದೆಯೊಂದರ ಬಳಿ ನೆಲಕುರುಳುತ್ತಿದ್ದಂತೆಯೇ ಆನೆ ಮೇಲೆ ಹಿಂಬಾಲಿಸುತ್ತಿದ್ದ ಪಶುವೈದ್ಯರ ತಂಡ ಹುಲಿ ಪೂರ್ಣ ಪ್ರಮಾಣದಲ್ಲಿ ಮಂಪರಿಗೆ ಜಾರಿರುವುದನ್ನು ಖಚಿತಪಡಿಸಿಕೊಂಡ ಬಳಿಕ ಬಲೆಯನ್ನು ಹಾಕಿ, ಆವರಿಸಿಕೊಂಡರು.

ಹುಲಿ ಸೆರೆ ಸಿಗುತ್ತಿದ್ದಂತೆ ಬೋನ್ ತಂದು ಅದರೊಳಗೆ ಇಟ್ಟು ಅರವಳಿಕೆ ಮದ್ದಿನ ಸತ್ವ ಕುಂದಿಸಲು ರಿವರ್ಸ್ ಚುಚ್ಚುಮದ್ದು ನೀಡಲಾಯಿತು. ಅಲ್ಲದೆ, ಅದರ ದೇಹದ ಮೇಲೆ ಪರಿಶೀಲನೆ ನಡೆಸಿದಾಗ ಹುಲಿ ಮುಂಗಾಲಿನಲ್ಲಿ ಗಂಭೀರ ಗಾಯವಾಗಿದ್ದು, ಮೂಳೆ ಮುರಿತವಾಗಿರುವ ಶಂಕೆ ವ್ಯಕ್ತವಾಯಿತು. ಹುಲಿಯ ಹಲ್ಲನ್ನು ಪರಿಶೀಲಿಸಿದಾಗ ಅದರ ವಯಸ್ಸು, 2–3 ವರ್ಷ ಎಂದು ದೃಢಪಟ್ಟಿದೆ. ಕೂಡಲೇ ಹುಲಿಯಿರುವ ಬೋನ್ ಅನ್ನು ಟೆಂಪೋ ಒಳಗೆ ಸುರಕ್ಷಿತವಾಗಿ ಇಟ್ಟು ಮಧ್ಯಾಹ್ನ 1.20ಕ್ಕೆ ಹುಲಿ ಸೆರೆ ಹಿಡಿದಿರುವುದಾಗಿ ಗ್ರಾಮಸ್ಥರಿಗೆ ಮಾಹಿತಿ ನೀಡಲಾಯಿತು.

ಕಾಡಿನಿಂದ ನಾಡಿಗೆ ಬಂತು: ಸೆರೆ ಸಿಕ್ಕಿರುವ ಹುಲಿಗೆ 2–3 ವರ್ಷವಷ್ಟೇ ವಯಸ್ಸಾಗಿದ್ದು, ತಾಯಿಯಿಂದ ಬೇರ್ಪಟ್ಟು ಕೆಲವೇ ಕೆಲವು ತಿಂಗಳಾಗಿದೆ. ಸಾಮಾನ್ಯವಾಗಿ ತಾಯಿ ಹುಲಿ ಎರಡು ವರ್ಷದವರೆಗೂ ಮರಿಯನ್ನು ಜೊತೆಯಲ್ಲಿಟ್ಟುಕೊಂಡು ಪಾಲನೆ ಮಾಡುತ್ತದೆ. ಎರಡೂವರೆ ವರ್ಷ ಆಗುತ್ತಿದ್ದಂತೆಯೇ ತೊರೆಯುತ್ತದೆ. ಅಷ್ಟರಲ್ಲಾಗಲೇ ಬೇಟೆಯಾಡುವ ಕಲೆಯನ್ನು ತಾಯಿ ಹುಲಿ ಮರಿಗಳಿಗೆ ಕಲಿಸಿರುತ್ತದೆ. ಸೆರೆ ಸಿಕ್ಕಿರುವ ಹುಲಿ ತಾಯಿಯಿಂದ ಬೇರ್ಪಟ್ಟ ಬಳಿಕ ದೊಡ್ಡ ಪ್ರಾಣಿಯೊಂದನ್ನು, ಬೇಟೆಯಾಡುವ ಪ್ರಯತ್ನ ಮಾಡಿ, ಮುಂಗಾಲಿನ ಮೂಳೆ ಮುರಿತಕ್ಕೆ ಒಳಗಾಗಿದೆ. ಆ ಕಾರಣದಿಂದ ಕಾಡಿನಿಂದ ಕಾಡಂಚಿನ ಹೊಲದಲ್ಲಿ ಕಾಡಂದಿ, ಜಿಂಕೆ ಹಾಗೂ ಜಾನುವಾರುಗಳನ್ನು ಸುಲಭವಾಗಿ ಬೇಟೆಯಾಡಬಹುದೆಂದು ಕಾಡಂಚಿನ ಹೊಲದಲ್ಲಿ ಆಶ್ರಯ ಪಡೆದಿದೆ. ಕುಂಟುತ್ತಿದ್ದ ಈ ಹುಲಿ ಸೆರೆ ಕಾರ್ಯಾಚರಣೆ ವೇಳೆ ಉದ್ರಿಕ್ತರು ತೂರಿದ ಕಲ್ಲಿನೇಟಿಗೆ ಆವೇಶಗೊಂಡ ಹುಲಿ ಜನರತ್ತ ನುಗ್ಗಿ ಮಹದೇವೇಗೌಡ ಎಂಬುವರ ಮೇಲೆ ದಾಳಿ ನಡೆಸಿ, ಪರಾರಿಯಾಗಿತ್ತು.

ಆರೈಕೆ ಅಗತ್ಯ: ವ್ಯಕ್ತಿ ಮೇಲೆ ದಾಳಿ ನಡೆಸಿ, ಸೆರೆ ಸಿಕ್ಕಿರುವ ಹುಲಿ ಕಾಲಿಗೆ ಅಗತ್ಯ ಚಿಕಿತ್ಸೆ ನೀಡಬೇಕಾಗಿದೆ. ಅದನ್ನು ಸದ್ಯ ಯಾವುದೇ ಕಾಡಿಗೆ ಬಿಡುಗಡೆ ಮಾಡಲು ಸಾಧ್ಯವಾಗದ ಕಾರಣ, ಅದನ್ನು ಬನ್ನೇರುಘಟ್ಟ ಜೈವಿಕ ಉದ್ಯಾನದ ಪುನರ್ವಸತಿ ಕೇಂದ್ರದಲ್ಲಿ ಚಿಕಿತ್ಸೆ ನೀಡಿ, ಆರೈಕೆ ಮಾಡಬೇಕಾಗಿದೆ.

ಅದು ಸಂಪೂರ್ಣವಾಗಿ ಚೇತರಿಸಿಕೊಂಡ ಬಳಿಕ ಬನ್ನೇರುಘಟ್ಟದಲ್ಲಿಯೇ ಪೋಷಿಸಲಾಗುತ್ತದೆ.

> “ ಗ್ರಾಮಸ್ಥರ ಮೇಲೆ ದಾಳಿ ನಡೆಸಿದ ಹುಲಿಯನ್ನು ಸುರಕ್ಷಿತವಾಗಿ ಸೆರೆ ಹಿಡಿಯಲಾಗಿದೆ. ಕಾಡಂಚಿನ ಗ್ರಾಮದ ಜನರ ರಕ್ಷಣೆಗೆ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಹುಲಿಯ ಕಾಲಿಗೆ ಗಾಯವಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಬನ್ನೇರುಘಟ್ಟಕ್ಕೆ ರವಾನಿಸಲಾಗಿದೆ. ಹುಲಿ ಸೆರೆ ಸಿಕ್ಕರೂ ಬಡಗಲಪುರದ ಬಳಿ ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸಿ, ಸೂಕ್ಷ್ಮವಾಗಿ ಪರಿಶೀಲಿಸಲು ಕ್ರಮ ಕೈಗೊಳ್ಳಲಾಗಿದೆ.
>
> –ಎಸ್.ಪ್ರಭಾಕರನ್, ನಿರ್ದೇಶಕರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ

ಘಟನೆ ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು

> “ ರೈತನ ಮೇಲೆ ದಾಳಿ ನಡೆಸಿದ ಹುಲಿಯನ್ನು ಸೆರೆ ಹಿಡಿದಿದ್ದಾರೆ. ಇದರಿಂದ ಕಾಡಂಚಿನ ಗ್ರಾಮದ ರೈತರ ಸಮಸ್ಯೆ ಬಗೆಹರಿದಿದೆ ಎನ್ನಲು ಸಾಧ್ಯವಿಲ್ಲ. ಹುಲಿ, ಆನೆ ದಾಳಿಯಂತಹ ಪ್ರಕರಣ ಮರುಕಳಿಸದಂತೆ ಕಟ್ಟೆಚ್ಚರ ವಹಿಸಬೇಕು. ಜೀವಹಾನಿ, ಬೆಳೆ ಹಾನಿಯಂತಹ ಪ್ರಕರಣ ಸಂಭವಿಸಿದಾಗ ತಕ್ಷಣದಲ್ಲಿ ಅರಣ್ಯ ಇಲಾಖೆ ಸ್ಪಂದಿಸಿ, ಸಂತ್ರಸ್ತರಿಗೆ ಪರಿಹಾರ ನೀಡುವುದರೊಂದಿಗೆ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಬೇಕು.
>
> –ಬಡಗಲಪುರ ನಾಗೇಂದ್ರ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ

ಹುಲಿ ದಾಳಿಗೊಳಗಾದ ವ್ಯಕ್ತಿ ಆರೋಗ್ಯ ಸ್ಥಿತಿ ಗಂಭಿರ

ಮೈಸೂರು, ಅ.18– ಹುಲಿ ದಾಳಿಯಿಂದ ಮಾರಣಾಂತಿಕ ಹಲ್ಲೆಗೆ ಒಳಗಾಗಿರುವ ವ್ಯಕ್ತಿಯ ಆರೋಗ್ಯ ಸ್ಥಿತಿ ಗಂಭಿರವಾಗಿದ್ದು, ಇನ್ನು ಒಂದು ದಿನ ಏನನ್ನು ಹೇಳಲು ಸಾಧ್ಯವಿಲ್ಲ ಎಂದು ಆತನಿಗೆ ಆಪರೇಷನ್ ಮಾಡಿದ ಸರ್ಜನ್ ಡಾ.ಸತೀಶ್ ಮಾಧ್ಯಮಗಳಿಗೆ ಮಾಹಿತಿ ನೀಡಿದರು.

ಶನಿವಾರ ಆಸ್ಪತ್ರೆಯಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಹುಲಿ ದಾಳಿಗೊಳಗಾದ ವ್ಯಕ್ತಿಯ ಮುಖದ ಹಲವು ಮೂಳೆಗಳು ಮುರಿದಿದ್ದು, ಆಪರೇಷನ್ ಮಾಡಿ ಸರಿಪಡಿಸಲಾಗಿದೆ. ಮೆದುಳಿಗೆ ಸ್ವಲ್ಪ ಪ್ರಮಾಣದ ಹಾನಿಯಾಗಿದೆ. ಬಲಗಣ್ಣು ಸಂಪೂರ್ಣವಾಗಿ ದೃಷ್ಟಿ ಹೋಗಿದೆ ಎಡಗಣ್ಣಿನ ಭಾಗ ಬಹುತೇಕ ಹಾನಿಯಾಗಿದೆ, ಎಡಗಣ್ಣಿನ ದೃಷ್ಟಿಯನ್ನು ಉಳಿಸಲು ಸಾಕಷ್ಟು ಪ್ರಯತ್ನ ನಡೆದಿದ್ದು, ಸದ್ಯ ಆತನ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ವೆಂಟಿಲೇಟರ್ ಮೂಲಕ ಆತ ಉಸಿರಾಟ ನಡೆಸುತ್ತಿದ್ದು, ಬಿಪಿ ಎಲ್ಲವೂ ನಾರ್ಮಲ್ ಆಗಿದೆ ಇನ್ನು ಒಂದು ದಿನ ಏನನ್ನು ಹೇಳಲು ಆಗುವುದಿಲ್ಲ ಎಂದು ಡಾ.ಸತೀಶ್ ಮಾಹಿತಿ ನೀಡಿದರು.

ಚಾಮರಾಜನಗರ ಬಳಿ ಹುಲಿ ದಾಳಿಗೆ ಎರಡು ಹಸು ಬಲಿ



ಚಾಮರಾಜನಗರ: ಹುಲಿ ದಾಳಿಯಿಂದ ಎರಡು ಹಸು ಬಲಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಹರವೆ ಹೋಬಳಿಯ ಕಲ್ಪುರ ಗ್ರಾಮದಲ್ಲಿ ಘಟನೆ ನಡೆದಿದೆ.

ಗ್ರಾಮದ ಕುಮಾರ್ ಎಂಬುವವರ 1 ಲಕ್ಷ ಮೌಲ್ಯದ ಹಸು ಹುಲಿ ದಾಳಿಗೆ ಬಲಿಯಾಗಿದೆ ಎನ್ನಲಾಗಿದೆ.

ಘಟನೆಯ ವಿವರ: ಎಂದಿನಂತೆ ಶನಿವಾರ ರೈತ ಕುಮಾರ್ ತಮ್ಮ ಜಮೀನಿನಲ್ಲಿ ಹಸುವನ್ನು ಮೇಯಿಸುತ್ತಿದ್ದರು. ಕುಮಾರ್ ಹಸುಗಳನ್ನು ಜಮೀನಿನಲ್ಲಿ ಬಿಟ್ಟು ಮನೆಗೆ ಬಂದು, ವಾಪಸ್ ಬಂದು ನೋಡಿದಾಗ ಘಟನೆ ಬೆಳಕಿಗೆ ಬಂದಿದ್ದು, ಮಧ್ಯಾಹ್ನ 4 ಗಂಟೆ ಸುಮಾರಿನಲ್ಲಿ ಹಸುಗಳ ಮೇಲೆ ಹುಲಿ ಏಕಾಏಕಿ ದಾಳಿ ನಡೆಸಿದೆ. ಕೊಂದು ಹಾಕಿದೆ ಎಂದು ರೈತ ಕುಮಾರ್ ತಿಳಿಸಿದ್ದಾರೆ.


ಕಳೆದ ಕೆಲವು ದಿನಗಳ ಹಿಂದೆ ರೈತ ಕುಮಾರ್ ಅವರ ಜಮೀನಲ್ಲಿ ಮೂರು ಚಿರತೆಗಳು ಪ್ರತ್ಯಕ್ಷವಾಗಿ ಸ್ಥಳೀಯ ರೈತರಲ್ಲಿ ಆತಂಕ ಮೂಡಿಸಿತ್ತು. ಇದೀಗ ಹುಲಿ ದಾಳಿ ನಡೆಸಿ ಹಸು ವನ್ನು ಬಲಿ ಪಡೆದಿದೆ ಎನ್ನಲಾಗುತ್ತಿದೆ.

ರೈತರು ಹುಲಿ ದಾಳಿ ನಡೆಸಿದೆ ಎನ್ನುತ್ತಿದ್ದು ಅರಣ್ಯ ಅಧಿಕಾರಿಗಳು ಚಿರತೆ ದಾಳಿ ನಡೆಸಿದೆ ಎಂದು ಹೇಳುತ್ತಿದ್ದಾರೆ.

ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕೂಡಲೇ ಜಾನುವಾರುಗಳ ಬಲಿ ಪಡೆದಿರುವ ವನ್ಯಜೀವಿಯನ್ನು ಸೆರೆ ಹಿಡಿಯಬೇಕು ಹಾಗೂ ರೈತ ಕುಮಾರ್‌ರವರಿಗೆ ಅರಣ್ಯ ಇಲಾಖೆ ಪರಿಹಾರ ನೀಡಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

ಕಾಂತಾರ ಚಾಪ್ಟರ್–1ರಲ್ಲಿ ಮೈಸೂರು ಪ್ರತಿಭೆಗಳ ಕಮಾಲ್!

ದಕ್ಕಿದ ಅವಕಾಶ, ಪರಿಶ್ರಮದ ಅಭಿನಯಕ್ಕೆ ಸಿಕ್ಕ ಯಶಸ್ಸಿನಿಂದ ಭಾವಪರವಶತೆ




ಮಹಾಮಂತ್ರಿ ಪಾತ್ರದಲ್ಲಿ ರಂಜನ್ ಶೆಟ್ಟಿ



ಕಾಂತಾರದ ಹಾಡಿ ಮಕ್ಕಳಾಗಿ ಲೇಖನ(ಲಡ್ಡು), ಸಾನ್ವಿ



ಜಬ್ಬಜ್ಜ ಎಂಬ ಮುಖಂಡನ ಪಾತ್ರದಲ್ಲಿ ನಟ ಬಲರಾಜ್‌ವಾಡಿ



ಜಬ್ಬಜ್ಜನ ತಂದೆ ಪಾತ್ರದಲ್ಲಿ ಗೌತಮ್ ರಾಜ್



ಕಡಪ ಜನಾಂಗದ ಮುಖ್ಯಸ್ಥನಾಗಿ ಶೈಲೇಶ್ ಕದ್ರಿ

ಮೈಸೂರು,ಅ.18(ಜಿಎ)– ವಿಶ್ವದಾದ್ಯಂತ ಭರ್ಜರಿ ಪ್ರದರ್ಶನ ಕಾಣುತ್ತಿರುವ 'ಕಾಂತಾರ ಚಾಪ್ಟರ್–1' ಚಿತ್ರದಲ್ಲಿ ಮೈಸೂರಿನ ಹಲವು ಕಲಾವಿದರು ಕಮಾಲ್ ಮಾಡಿದ್ದಾರೆ.

ರಂಗಭೂಮಿ ಹಿನ್ನೆಲೆಯ ನಟ ಬಲರಾಜ್‌ವಾಡಿ ಅವರು ಜಬ್ಬಜ್ಜ, ರಂಜನ್ ಶೆಟ್ಟಿ ಮಹಾಮಂತ್ರಿ, ಶೈಲೇಶ್ ಕದ್ರಿ ಕಡಪ ಜನಾಂಗದ ಮುಖ್ಯಸ್ಥ, ಜಬ್ಬಜ್ಜನ ತಂದೆ ಪಾತ್ರದಲ್ಲಿ ಗೌತಮ್ ರಾಜ್ ಮನೋಜ್ಞವಾಗಿ ಅಭಿನಯಿಸಿದ್ದಾರೆ. ಕೊಡವ ಮಾಡೆಲ್ ಶಾಲೆ ಪುಟಾಣಿಗಳಾದ ಲೇಖನ (ಲಡ್ಡು) ಹಾಗೂ ಸಾನ್ವಿ ಅನುಭವಿ ಕಲಾವಿದರಂತೆ ನಟಿಸಿ, ಪ್ರೇಕ್ಷಕರ ಮನ ಗೆದ್ದಿದ್ದಾರೆ. ಕಾಂತಾರ ತೆರೆಕಂಡ ನಂತರ ಇವರೆಲ್ಲರಿಗೂ ಕನ್ನಡದ ಜೊತೆಗೆ ವಿವಿಧ ಭಾಷೆಗಳ ಚಿತ್ರರಂಗದಿಂದಲೂ ಅವಕಾಶಗಳು ಅರಸಿ ಬರುತ್ತಿವೆ.

ಪೂರ್ವಾಭ್ಯಾಸ ಕಡ್ಡಾಯ: 'ಕಾಡಿನ ಜಬ್ಬಜ್ಜ' ಮುಖಂಡನ ಪಾತ್ರಧಾರಿ ಬಲರಾಜ್‌ವಾಡಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಲುಕ್ ಟೆಸ್ಟ್ ನಂತರ ಕಾಸ್ಟ್ಯೂಮ್ಸ್ ಹಾಕಿಸಿ ನನ್ನ ಪಾತ್ರ ಅಂತಿಮ ಮಾಡಿದರು. ನಾವು ಕಾರ್ಯಾಗಾರದ ಬಳಿಕ ಫೈಟಿಂಗ್, ಕಾಡಿನೊಳಗೆ ಓಡಾಟ, ಎಲ್ಲರ ಜೊತೆ ಹೊಂದಾಣಿಕೆ, ಹಾಡಿ ಜನರ ಒಗ್ಗಟ್ಟಿನ ದೃಶ್ಯ... ಹೀಗೆ ಎಲ್ಲವನ್ನೂ ಸಾಕಷ್ಟು ರಿಹರ್ಸಲ್ ಮಾಡಿದೆವು. ಬಹುತೇಕರಿಗೆ ಕಳರಿ ಪಯಟ್ಟು ಕಲಿಸಿದ್ರು ರೋಪ್ ಇಲ್ಲದೇ ಫೈಟ್ ಸೀನ್‌ಗಳನ್ನು ಅಭ್ಯಾಸ ಮಾಡಿಸಿದ್ರು. ಕ್ಲೈಮಾಕ್ಸ್ ಸೀನ್‌ಗಾಗಿ ಎರಡ್ಮೂರು ದಿನ ಪ್ರಾಕ್ಟೀಸ್ ಮಾಡಲಾಯಿತು. ನಮ್ಮ ಜೊತೆಗೆ ರಿಷಬ್‌ಶೆಟ್ಟಿ ಅವರೂ ರಿಹರ್ಸಲ್ ಮಾಡುತ್ತಿದ್ದರು. ಕಾಡಿನಲ್ಲಿರುವ ಹಾಡಿ ಜನಾಂಗದ ಗುಡಿಸಲು ಬಳಿಯೂ ಸಾಕಷ್ಟು ಬಾರಿ ರಿಹರ್ಸಲ್ ಮಾಡಿ, ನಂತರ ಶೂಟಿಂಗ್‌ನಲ್ಲಿ ಭಾಗಿಯಾದೆವು ಎಂದು ವಿವರಿಸಿದರು.

ಪ್ರಶಂಸೆ ಸುರಿಮಳೆ: ಕನ್ನಡ ಸಿನಿಮಾವೊಂದು ವಿಶ್ವದ ಗಮನ ಸೆಳೆದಿರುವುದು ಹೆಮ್ಮೆಯ ಸಂಗತಿ. ತಂಡದ ಲೈಟ್ ಬಾಯ್ಸ್‌ನಿಂದ ಹಿಡಿದು ರಿಷಬ್ ಶೆಟ್ಟಿ ವರೆಗೆ ಎಲ್ಲರ ಪರಿಶ್ರಮ ದೊಡ್ಡಮಟ್ಟದ್ದು. ನಮಗೆ ಸಂತೋಷದ ಜೊತೆಗೆ ಎಮೋಷನ್ ಕೂಡ ಆಗುತ್ತಿದೆ. ನನ್ನ ಪಾತ್ರಕ್ಕೆ ಪ್ರಶಂಸೆಯ ಸುರಿಮಳೆಯಾಗುತ್ತಿದೆ. ವಿದೇಶಗಳಿಂದಲೂ ಹೆಚ್ಚು ಕರೆಗಳು ಬರುತ್ತಿವೆ. ಮತ್ತೊಂದೆಡೆ ತಮಿಳು ಚಿತ್ರರಂಗದಿಂದ ಅವಕಾಶಗಳು ಬರುತ್ತಿವೆ ಎಂದು ನಟ ಶೈಲೇಶ್ ಕದ್ರಿ ಸಂತಸ ಹಂಚಿಕೊಂಡಿದ್ದಾರೆ.

ಹುಡುಕಿ ಕರೆಸಿಕೊಂಡರು: ಮಹಾ ಮಂತ್ರಿ ಪಾತ್ರವನ್ನು ನಿಭಾಯಿಸುತ್ತಿದ್ದ ಮಂಗಳೂರು ದಿನೇಶ್ ಅವರ ಅಕಾಲಿಕ ನಿಧನದ ನಂತರ ರಿಷಬ್ ಶೆಟ್ಟಿ ಅವರು ಆ ಪಾತ್ರಕ್ಕೆ ನನ್ನನ್ನು ಹುಡುಕಿಸಿ ಕರೆಸಿಕೊಂಡರು. ಚಿತ್ರದಲ್ಲಿರುವ ಹುರಿ ಮೀಸೆ ಒರಿಜಿನಲ್. ಕೆಲಸದಲ್ಲಿ ರಿಷಬ್ ಶೆಟ್ರು ರಾಕ್ಷಸ. ಬರೋಬ್ಬರಿ ಒಂದೂವರೆ ವರ್ಷ ಚಿತ್ರೀಕರಣ ನಡೆಸಿದ್ದು, ನನ್ನ ಪಾತ್ರವನ್ನು 28 ದಿನ ಚಿತ್ರೀಕರಿಸಲಾಯಿತು. ಹೊಂಬಾಳೆ ಪ್ರೊಡಕ್ಷನ್‌ನವರು ಎಲ್ಲರನ್ನು ಚೆನ್ನಾಗಿ ನೋಡಿಕೊಂಡರು ಎಂದು ನಟ ರಂಜನ್ ಶೆಟ್ಟಿ ತಿಳಿಸಿದ್ದಾರೆ.

ವಿಶೇಷ ಅನುಭವ: ಕಾಟೇರ, ಕೆಜಿಎಫ್ ನಂತಹ ಹಲವು ದೊಡ್ಡ ಚಿತ್ರಗಳಲ್ಲಿ ನಟಿಸಿದ್ದೇನೆ. ಆದರೆ ಕಾಂತಾರದ ಅನುಭವವೇ ಬೇರೆ. ಸೆಟ್‌ನಲ್ಲಿ ಎತ್ತ ನೋಡಿದರೂ ಕಲಾವಿದರ ದಂಡು. ಚುಕ್ಕಾಣಿ ಹಿಡಿದ ರಿಷಬ್ ಎಲ್ಲರನ್ನೂ–ಎಲ್ಲವನ್ನೂ ನಿಭಾಯಿಸಿದರು. ಲುಕ್ ಟೆಸ್ಟ್ ನಂತರ ನನಗೆ ಪಾತ್ರ ನೀಡಿದರು. 6 ದಿನ ನಟಿಸಿದ್ದೇನೆ. ಕುಂದಾಪುರದಲ್ಲಿ ನಡೆದ ಶೂಟಿಂಗ್ ಅನುಭವ ಮರೆಯಲು ಸಾಧ್ಯವೇ ಇಲ್ಲ. ಒಟ್ಟಾರೆ 'ನ ಭೂತೋ ನ ಭವಿಷ್ಯತಿ (ಹಿಂದೆಯೂ ಇಲ್ಲದ ಮುಂದೆಯೂ ಬಾರದು)' ಎಂಬಂತೆ 'ಕಾಂತಾರ' ನಿರ್ಮಾಣವಾಗಿದೆ ಎಂದು ನಟ ಗೌತಮ್‌ರಾಜ್ ಹರ್ಷ ವ್ಯಕ್ತಪಡಿಸಿದ್ದಾರೆ.

ಪುಟಾಣಿಗಳ ಸಂತಸ

ಮೈಸೂರಿನ ಯರಗನಹಳ್ಳಿ ಪಾಪಣ್ಣ ಲೇಔಟ್‌ನ ಪುರುಷೋತ್ತಮ್ ಮತ್ತು ರೇಣುಕಾ ದಂಪತಿ ಮಕ್ಕಳಾದ ಲೇಖನ (ಲಡ್ಡು) ಮತ್ತು ಸಾನ್ವಿ ಹಾಡಿ ಮಕ್ಕಳ ಪಾತ್ರಗಳಲ್ಲಿ ಉತ್ತಮವಾಗಿ ಅಭಿನಯಿಸಿದ್ದಾರೆ. ಕೊಡವ ಮಾಡೆಲ್ ಶಾಲೆಯಲ್ಲಿ ಓದುತ್ತಿರುವ ಇವರು ಓದಿನ ಜೊತೆಗೆ ನಟನೆ, ನೃತ್ಯ, ಚಿತ್ರಕಲೆಯಲ್ಲೂ ಸಕ್ರಿಯರಾಗಿದ್ದು, ಈಗಾಗಲೇ ಡ್ರಾಮಾ ಜೂನಿಯರ್ ರಿಯಾಲಿಟಿ ಶೋನಲ್ಲೂ ಪಾಲ್ಗೊಂಡಿದ್ದರು. ಮಲೆಯಾಳಂ ಚಿತ್ರದಲ್ಲೂ ನಟಿಸಿ ಸೈ ಎನಿಸಿಕೊಂಡಿದ್ದಾರೆ.

ಅ.26ಕ್ಕೆ ಮೈಸೂರಲ್ಲಿ ರಾಷ್ಟ್ರೀಯ ಮಟ್ಟದ ಶ್ವಾನ ಸ್ಪರ್ಧೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ರಾಷ್ಟ್ರಮಟ್ಟದ ಶ್ವಾನ ಸ್ಪರ್ಧೆಯ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು, ಅ.18(ಜಿಎ)–ಮೈಸೂರು ಕೆನೈನ್ ಕ್ಲಬ್ ವತಿಯಿಂದ ಅ.26ರ ಬೆಳಗ್ಗೆ 9ರಿಂದ ರಾತ್ರಿ 8ರವರೆಗೆ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ರಾಷ್ಟ್ರ ಮಟ್ಟದ ಶ್ವಾನ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಕ್ಲಬ್ ಅಧ್ಯಕ್ಷ ಬಿ.ಪಿ. ಮಂಜುನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 11ನೇ ವರ್ಷದ ರಾಷ್ಟ್ರೀಯ ಮಟ್ಟದ ಶ್ವಾನ ಸ್ಪರ್ಧೆಯನ್ನು ನಡೆಸುತ್ತಿದ್ದು, ಕಳೆದ ವರ್ಷ 436 ಶ್ವಾನಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದವು. ಈ ಬಾರಿ 500 ಶ್ವಾನಗಳ ನಿರೀಕ್ಷೆ ಇದೆ. ಈಗಾಗಲೇ ಸಾಕಷ್ಟು ನೋಂದಣಿಯಾಗಿದೆ ಎಂದರು.

ಸ್ಪರ್ಧೆಯಲ್ಲಿ 3 ಕೆಜಿ ಇರುವ ಮಿನಿಯೇಚರ್ ಪಿಂಷರ್ ಮತ್ತು 100 ಕೆಜಿಗೂ ಹೆಚ್ಚು ತೂಕವಿರುವ ಸೇಂಟ್ ಬರ್ನಾಡ್, ಗ್ರೇಟ್ ಡೇನ್, ಇಂಗ್ಲಿಷ್ ಮ್ಯಾಸ್ಟಿಫ್, ಬುಲ್‌ಡಾಗ್, ಸೈನಿರಿಯನ್ ಅಸ್ಕಿ, ಗೋಲ್ಡನ್ ರಿಟ್ರೀವರ್, ಲ್ಯಾಬ್ರಡಾರ್ ರಿಟ್ರೀವರ್, ಜರ್ಮನ್ ಶೆಫರ್ಡ್, ಪಗ್, ಚೌಚೌ, ಬಾಕ್ಸರ್‌ಗಳಲ್ಲದೆ, ದೇಶೀಯ ತಳಿಗಳಾದ ಮುಧೋಳ್, ಕೋಂಬಾಯ್, ಕ್ಯಾರವಾನ್ ಹೌಂಡ್, ರಾಜಪಾಳ್ಯಂ, ವಿದೇಶದಿಂದ ಫ್ರಾನ್ಸ್‌ನ ಬಿಚೋನ್ ಫ್ರಿಸ್, ಅಮೆರಿಕದಿಂದ ಜೆರ್ಬಿರಿಯನ್ ಶೆಪ್ಸ್ಕಿ ಮತ್ತು ಬ್ರಿಟನ್ ಬಾರ್ಡರ್ ಕಾಲಿ ಮೊದಲಾದ ಶ್ವಾನಗಳು ಗಮನ ಸೆಳೆಯಲಿವೆ ಎಂದು ತಿಳಿಸಿದರು.

ಶ್ವಾನ ಪ್ರದರ್ಶನ ಸ್ಪರ್ಧೆಯಲ್ಲಿ ಭಾಗವಹಿಸುವವರು www.dogsnshow.com ವೆಬ್‌ಸೈಟ್‌ಗೆ ಭೇಟಿ ನೀಡಿ ನೊಂದಾಯಿಸಿಕೊಳ್ಳಬೇಕು. ಮೂರು ತಲೆಮಾರಿನ ವಂಶವೃಕ್ಷದ ಪ್ರಮಾಣ ಪತ್ರವನ್ನು ಕೆಸಿಐನಿಂದ ಪಡೆದುಕೊಂಡಿರಬೇಕು. ಪ್ರತಿಯೊಂದು ಶ್ವಾನಕ್ಕೆ ಮೈಕ್ರೋಚಿಪ್ ಅಳವಡಿಸಿ, ಪ್ರವೇಶ ದ್ವಾರದಲ್ಲಿ ಪರೀಕ್ಷೆ ಮಾಡುವಾಗ ನೋಂದಣಿ ಸಂಖ್ಯೆ ನಿಖರವಾಗಿ ಪ್ರದರ್ಶಿಸಬೇಕು. ಯಾವುದೇ ಶ್ವಾನಕ್ಕೆ ಆರೋಗ್ಯ ಸರಿ ಇಲ್ಲದಿದ್ದರೆ, ತೀರ್ಪುಗಾರರ ವಿರುದ್ಧ ರೋಷ, ಕೋಪ, ಆಕ್ರಮಣ(ಕಚ್ಚುವುದು) ಮಾಡಿದರೆ ಕೂಡಲೇ ಸ್ಪರ್ಧೆಯಿಂದ ವಾಪಸ್ ಕಳುಹಿಸುತ್ತೇವೆ. ಒಂದು ಶ್ವಾನಕ್ಕೆ ಒಬ್ಬರೇ ಪ್ರದರ್ಶನ ಮಾಡಬೇಕು. ಶ್ವಾನಕ್ಕೆ ಮೊದಲೇ ಎಲ್ಲಾ ರೀತಿಯ ತರಬೇತಿ ನೀಡಿರಬೇಕು ಎಂದು ವಿವರಿಸಿದರು.

ಈ ಬಾರಿ ಭಾರತದ ರಾಂಚಿ, ಬಾಂಬೇ, ಪೂನಾ, ಗ್ವಾಲಿಯರ್, ಕೊಲ್ಕತ್ತಾ, ತಮಿಳುನಾಡು ಸೇರಿದಂತೆ ದೇಶದ ವಿವಿಧ ಭಾಗದಿಂದ ಸ್ಪರ್ಧೆಯಲ್ಲಿ ಶ್ವಾನಗಳು ಪಾಲ್ಗೊಳ್ಳಲಿದ್ದು, ಶ್ವಾನಗಳು ಮತ್ತು ಶ್ವಾನ ಪ್ರಿಯರ ನಡುವಿನ ಹೊಂದಾಣಿಕೆ ಪ್ರದರ್ಶಿಸಲು ವಿಶೇಷವಾಗಿ ಆಜ್ಞೆಪಾಲನಾ ಸ್ಪರ್ಧೆಯೂ ಆಯೋಜಿಸಲಾಗಿದೆ. ಪ್ರವೇಶ ದರ 50 ರೂ.,ಗಳಾಗಿದ್ದು, ಹೆಚ್ಚಿನ ಮಾಹಿತಿಗಾಗಿ 9886791394, 9845079165, 9886208123, 9886703122 ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಸಿ.ಎಸ್.ಅರುಣ್, ಹರ್ಷ, ವಿ.ಮನೋಹರ್, ಎಂ.ಹೆಚ್.ಅಭಿಷೇಕ್, ಚರಣ್, ಚಿರಾಗ್, ಗಿರೀಶ್ ಉಪಸ್ಥಿತರಿದ್ದರು.

ವಿಜಯನಗರದಲ್ಲಿ ಎಂಡಿಎ ತೆರವು ಕಾರ್ಯಾಚರಣೆ: 30 ಕೋಟಿ ಮೌಲ್ಯದ ಆಸ್ತಿ ಸಂರಕ್ಷಣೆ




ಮೈಸೂರು, ಅ. 18 (ಆರ್‌ಕೆ)– ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ದ ಅಧಿಕಾರಿಗಳು ಇಂದು ವಿಜಯನಗರ ಮೂರನೇ ಹಂತದ ಶ್ರೀ ಸಪ್ತ ಮಾತೃಕಾ ದೇವಸ್ಥಾನದ ಬಳಿ ಕಾರ್ಯಾಚರಣೆ ನಡೆಸಿ ಸುಮಾರು 30 ಕೋಟಿ ರೂ ಮೌಲ್ಯದ ಆಸ್ತಿಯನ್ನು ಸಂರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮೈಸೂರು ತಾಲೂಕು, ಕಸಬಾ ಹೋಬಳಿ, ಹಿನಕಲ್ ಗ್ರಾಮದ ಸರ್ವೇ ನಂ. 237/2ಬಿರಲ್ಲಿ 1.23 ಎಕರೆ ಹಾಗೂ 238/2ರಲ್ಲಿ 37 ಗುಂಟೆ ಸೇರಿ ಒಟ್ಟು 2.20 ಎಕರೆ ಭೂಮಿಯನ್ನು ಹಿಂದಿನ ಮುಡಾ ಅಧಿಕಾರಿಗಳು ವಸತಿ ಬಡಾವಣೆಗಳಿಗಾಗಿ ಸ್ವಾಧೀನಪಡಿಸಿಕೊಂಡು ಭೂ ಮಾಲೀಕರಿಗೆ ಪರಿಹಾರದ ಹಣವನ್ನು ನೀಡಲಾಗಿತ್ತಾದರೂ ತೆರವುಗೊಳಿಸಿರಲಿಲ್ಲ. ಈ ಸಂಬಂಧ ಪ್ರಾಧಿಕಾರವು ನ್ಯಾಯಾಲಯದ ಮೆಟ್ಟಿಲೇರಿತ್ತು. ವಿಚಾರಣೆ ನಡೆಸಿದ ನ್ಯಾಯಾಲಯವು ಸದರಿ ಆಸ್ತಿಯನ್ನು ತೆರವುಗೊಳಿಸಿ ವಶಕ್ಕೆ ಪಡೆಯುವಂತೆ ನಿರ್ದೇಶನ ನೀಡಿದ್ದ ಹಿನ್ನೆಲೆಯಲ್ಲಿ ಎಂಡಿಎ ಆಯುಕ್ತ ಕೆ.ಆರ್.ರಕ್ಷಿತ್ ಹಾಗೂ ಕಾರ್ಯದರ್ಶಿ ಜಾನ್‌ಸನ್ ಅವರ ಸೂಚನೆಯಂತೆ ಇಂದು ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು ಜೆಸಿಬಿ ಮೂಲಕ ಕಟ್ಟಡಗಳನ್ನು ನೆಲಸಮಗೊಳಿಸಿ, ಸುಮಾರು 30 ಕೋಟಿ ರೂ. ಮೌಲ್ಯದ ಆಸ್ತಿ ವಶಕ್ಕೆ ಪಡೆದುಕೊಂಡರು. ಎಕ್ಸಿಕ್ಯೂಟಿವ್ ಇಂಜಿನಿಯರ್ (ಉತ್ತರ) ಮಹೇಶ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಸುನಿತಾ, ಜೂನಿಯರ್ ಇಂಜಿನಿಯರ್ ಸತೀಶ್‌ಚಂದ್ರ, ರೆವಿನ್ಯೂ ಇನ್ಸ್‌ಪೆಕ್ಟರ್ ಟಿ.ಮಂಜುನಾಥ್, ವಿಶೇಷ ಭೂ ಸ್ವಾಧೀನಾಧಿಕಾರಿ ಶಾಖೆಯ ಸಚಿನ್ ಇತರರು ತೆರವು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ನಂತರ ಸ್ಥಳದಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಸ್ತಿ ಎಂಬ ಫಲಕವನ್ನು ಅಳವಡಿಸಲಾಯಿತು.

ಮತ ಕಳ್ಳತನ ವಿರೋಧಿಸಿ ಮೈಸೂರಲ್ಲಿ ಕಾಂಗ್ರೆಸ್‌ನಿಂದ ಸಹಿ ಸಂಗ್ರಹ ಅಭಿಯಾನ

ಗಾಂಧಿ ವೃತ್ತದಲ್ಲಿ ಸಹಿ ಸಂಗ್ರಹ ಚಳವಳಿ, ಕೇಂದ್ರದ ವಿರುದ್ಧ ವಾಗ್ದಾಳಿ



ಮತ ಕಳ್ಳತನ ಸಹಿ ಸಂಗ್ರಹ ಅಭಿಯಾನವನ್ನು ಗಾಂಧಿ ವೃತ್ತದಲ್ಲಿ ಮೈಸೂರು ನಗರ ಮತ್ತು ಗ್ರಾಮಾಂತರ ಕಾಂಗ್ರೆಸ್ ವತಿಯಿಂದ ನಡೆಸಲಾಯಿತು.

ಮೈಸೂರು,ಅ.18(ಜಿಎ)–ಮತಗಳ್ಳತನ ಮಾಡಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವ ನರೇಂದ್ರ ಮೋದಿ ಸರ್ಕಾರದ ವಿರುದ್ಧ ದೇಶಾದ್ಯಂತ ಕಾಂಗ್ರೆಸ್ ವತಿಯಿಂದ ನಡೆಸುತ್ತಿರುವ ಮತ ಕಳ್ಳತನ ಸಹಿ ಸಂಗ್ರಹ ಅಭಿಯಾನವನ್ನು ಮೈಸೂರಿನಲ್ಲಿ ಗಾಂಧಿವೃತ್ತದಲ್ಲಿ ಮೈಸೂರು ನಗರ ಮತ್ತು ಗ್ರಾಮಾಂತರ ಕಾಂಗ್ರೆಸ್ ವತಿಯಿಂದ ನಡೆಸಲಾಯಿತು.

ಸಹಿ ಸಂಗ್ರಹ ಅಭಿಯಾನಕ್ಕೆ ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್.ಉಗ್ರಪ್ಪ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ದೇಶದಲ್ಲಿ ಸರ್ವಾಧಿಕಾರಿ ಧೋರಣೆ ಪ್ರವೃತ್ತಿಯನ್ನು ಕಾಣುತ್ತಿದ್ದೇವೆ. ಪ್ರಧಾನಿ ನರೇಂದ್ರ ಮೋದಿ ಯೋಜನೆಗಳ ಮೂಲಕ ಜನರ ವಿಶ್ವಾಸಗಳಿಸಲು ವಿಫಲವಾಗಿದ್ದಾರೆ. ಐದು ವರ್ಷಗಳ ಬದಲಿಗೆ ನೂರು ದಿನಗಳ ಆಡಳಿತ ದೊರೆತರೆ ದಿನನಿತ್ಯದ ವಸ್ತುಗಳ ಬೆಲೆ ಇಳಿಸುವೆ ಅಂದಿದ್ದರು. ಆದರೆ ಈತನಕ ಬೆಲೆಗಳು ಇಳಿಕೆ ಆಗಿಲ್ಲ. ದಿನದಿಂದ ದಿನಕ್ಕೆ ಜನಸಾಮಾನ್ಯರು ಬಳಸುವ ವಸ್ತುಗಳ ಬೆಲೆ ಹೆಚ್ಚಾಗುತ್ತಿವೆ. ಇದೇನಾ ಅಚ್ಚೇ ದಿನಾ ಎಂದು ಪ್ರಶ್ನಿಸಿದರು.

ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ 200 ಲಕ್ಷ ಕೋಟಿ ಸಾಲ ಮಾಡಲಾಗಿದೆ. ಚುನಾವಣೆಯಲ್ಲಿ ಗೆಲುವು ಸಾಧಿಸಲು ತಮ್ಮ ಚೇಲಾಗಳನ್ನು ನೇಮಕ ಮಾಡಿಕೊಂಡಿದ್ದಾರೆ. ವಾಮಮಾರ್ಗದ ಮೂಲಕ ಅಧಿಕಾರ ಪಡೆಯುವ ಯತ್ನವಾಗಿದೆ. ಚುನಾವಣಾ ಅಕ್ರಮಗಳಿಂದ ಗೆಲ್ಲುವ ಕೆಲಸ ನಡೆಯುತ್ತಿದೆ. ನೈಜ ಮತದಾರರನ್ನು ತೆಗೆಯುವ ಕೆಲಸ ಮಾಡಲಾಗುತ್ತಿದೆ ಎಂದು ಕಿಡಿಕಾರಿದರು.

ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ ಮಾತನಾಡಿ, ಸ್ವಾತಂತ್ರ್ಯ ಪೂರ್ವಕ್ಕೂ ಮುನ್ನ ಹುಟ್ಟಿದ ಕಾಂಗ್ರೆಸ್ ದೇಶದ ಎಲ್ಲ ಧರ್ಮ, ಜಾತಿಯನ್ನು ಸಮಾನತೆಯಿಂದ ಕೊಂಡೊಯ್ಯುವ ಕೆಲಸ ಮಾಡಿಕೊಂಡು ಬಂದಿದೆ. ದೇಶದಲ್ಲಿ ಯಾರೇ ತಪ್ಪು ಮಾಡಿದರೂ ಅದನ್ನು ತಿದ್ದುವ ಕೆಲಸ ಮಾಡಲಿದೆ. ಅಧಿಕಾರ ಇಲ್ಲವೆಂದು ಮನೆಯಲ್ಲಿ ಕೂರದೆ ಜನಪರವಾಗಿ ಕೆಲಸ ಮಾಡಲಾಗುತ್ತಿದೆ ಎಂದರು.


ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಮಾತನಾಡಿ, ಬಿಜೆಪಿ ಮತಗಳ್ಳತನ ನಡೆದು ಅಧಿಕಾರಕ್ಕೆ ಬಂದಿದೆ. ಪ್ರಿಯಾಂಕ ಖರ್ಗೆ ಅವರ ಮೇಲೆ ಬೆದರಿಕೆ ಹಾಕಲಾಗುತ್ತಿದೆ. ಆರ್‌ಎಸ್‌ಎಸ್, ಬಜರಂಗದಳ, ವಿಎಚ್‌ಪಿ ಸಂಘಟನೆಗಳು ಧರ್ಮ, ಜಾತಿ ಹೆಸರಿನಲ್ಲಿ ಅಶಾಂತಿ ವಾತಾವರಣ ನಿರ್ಮಾಣ ಮಾಡುತ್ತಿವೆ ಎಂದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಕಾಂಗ್ರೆಸ್ ಮತದಾರರು ಇರುವ ಕಡೆಗಳಲ್ಲಿ ಅವರುಗಳ ಹೆಸರನ್ನು ತೆಗೆಯುವ ಕೆಲಸ ಮಾಡಲಾಗುತ್ತಿದೆ. ಖಾಲಿ ನಿವೇಶನ, ಮನೆಗಳಲ್ಲಿ ಸೇರಿಸಿದ್ದರಿಂದ 23 ಸಾವಿರ ಮತದಾರರನ್ನು ಸೇರಿಸಿ ಮತಗಳ್ಳತನ ಮಾಡಲಾಗಿದೆ. ಕೇಸರಿ ಬಾವುಟ, ಹಣೆಗೆ ನಾಮ ಹಾಕಿ ಹುಚ್ಚೆಬ್ಬಿಸುವ ಕೆಲಸ ಮಾಡಲಾಗುತ್ತಿದೆ ಹೊರತು ಬೇರೇನೂ ಮಾಡುತ್ತಿಲ್ಲ ಎಂದು ಕಿಡಿಕಾರಿದರು.

ವಿಧಾನಪರಿಷತ್ ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ ಮಾತನಾಡಿ, ಚುನಾವಣೆಗಳಲ್ಲಿ ಬಿಜೆಪಿ ಪರವಾಗಿ ಮತ ಹೆಚ್ಚು ಬೀಳುವಂತೆ ಮತ್ತು ಕಾಂಗ್ರೆಸ್ ಪರವಾಗಿ ಬೀಳುವುದನ್ನು ಕಡಿಮೆ ಮಾಡುವುದನ್ನು ವ್ಯವಸ್ಥಿತವಾಗಿ ಮಾಡಿಕೊಂಡು ಬರಲಾಗುತ್ತಿದೆ. ಇದನ್ನು ಸಮಗ್ರವಾಗಿ ಅಧ್ಯಯನ ಮಾಡಿದ ರಾಹುಲ್ ಗಾಂಧಿ ಅವರು ಹೋರಾಟ ಮಾಡಿಕೊಂಡು ಬರುತ್ತಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಶಿವಪ್ರಸಾದ್, ನಗರಾಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿಗಳಾದ ಈಶ್ವರ್ ಡಿ.ಚಕ್ಕಡಿ, ಎಂ.ಶಿವಣ್ಣ, ಭಾಸ್ಕರ್ ಎಲ್.ಗೌಡ, ಜಿಪಂ ಮಾಜಿ ಅಧ್ಯಕ್ಷರಾದ ಬಿ.ಎಂ.ರಾಮು, ಲತಾ ಸಿದ್ದಶೆಟ್ಟಿ, ಮಾಜಿ' ಮೇಯರ್ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ, ಮೋದಾಮಣಿ, ಪುಷ್ಪಲತಾ ಜಗನ್ನಾಥ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷೆ ಸುಶೀಲ ಕೇಶವಮೂರ್ತಿ, ನಗರಪಾಲಿಕೆ ಮಾಜಿ ಸದಸ್ಯರಾದ ಎಂ.ಪ್ರದೀಪ್‌ಕುಮಾರ್, ಕೆ.ವಿ. ಮಲ್ಲೇಶ್, ಕೆಪಿಸಿಸಿ ಹೆಚ್.ಎ.ವೆಂಕಟೇಶ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಜಿಪಂ ಮಾಜಿ ಸದಸ್ಯರಾದ ಸುಧಾ ಮಹದೇವಯ್ಯ, ಡಾ.ಸುಜಾತ ಶ್ರೀನಿವಾಸರಾವ್, ಕೆಪಿಸಿಸಿ ಸಂಯೋಜಕ ಎನ್.ಭಾಸ್ಕರ್, ವಕ್ತಾರ ಕೆ.ಮಹೇಶ್, ಸೋಮಶೇಖರ್, ಗಿರೀಶ್ ನಾಯಕ, ಡೈರಿ ವೆಂಕಟೇಶ್, ಮಂಚೇಗೌಡನ ಕೊಪ್ಪಲು ರವಿ, ಹಿಂದುಳಿದ ವರ್ಗಗಳ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎನ್.ಆರ್.ನಾಗೇಶ್, ಜವರಪ್ಪ, ಉತ್ತನಹಳ್ಳಿ ಶಿವಣ್ಣ, ಎಂ.ಕೆ.ಅಶೋಕ್,ರೋಹಿತ್ ನಾಯಕ, ಸಾ.ಮ.ಯೋಗೀಶ್, ವಿಶ್ವ ಮತ್ತಿತರರು ಉಪಸ್ಥಿತರಿದ್ದರು.

ಕಬ್ಬು ಅರೆಯುವಿಕೆ ಪ್ರತ್ಯೇಕಿಸಿದ್ದರಿಂದ ಸಕ್ಕರೆ ಕಾರ್ಖಾನೆಗಳ ಪೈಪೋಟಿ ನಿವಾರಣೆ



ಶಿವಾನಂದ ಪಾಟೀಲ್

ಬೆಂಗಳೂರು, ಅ.18(ಕೆಎಂಶಿ)– ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ನಂತರ ಹಳೇ ಮೈಸೂರು ಹಾಗೂ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಕಬ್ಬು ಅರೆಯುವಿಕೆ ದಿನಾಂಕವನ್ನು ಪ್ರತ್ಯೇಕಿಸಲಾಯಿತು. ಇದರಿಂದ ಸಕ್ಕರೆ ಕಾರ್ಖಾನೆಗಳ ನಡುವೆ ಅನಾರೋಗ್ಯಕರ ಪೈಪೋಟಿ ನಿವಾರಣೆ ಮಾಡಲು ಸಾಧ್ಯವಾಗಿದೆ. ಅಲ್ಲದೆ, ಸಕ್ಕರೆ ಇಳುವರಿ ಪ್ರಮಾಣದಲ್ಲೂ ಹೆಚ್ಚಳವಾಗಿದೆ ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ್ ತಿಳಿಸಿದ್ದಾರೆ.

ಈ ಮೊದಲು ಮಂಡ್ಯ, ಮೈಸೂರು, ಹಾಸನ, ಚಾಮರಾಜನಗರ ಜಿಲ್ಲೆಗಳಲ್ಲಿ ಜೂನ್ 22ರಿಂದ ಹಾಗೂ ಬೆಳಗಾವಿ, ವಿಜಯಪುರ, ಬೀದರ್, ಕಲಬುರಗಿ, ಬಾಗಲಕೋಟೆ, ಗದಗ, ಯಾದಗಿರಿ, ದಾವಣಗೆರೆ, ಉತ್ತರ ಕನ್ನಡ, ಬಳ್ಳಾರಿ, ವಿಜಯನಗರ ಮತ್ತು ಹಾವೇರಿ ಜಿಲ್ಲೆಗಳ ಸಕ್ಕರೆ ಕಾರ್ಖಾನೆಗಳು ನವೆಂಬರ್ 1ರಿಂದ ಕಬ್ಬು ಅರೆಯುವಿಕೆ ಆರಂಭಿಸಬೇಕು ಎಂದು ನಿರ್ಧರಿಸಲಾಗಿತ್ತು. ದಾವಣಗೆರೆ ಸೇರಿದಂತೆ ಉತ್ತರ ಕರ್ನಾಟಕದ ಸಕ್ಕರೆ ಕಾರ್ಖಾನೆಗಳಿಗೆ ಅ.20ರಿಂದಲೇ ಕಬ್ಬು ಕ್ರಷಿಂಗ್ ಆರಂಭಿಸಲು ಅನುಮತಿ ನೀಡಲಾಗಿದೆ.

ಕಬ್ಬು ಕಟಾವಿಗೆ ಬಂದಿದ್ದು, ನವೆಂಬರ್ 1ರವರೆಗೆ ಕ್ರಷಿಂಗ್ ಆರಂಭಿಸದಿದ್ದರೆ ಸಕ್ಕರೆ ಇಳುವರಿ ಕಡಿಮೆಯಾಗಲಿದೆ, ರೈತರಿಗೂ ಸಮಸ್ಯೆಯಾಗಲಿದೆ, ಬೇಗ ಆರಂಭಿಸಲು ಅನುಮತಿ ನೀಡಬೇಕು ಎಂಬುದಾಗಿ ಉತ್ತರ ಕರ್ನಾಟಕದ ಹಲವು ಸಕ್ಕರೆ ಕಾರ್ಖಾನೆಗಳ ಆಡಳಿತ ಮಂಡಳಿ ಹಾಗೂ ರೈತ ಮುಖಂಡರು ಮನವಿ ಮಾಡಿಕೊಂಡ ಹಿನ್ನೆಲೆಯಲ್ಲಿ ಅ.20ರಿಂದಲೇ ಕ್ರಷಿಂಗ್ ಆರಂಭಿಸಲು ಅನುಮತಿ ನೀಡಲಾಗಿದೆ ಎಂದರು.

ದೇಶ - ವಿದೇಶ

ಸಂಸದರಿಗೆ ಹಂಚಿಕೆಯಾಗಿದ್ದ ಬ್ರಹ್ಮಪುತ್ರ ಅಪಾರ್ಟ್‌ಮೆಂಟ್‌ನಲ್ಲಿ ಅಗ್ನಿ ಅವಘಡ



ನವದೆಹಲಿ: ಕೇಂದ್ರ ದೆಹಲಿಯ ಬಾಬಾ ಖಡಕ್ ಸಿಂಗ್ ಮಾರ್ಗದಲ್ಲಿರುವ ಬ್ರಹ್ಮಪುತ್ರ ಅಪಾರ್ಟ್‌ಮೆಂಟ್‌ನಲ್ಲಿ ಶನಿವಾರ ಮಧ್ಯಾಹ್ನ ಬೆಂಕಿ ಕಾಣಿಸಿಕೊಂಡಿದೆ. ಈ ಅಪಾರ್ಟ್‌ಮೆಂಟ್‌ಗಳನ್ನು ಹಲವಾರು ಲೋಕಸಭಾ ಮತ್ತು ರಾಜ್ಯಸಭಾ ಸಂಸದರಿಗೆ ಹಂಚಿಕೆ ಮಾಡಲಾಗಿದೆ. ಇಂದು ಮಧ್ಯಾಹ್ನ 1.23ಕ್ಕೆ ಬೆಂಕಿ ಕಾಣಿಸಿಕೊಂಡ ಬಗ್ಗೆ ಮಾಹಿತಿ ಬಂದಿದ್ದು, ತಕ್ಷಣ ಆರು ಅಗ್ನಿಶಾಮಕ ವಾಹನಗಳನ್ನು ಸ್ಥಳಕ್ಕೆ ರವಾನಿಸಲಾಗಿದೆ ಎಂದು ದೆಹಲಿ ಅಗ್ನಿಶಾಮಕ ಅಧಿಕಾರಿಗಳು ತಿಳಿಸಿದ್ದಾರೆ. ಮಧ್ಯಾಹ್ನ 2.10ರ ಸುಮಾರಿಗೆ ಬೆಂಕಿಯನ್ನು ಸಂಪೂರ್ಣ ನಿಯಂತ್ರಣಕ್ಕೆ ತರಲಾಯಿತು ಎಂದು ಅಗ್ನಿಶಾಮಕ ಅಧಿಕಾರಿಯೊಬ್ಬರು ಹೇಳಿದ್ದಾರೆ. 2020ರಲ್ಲಿ ಪ್ರಧಾನಿ ಮೋದಿ ಉದ್ಘಾಟಿಸಿದ ಈ ಕಟ್ಟಡವು ಹಲವಾರು ಲೋಕಸಭಾ ಮತ್ತು ರಾಜ್ಯಸಭಾ ಸಂಸದರಿಗೆ ಹಂಚಿಕೆ ಮಾಡಲಾಗಿದೆ. ಅಪಾರ್ಟ್‌ಮೆಂಟ್‌ನಲ್ಲಿರುವ ಅಗ್ನಿಶಾಮಕ ಹೈಡ್ರಂಟ್ ಕಾರ್ಯನಿರ್ವಹಿಸುತ್ತಿಲ್ಲ ಮತ್ತು ಟ್ಯಾಂಕ್ ಹಾಗೂ ಪೈಪ್ ಲೈನ್‌ಗಳಲ್ಲಿ ನೀರಿಲ್ಲ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.


ಪಾಕಿಸ್ತಾನದಿಂದ ವೈಮಾನಿಕ ದಾಳಿ: ಆಫ್ಘಾನಿಸ್ತಾನದ ಮೂವರು ಕ್ರಿಕೆಟಿಗರು ಸಾವು



ಕಾಬೂಲ್: ಪಾಕಿಸ್ತಾನ ಹಾಗೂ ಆಫ್ಘನ್ ನಡುವೆ ಸಂಘರ್ಷ ಮುಂದುವರೆದಿದ್ದು ಪಾಕ್ ನಡೆಸಿದ ವೈಮಾನಿಕ ದಾಳಿಯಲ್ಲಿ ಅಫ್ಘಾನಿಸ್ತಾನದ ಮೂವರು ಕ್ರಿಕೆಟರ್‌ಗಳು ಮೃತಪಟ್ಟಿದ್ದಾರೆ.

ಈ ಬಗ್ಗೆ ಆಫ್ಘಾನಿಸ್ತಾನದ ಕ್ರಿಕೆಟ್ ಮಂಡಳಿ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಸ್ಥಳೀಯ ಕ್ರಿಕೆಟಿಗರು ಮೃತ ಪಟ್ಟಿರುವುದನ್ನು ಖಚಿತಪಡಿಸಿ ಶೋಕ ವ್ಯಕ್ತಪಡಿಸಿದೆ. ಸೌಹಾರ್ದ ಪಂದ್ಯದಲ್ಲಿ ಭಾಗವಹಿಸಲು ಆಫ್ಘನ್ ಕ್ಲಬ್ ಮಟ್ಟದ ಯುವ ಆಟಗಾರರು ಪಾಕಿಸ್ತಾನ ಗಡಿಯಲ್ಲಿರುವ ಪೂರ್ವ ಪಕ್ತಿಕಾ ಪ್ರಾಂತ್ಯದ ಉರ್ಗುನ್‌ನಿಂದ ಶರಾನಾಗೆ ಪ್ರಯಾಣಿಸಿದ್ದರು. ಈ ವೇಳೆ ದಾಳಿ ನಡೆದಿದ್ದು, ಇದರಿಂದ ಮೂವರು ಕ್ರಿಕೆಟಿಗರು ಹಾಗೂ ಐವರು ನಾಗರಿಕರು ಸಾವನ್ನಪ್ಪಿದ್ದು, ಇನ್ನು ಕೆಲವರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ಪಾಕ್ ದಾಳಿಗೆ ಮೃತಪಟ್ಟ ಕ್ರಿಕೆಟಿಗರನ್ನು ಕಬೀರ್, ಸಿಬ್ಘತುಲ್ಲಾ ಮತ್ತು ಹರೂನ್ ಎಂದು ಗುರುತಿಸಲಾಗಿದೆ. ಈ ದಾಳಿ ವಿರುದ್ಧ ಆಫ್ಘಾನಿಸ್ತಾನ ಕ್ರಿಕೆಟಿಗರು ಧ್ವನಿಯೆತ್ತಿದ್ದು, ತಮ್ಮ ಸೋಷಿಯಲ್ ಮೀಡಿಯಾ ಖಾತೆಯಲ್ಲಿ ಆಕ್ರೋಶವನ್ನು ಹೊರಹಾಕಿದ್ದಾರೆ.

ಗರೀಬ್ ರಥ ಎಕ್ಸ್‌ಪ್ರೆಸ್ ರೈಲಿನಲ್ಲಿ ಬೆಂಕಿ; ಹೊತ್ತಿ ಉರಿದ ಬೋಗಿಗಳು



ಚಂಡೀಗಢ: ಲುಧಿಯಾನದಿಂದ ದೆಹಲಿಗೆ ಹೋಗುತ್ತಿದ್ದ ಗರೀಬ್ ರಥ ಎಕ್ಸ್‌ಪ್ರೆಸ್ ರೈಲಿನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದ್ದು, ಎಸಿ ಕೋಚ್‌ಗಳು ಹೊತ್ತಿ ಉರಿದ ಘಟನೆ ಪಂಜಾಬ್‌ನಲ್ಲಿ ನಡೆದಿದೆ. ಓರ್ವ ಮಹಿಳಾ ಪ್ರಯಾಣಿಕರಿಗೆ ಸುಟ್ಟ ಗಾಯಗಳಾಗಿದ್ದು, ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆಯ ಸಮಯದಲ್ಲಿ ರೈಲು ಅಮೃತಸರದಿಂದ ಪ್ರಯಾಣಿಸುತ್ತಿತ್ತು. ಆದರೆ ಪ್ರಯಾಣಿಕರಿಗೆ ಯಾವುದೇ ಹಾನಿಯಾಗದೇ ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ. ಘಟನೆ ಬಳಿಕ ಭಯದ ವಾತಾವರಣ ಮೂಡಿದೆ. ಸರ್ಕಾರಿ ರೈಲ್ವೆ ಪೊಲೀಸ್ (ಜಿಆರ್‌ಪಿ) ಅಧಿಕಾರಿಯ ಪ್ರಕಾರ, ಬೆಂಕಿ ಶಾರ್ಟ್ ಸರ್ಕ್ಯೂಟ್‌ನಿಂದ ಉಂಟಾಗಿದೆ. ಪಂಜಾಬ್‌ನ ಸಿರ್ಹಿಂದ್ ರೈಲು ನಿಲ್ದಾಣದಲ್ಲಿ ಬೆಳಗ್ಗೆ 7.30ರ ಸುಮಾರಿಗೆ ಅಮೃತಸರ–ಸಹರ್ಸಾ ಗರೀಬ್ ರಥ ಎಕ್ಸ್‌ಪ್ರೆಸ್‌ನ ಕೋಚ್‌ಗೆ ಬೆಂಕಿ ಹೊತ್ತಿಕೊಂಡಿದೆ. ರೈಲಿನ 2–3, ಜಿ–19 ಎಸಿ ಕೋಚ್‌ಗಳಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಪ್ರಯಾಣಿಕರೊಬ್ಬರು ಕೂಡಲೇ ಸರಪಳಿ ಎಳೆದು ರೈಲನ್ನು ನಿಲ್ಲಿಸಿದರು. ಸದ್ಯ ಕೋಚ್‌ನಲ್ಲಿದ್ದ ಪ್ರಯಾಣಿಕರನ್ನ ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ ಎಂದು ತಿಳಿಸಿದ್ದಾರೆ.

ನೊಬೆಲ್ ಪ್ರಶಸ್ತಿ ಪುರಸ್ಕೃತ ಚೀನಾದ ಶತಾಯುಷಿ ಚೆನ್‌ನಿಂಗ್ ಯಾಂಗ್ ನಿಧನ



ಬೀಜಿಂಗ್: ಚೀನಾದ ಖ್ಯಾತ ಭೌತಶಾಸ್ತ್ರಜ್ಞ ಮತ್ತು ನೊಬೆಲ್ ಪ್ರಶಸ್ತಿ ವಿಜೇತ ಶತಾಯುಷಿ ಚೆನ್ ನಿಂಗ್ ಯಾಂಗ್ (103) ಅವರು ನಿಧನರಾಗಿದ್ದಾರೆ. ಚೆನ್‌ನಿಂಗ್ ಯಾಂಗ್ ಅವರು 1922ರ ಸೆಪ್ಟೆಂಬರ್ 22ರಂದು ಪೂರ್ವ ಚೀನಾದ ಅನ್ಹುಯಿ ಪ್ರಾಂತ್ಯದ ಹಫೆಯ್‌ನಲ್ಲಿ ಜನಿಸಿದ್ದರು. 1940ರ ದಶಕದಲ್ಲಿ ಯಾಂಗ್ ಅವರು ಅಮೆರಿಕದಲ್ಲಿ ವಿದ್ಯಾಭ್ಯಾಸ ಪೂರ್ಣಗೊಳಿಸಿದ್ದರು. ನಂತರ ಹಲವು ಹುದ್ದೆಗಳನ್ನು ಅಲಂಕರಿಸಿದ್ದರು.

1954ರಲ್ಲಿ ಯಾಂಗ್ ಅವರು ಅಮೇರಿಕದ ಭೌತ ಶಾಸ್ತ್ರಜ್ಞ ರಾಬರ್ಟ್ ಮಿಲ್ಸ್ ಅವರೊಂದಿಗೆ ಸಮೀಕರಣಗಳ ಗುಂಪನ್ನು ರಚಿಸಿದ್ದರು. ಇದು ಸಾಪೇಕ್ಷತಾ ಸಿದ್ಧಾಂತದಷ್ಟೇ ಭೌತಶಾಸ್ತ್ರಕ್ಕೆ ಮುಖ್ಯವಾಗಿತ್ತು. ಭೌತವಿಜ್ಞಾನ ನಿಯಮಗಳು ಬಿಂಬ, ಪ್ರತಿಬಿಂಬಗಳೆರಡರಲ್ಲಿ ಒಂದೇ ರೀತಿಯಲ್ಲಿದ್ದು ಕಾರ್ಯ ಸ್ವರೂಪತೆ ಸಂರಕ್ಷಿಸಲಾಗಿರುತ್ತದೆ ಎಂದು ನಂಬಲಾಗಿತ್ತು. ಆದರೆ ಕ್ಷೀಣ ಬೈಜಿಕ ಕ್ರಿಯೆಗಳಲ್ಲಿ ಕ್ರಿಯಾ ಸಾಮ್ಯತೆ ಸುರಕ್ಷಿತವಾಗಿರುವುದಿಲ್ಲ ಎಂದು ಯಾಂಗ್ ಸಂಶೋಧನೆಗಳ ಮೂಲಕ ತೋರಿಸಿದ್ದರು. ಚೆನ್‌ನಿಂಗ್ ಯಾಂಗ್ ಅವರು ಭೌತವಿಜ್ಞಾನದಲ್ಲಿ ಇವರ ಈ ಸಂಶೋಧನೆ ಪರಿಗಣಿಸಿ 1957ರಲ್ಲಿ ನೊಬೆಲ್ ಪ್ರಶಸ್ತಿ ನೀಡಲಾಗಿತ್ತು.

ಸಮಂತಾ ಪ್ರಭು, ತಮನ್ನಾ ಭಾಟಿಯಾ ಹೆಸರಿರುವ ನಕಲಿ ಮತದಾರರ ಪಟ್ಟಿ; ಕೇಸ್ ದಾಖಲು!



ಹೈದರಾಬಾದ್: ಜನಪ್ರಿಯ ನಟಿಯರಾದ ಸಮಂತಾ ರುತ್ ಪ್ರಭು, ತಮನ್ನಾ ಭಾಟಿಯಾ ಮತ್ತು ರಾಕುಲ್ ಪ್ರೀತ್ ಸಿಂಗ್ ಅವರ ಹೆಸರು, ಫೋಟೋ ಇರುವ ನಕಲಿ ಮತದಾರರ ಪಟ್ಟಿಯು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ.

ನಟಿಯರ ಫೋಟೋಗಳು ಮತ್ತು ನಕಲಿ ಮತದಾರರ ಗುರುತಿನ ವಿವರಗಳನ್ನು ಬಳಸಿಕೊಂಡು ನಕಲಿ ಮತದಾರರ ಪಟ್ಟಿ ತಯಾರಿಸಲಾಗಿದೆ ಎಂದು ಚುನಾವಣಾ ಅಧಿಕಾರಿಗಳು ಖಚಿತಪಡಿಸಿದ ನಂತರ ಮಧುರಾ ನಗರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ನಟಿಯರ ಮೂರು ವೋಟರ್ ಕಾರ್ಡ್‌ಗಳಲ್ಲಿ ಒಂದೇ ವಿಳಾಸ ಮುದ್ರಿತವಾಗಿರುವುದು ಕಂಡುಬಂದಿದೆ ಎಂದು ಸಹಾಯಕ ಚುನಾವಣಾ ನೋಂದಣಿ ಅಧಿಕಾರಿ ಸಲ್ಲಿಸಿರುವ ದೂರಿನಲ್ಲಿ ತಿಳಿಸಿದ್ದಾರೆ.

ಇದು ಸಾರ್ವಜನಿಕರನ್ನು ದಾರಿ ತಪ್ಪಿಸುವ ಮತ್ತು ಅಧಿಕೃತ ಚುನಾವಣಾ ಮಾಹಿತಿಯನ್ನು ದುರುಪಯೋಗಪಡಿಸಿ ಕೊಳ್ಳುವ ಉದ್ದೇಶಪೂರ್ವಕ ಪ್ರಯತ್ನದ ಭಾಗವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ಸಂಬಂಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 336(4)(ಮತ್ತೊಬ್ಬರ ಖ್ಯಾತಿಗೆ ಧಕ್ಕೆ ತರುವ ಉದ್ದೇಶದಿಂದ ನಕಲಿ), 353(1)(ಸಿ) (ಸಾರ್ವಜನಿಕ ಕಿಡಿಗೇಡಿತನ) ಅಡಿ ಪ್ರಕರಣ ದಾಖಲಿಸಲಾಗಿದೆ.

ಹಾರಂಗಿಗೆ ಶಾಸಕ ಮಂತರ್‌ಗೌಡ ಬಾಗಿನ ಸಮರ್ಪಣೆ



ಶಾಸಕ ಡಾ. ಮಂತರ್‌ಗೌಡರಿಂದ ಹಾರಂಗಿ ಜಲಾಶಯಕ್ಕೆ ಬಾಗಿನ ಅರ್ಪಣೆ.

ಮಡಿಕೇರಿ, ಅ.18– ಈ ಬಾರಿ ಉತ್ತಮ ಮಳೆಯಾಗಿ ನಿರೀಕ್ಷೆಗೂ ಮೊದಲೇ ಹಾರಂಗಿ ಜಲಾಶಯ ಭರ್ತಿಯಾದ ಹಿನ್ನೆಲೆ ಹಾಗೂ ತುಲಾ ಸಂಕ್ರಮಣ ಜಾತ್ರೆ ಅಂಗವಾಗಿ ಹಾರಂಗಿ ಜಲಾಶಯಕ್ಕೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿದ ಶಾಸಕ ಡಾ. ಮಂತರ್ ಗೌಡ ಜಲಾಶಯಕ್ಕೆ ಬಾಗಿನ ಅರ್ಪಿಸಿದರು.

ಮೊದಲಿಗೆ ಜಲಾಶಯದಲ್ಲಿರುವ ಕಾವೇರಿ ಪ್ರತಿಮೆಗೆ ವಿಶೇಷ ಪೂಜೆ ಸಲ್ಲಿಸಿ ಈ ಬಾರಿ ಉತ್ತಮ ಮಳೆಯಾಗಿರುವುದರಿಂದ ನಾಡು ಸಮೃದ್ಧವಾಗಲೆಂದು ಕಾವೇರಿ ಮಾತೆಯಲ್ಲಿ ಪ್ರಾರ್ಥಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಡಾ. ಮಂತರ್ ಗೌಡ, ರೈತರ ಕೃಷಿಗೆ ನೀರು ಹರಿಸುವ ಜಲಾಶಯಕ್ಕೆ ರೈತರನ್ನು ಕರೆದು ಅವರ ಸಮ್ಮುಖದಲ್ಲಿ ಪೂಜೆ ಸಲ್ಲಿಸಲಾಗಿದೆ. ಜಿಲ್ಲೆ ಹಾಗೂ ನೆರೆ ಜಿಲ್ಲೆಗಳಿಗೆ ಕೃಷಿಗೆ ನೀರೊದಗಿಸುವ ಹಾರಂಗಿ ಜಲಾಶಯಕ್ಕೆ ಎಲ್ಲರೂ ಕೃತಜ್ಞರಾಗಬೇಕು ಎಂದು ಅವರು ಹೇಳಿದರು.

ಈ ಬಾರಿಯ ಮುಂಗಾರಿನಲ್ಲಿ ಉತ್ತಮ ಮಳೆಯಾದ ಪರಿಣಾಮ ರೈತಾಪಿ ವರ್ಗಕ್ಕೂ ಅನುಕೂಲವಾಗಿದೆ. ಜಲಾಶಯದಲ್ಲೂ ಸಾಕಷ್ಟು ಪ್ರಮಾಣದಲ್ಲಿ ನೀರಿನ ಸಂಗ್ರಹವಾಗಿದೆ ಎಂದು ಹೇಳಿದರು.

ಜಲಾಶಯದಲ್ಲಿ ತುಂಬಿರುವ ಹೂಳು ತೆಗೆಯಲು ಅನುದಾನ ಲಭ್ಯವಿದೆ. ಹೂಳೆತ್ತುವ ಕಾಮಗಾರಿಯನ್ನು ಅತ್ಯಂತ ತಾಂತ್ರಿಕವಾಗಿ ಮಾಡಬೇಕಿರುವ ಹಿನ್ನೆಲೆಯಲ್ಲಿ ಸಂಬಂಧಿಸಿದ ಇಲಾಖೆ ಮತ್ತು ಸಂಸ್ಥೆಗೂ ಸೂಕ್ತ ರೀತಿಯ ಸೂಚನೆಗಳನ್ನು ನೀಡಲಾಗಿದೆ. ಎಲ್ಲಿಯೂ ಜೀವ ವೈವಿಧ್ಯ ನಾಶವಾಗದಂತೆ ಎಚ್ಚರಿಕೆ ವಹಿಸಲೂ ಕೂಡ ಸೂಚಿಸಲಾಗಿದೆ ಎಂದು ಹೇಳಿದರು.

ತದ ನಂತರ ನೀರು ಬಳಕೆದಾರರ ಸಂಘಗಳ ಪದಾಧಿಕಾರಿಗಳು, ಕಾವೇರಿ ನೀರು ಬಳಕೆದಾರರ ಮಹಾಮಂಡಳದ ಪ್ರಮುಖರು, ಸಲಹಾ ಸಮಿತಿ ಸದಸ್ಯರ ಜೊತೆ ಸಭೆ ನಡೆಸಿದ ಸಚಿವರು ಹಾರಂಗಿ ಜಲಾನಯನ ಪ್ರದೇಶದ ರಸ್ತೆಗಳು ಮಳೆಯಿಂದ ಹಾನಿಯಾಗಿದೆ. ಈ ಹಿನ್ನೆಲೆಯಲ್ಲಿ ರಸ್ತೆಗಳ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಗಿದೆ. ರಾಜ್ಯ ಸರಕಾರ ಮತ್ತು ಉಪ ಮುಖ್ಯಮಂತ್ರಿಗಳ ವಿಶೇಷ ಸಹಕಾರದಿಂದ ಅನುದಾನವೂ ಬಿಡುಗಡೆಯಾಗಿದೆ. ಹಾರಂಗಿ ಜಲಾಶಯದ ಮುಂದೆ ನೂತನ ಸೇತುವೆಯನ್ನು ನಿರ್ಮಿಸಲಾಗುತ್ತದೆ. ಹಂತ ಹಂತವಾಗಿ ಎಡದಂಡೆ ಮತ್ತು ಬಲದಂಡೆ ನಾಲೆಗಳ ಅಭಿವೃದ್ಧಿಯನ್ನೂ ಮಾಡಲಾಗುತ್ತದೆ ಎಂದರು.

ಇದೇ ಸಂದರ್ಭ ಜಲಾಶಯದ ಅಧಿಕಾರಿಗಳು ಮಳೆಗಾಲದಲ್ಲಿ ಜಲಾಶಯಕ್ಕೆ ಹರಿದು ಬಂದ ನೀರಿನ ಪ್ರಮಾಣ, ನಾಲೆ ಮತ್ತು ನದಿಗಳಿಗೆ ಹರಿಸಲಾದ ನೀರು, ಜಲಾಶಯದಲ್ಲಿ ನೀರಿನ ಸಂಗ್ರಹ ಮತ್ತಿತರ ವಿಚಾರಗಳನ್ನು ಅಂಕಿ ಅಂಶಗಳ ಮೂಲಕ ಶಾಸಕರಿಗೆ ವಿವರಿಸಿದರು.

ಈ ಸಂದರ್ಭ ಕುಶಾಲನಗರ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ. ಶಶಿಧರ್, ನಗರ ಕಾಂಗ್ರೆಸ್ ಅಧ್ಯಕ್ಷ ಜೋಸೆಫ್ ವಿಕ್ಟರ್ ಸೋನ್ಸ್, ನೀರು ಬಳಕೆದಾರರ ಸಂಘದ ಅಧ್ಯಕ್ಷ ಚೌಡೇಗೌಡ, ಕೂಡಿಗೆ ಗ್ರಾಮ ಪಂಚಾಯಿತಿ ಸದ್ಯಸ ಟಿ.ಪಿ.ಹಮೀದ್, ಪುರಸಭೆ ಸದಸ್ಯ ಜಗದೀಶ್, ಕಾವೇರಿ ನೀರಾವರಿ ನಿಗಮದ ಅಧಿಕಾರಿ ಸತೀಶ್, ಕಾರ್ಯಪಾಲಕ ಅಭಿಯಂತರ ಪುಟ್ಟಸ್ವಾಮಿ, ನೀರಾವರಿ ನಿಗಮದ ಅಭಿಯಂತರರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ನ.6ರಿಂದ ಬಾಳುಗೋಡುವಿನಲ್ಲಿ ಅಂತರ ಕೊಡವ ನಮ್ಮೆ



ಬಾಳುಗೋಡು ಕೊಡವ ಸಮಾಜಗಳ ಒಕ್ಕೂಟದ ಪತ್ರಿಕಾಗೋಷ್ಠಿ.

ವಿರಾಜಪೇಟೆ, ಅ.18– ಕೊಡವ ಸಮಾಜಗಳ ಒಕ್ಕೂಟದ ವತಿಯಿಂದ ಬಾಳುಗೋಡುವಿನಲ್ಲಿ ನ.6ರಿಂದ 9 ರವರೆಗೆ ಅಂತರಕೊಡವ ಸಮಾಜಗಳ ನಡುವೆ 12ನೇ ಕೊಡವ ನಮ್ಮೆಯನ್ನು ಆಚರಿಸಲಾಗುವುದು. ಈ ನಮ್ಮೆಯು ಕೊಡವ ಜನಾಂಗಕ್ಕೆ ಮಾತ್ರ ಸೀಮಿತವಾಗಿರುತ್ತದೆ ಎಂದು ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ತಿಳಿಸಿದರು.

ಬಾಳುಗೋಡುವಿನ ಕೊಡವ ಸಮಾಜಗಳ ಒಕ್ಕೂಟದ ಕ್ರೀಡಾ ಹಾಗೂ ಸಾಂಸ್ಕೃತಿಕ ಸಮುಚ್ಚಯದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಡವ ಜನಾಂಗದ ಆಚಾರ, ವಿಚಾರ, ಪದ್ಧತಿ ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸಿ, ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಪ್ರತಿ ವರ್ಷ ಈ ಕೊಡವ ನಮ್ಮೆಯನ್ನು ಆಚರಿಸಲಾಗುತ್ತಿದೆ. ತೆಂಗಿನಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆಗೆ ಮಾತ್ರ ಪ್ರವೇಶ ಶುಲ್ಕವನ್ನು ನಿಗದಿ ಪಡಿಸಿದ್ದು ಉಳಿದ ಯಾವುದೇ ಪೈಪೋಟಿಗಳಿಗೆ ಪ್ರವೇಶ ಶುಲ್ಕ ಇರುವುದಿಲ್ಲ ಎಂದರು.

ಒಂದು ಕೊಡವ ಸಮಾಜದಿಂದ ಒಂದು ತಂಡಕ್ಕೆ ಮಾತ್ರ ಅವಕಾಶ ನೀಡಲಾಗಿದೆ. ನಾಲ್ಕು ದಿನಗಳು ನಡೆಯುವ ನಮ್ಮೆಯಲ್ಲಿ ಅಪರಾಹ್ನ ಭೋಜನದ ವ್ಯವಸ್ಥೆ ಮಾಡಲಾಗಿದೆ. ಈ ಬಾರಿ ವಿಶೇಷವಾಗಿ ಮಹಿಳೆಯರಿಗೆ ಫೈವ್‌ಸೈಡರ್ಸ್ ಹಾಕಿ ಪಂದ್ಯಾಟವನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ನ.6ರಂದು 10 ಗಂಟೆಗೆ ಅಂತರ ಕೊಡವ ಸಮಾಜಗಳ ನಡುವೆ ನಡೆಯುವ ನಾಕೌಟ್ ಹಾಕಿ ಪಂದ್ಯಾಟಕ್ಕೆ ಚಾಲನೆ ನೀಡಲಾಗುವುದು. ಅದೇ ದಿನ 9.30 ಗಂಟೆಗೆ ತೆಂಗಿನಕಾಯಿಗೆ ಗುಂಡು ಹೊಡೆಯುವ ಕಾರ್ಯಕ್ರಮ ನಡೆಯಲಿದೆ. 10 ಗಂಟೆಯಿಂದ ಹಾಕಿ ಪಂದ್ಯಾಟ ನಡೆಯಲಿದೆ. ನ.8ರಂದು 9 ಗಂಟೆಗೆ ಹಾಕಿ ಪಂದ್ಯಾಟದ ಸೆಮಿಫೈನಲ್ಸ್ ನಡೆಯಲಿದೆ. ಮತ್ತೊಂದು ಮೈದಾನದಲ್ಲಿ ಮಹಿಳೆಯರು ಮತ್ತು ಪುರುಷರ ಹಗ್ಗಜಗ್ಗಾಟ ಪಂದ್ಯಗಳು ನಡೆಯಲಿವೆ. 11 ಗಂಟೆಗೆ ಯುದ್ಧ ಸ್ಮಾರಕಕ್ಕೆ ಪುಷ್ಪಾರ್ಚನೆ ಮಾಡಲಾಗುವುದು.

ನ.9 ರುದು ಪೂರ್ವಾಹ್ನ 9 ಗಂಟೆಗೆ ಮಂದ್ ಮರಿಯುವೊ, 9.30 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮದ ಪೈಪೋಟಿ ನಡೆಯಲಿದೆ. ಅಪರಾಹ್ನ 2 ಗಂಟೆಗೆ ಹಾಕಿ ಪಂದ್ಯಾಟದ ಫೈನಲ್ಸ್ ಹಾಗೂ ಸಭಾಕಾರ್ಯಕ್ರಮ ನಡೆಯಲಿದೆ. ಎಲ್ಲಾ ಸ್ಪರ್ಧೆಗಳ ವಿಜೇತರಿಗೆ ರೋಲಿಂಗ್ ಟ್ರೋಫಿಯನ್ನು ವಿತರಿಸಲಾಗುವುದು ಎಂದು ಹೇಳಿದರು.

ಗೋಷ್ಠಿಯಲ್ಲಿ ಗೌರವ ಕಾರ್ಯದರ್ಶಿ ವಾಟೇರಿರ ಶಂಕರಿ ಪೂವಯ್ಯ, ಕ್ರೀಡಾ ಸಮಿತಿ ಅಧ್ಯಕ್ಷ ತಂಬುಕುತ್ತಿರ ಮಧು ಮಂದಣ್ಣ, ಕ್ರೀಡಾ ಸಮಿತಿ ಸಂಚಾಲಕ ಕಂಬೀರಂಡ ಕಿಟ್ಟು ಕಾಳಪ್ಪ, ಸಾಂಸ್ಕೃತಿಕ ಸಮಿತಿ ಸಂಚಾಲಕ ಬೊಳ್ಳಿಯಂಗಡ ದಾದು ಪೂವಯ್ಯ, ಅಮ್ಮಣಿಚಂಡ ಸುಬ್ರಮಣಿ, ಕುಪ್ಪಂಡ ರಾಜೀವ್‌ಕಾರ್ಯಪ್ಪ, ಕೂತಂಡ ಸುರೇಶ್, ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಅಕ್ರಮ ಗೋವು ಸಾಗಾಟ ಪ್ರಕರಣ

ಗೂಡ್ಸ್ ವಾಹನ ಉರುಳಿದಾಗ ಪರಾರಿಯಾಗಿದ್ದ ಆರೋಪಿ ಸೆರೆ



ಮಡಿಕೇರಿ,ಅ.18– ಅಕ್ರಮ ಗೋವು ಸಾಗಾಟ ಮಾಡುತ್ತಿದ್ದ ಸಂದರ್ಭದಲ್ಲಿ ಗೂಡ್ಸ್ ವಾಹನ ಮಗುಚಿ ಬಿದ್ದು, ಬಳಿಕ ಸ್ಥಳದಿಂದ ಪರಾರಿಯಾಗಿದ್ದ ಪ್ರಕರಣದ ಪ್ರಮುಖ ಆರೋಪಿ ಅರಕಲಗೂಡಿಗ ದಿಲ್ ನವಾಜ್ ಎಂಬಾತನನ್ನು ಸೋಮವಾರಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ. ಸೋಮವಾರಪೇಟೆ ವೃತ್ತ ನಿರೀಕ್ಷಕ ಮುದ್ದು ಮಾದೇವ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ ಅರಕಲಗೂಡಿನಲ್ಲಿ ಆರೋಪಿಯ ಬಂಧಿಸಲಾಗಿದೆ.

ಅ.13ರ ಬೆಳಗಿನ 2.30ರ ಸಮಯದಲ್ಲಿ ಸೋಮವಾರಪೇಟೆ ತಾಲೂಕಿನ ಶನಿವಾರ ಸಂತೆ ರಸ್ತೆಯ ಕಾಗಡಿಕಟ್ಟೆಯಲ್ಲಿ ಗೂಡ್ಸ್ ವಾಹನದಲ್ಲಿ ಅಕ್ರಮವಾಗಿ ಗೋ ಸಾಗಾಟ ಮಾಡುತ್ತಿದ್ದ ಸಂದರ್ಭ ವಾಹನ ಪಲ್ಟಿಯಾಗಿ ವಾಹನದಲ್ಲಿದ್ದ 3 ಗೋವುಗಳು ಗಾಯಗೊಂಡಿದ್ದವು. ವಾಹನದಲ್ಲಿದ್ದ ಇಬ್ಬರು ಆರೋಪಿಗಳು ಗಾಯಗೊಂಡು ಬೇರೊಂದು ಕಾರ್‌ನಲ್ಲಿ ಪರಾರಿಯಾಗಿದ್ದರು. ಆರೋಪಿಗಳು ಗೂಡ್ಸ್ ವಾಹನವನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾದ ಹಿನ್ನೆಲೆಯಲ್ಲಿ ಗೋವು ಸಾಗಾಟ ಪ್ರಕರಣ ಬೆಳಕಿಗೆ ಬಂದಿತ್ತು. ಇದೀಗ ಪ್ರಕರಣವನ್ನು ತನಿಖೆ ನಡೆಸುತ್ತಿರುವ ಪೊಲೀಸರು ಇತರ ಆರೋಪಿಗಳ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ಹಸಿರು ದೀಪಾವಳಿ ಆಚರಣೆ ಕುರಿತು ಅಭಿಯಾನ



ವಿದ್ಯಾರ್ಥಿಗಳಲ್ಲಿ ಹಸಿರು ದೀಪಾವಳಿ ಕುರಿತು ಜಾಗೃತಿ ಮೂಡಿಸಲಾಯಿತು.

ಮಡಿಕೇರಿ,ಅ.18– ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರೋವರ್ಸ್ ಮತ್ತು ರೇಂಜರ್ಸ್ ಹಾಗೂ ಎನ್‌ಎಸ್‌ಎಸ್ ಘಟಕದ ಸಹಯೋಗದೊಂದಿಗೆ 'ನಮ್ಮ ನಡೆ ಹಸಿರೆಡೆಗೆ' ಗೋ ಗ್ರೀನ್ ಅಭಿಯಾನ–2025 ಅಡಿ ಪರಿಸರ ಸ್ನೇಹಿ ಹಸಿರು ದೀಪಾವಳಿ ಆಚರಣೆ ಕುರಿತು ಜಿಲ್ಲಾಮಟ್ಟದ ಜಾಗೃತಿ ಅಭಿಯಾನ ಏರ್ಪಡಿಸಲಾಗಿತ್ತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕೊಡಗು ಜಿಲ್ಲಾ ಸಂಸ್ಥೆ ಪ್ರಧಾನ ಆಯುಕ್ತ ಕೆ.ಟಿ.ಬೇಬಿ ಮ್ಯಾಥ್ಯೂ ಮಾತನಾಡಿ, ಬೆಳಕಿನ ಹಬ್ಬ ದೀಪಾವಳಿ ಸಂದರ್ಭ ಪ್ರತಿಯೊಬ್ಬರೂ ಮಾಲಿನ್ಯಕಾರಿ ಪಟಾಕಿ ಸಿಡಿಸುವುದನ್ನು ತ್ಯಜಿಸಿ ಪರಿಸರ ಸ್ನೇಹಿ ಹಸಿರು ದೀಪಾವಳಿ ಆಚರಿಸುವ ಮೂಲಕ ಮಾಲಿನ್ಯ ತಡೆಗಟ್ಟಿ ಪರಿಸರ ಸಂರಕ್ಷಣೆಗೆ ವಿಶೇಷ ಒತ್ತು ನೀಡಬೇಕು ಎಂದರು.

ಜಿಲ್ಲಾ ಪರಿಸರ ಜಾಗೃತಿ ಆಂದೋಲನದ ಸಂಚಾಲಕ ಹಾಗೂ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಸಾರ್ವಜನಿಕ ಸಂಪರ್ಕಾಧಿಕಾರಿ ಟಿ.ಜಿ.ಪ್ರೇಮಕುಮಾರ್ ಮಾತನಾಡಿ, ಮಾಲಿನ್ಯಕಾರಿ ಪಟಾಕಿ ಸಿಡಿತದಿಂದ ಉಂಟಾಗುವ ಶಬ್ದ, ವಾಯು ಮತ್ತು ಜಲ ಮಾಲಿನ್ಯ ಹಾಗೂ ನೆಲ ಮಾಲಿನ್ಯದ ಜತೆಗೆ ಪ್ರಾಣಿ–ಪಕ್ಷಿ ಜೀವ ಸಂಕುಲಗಳು ಸೇರಿದಂತೆ ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮಗಳು ಉಂಟಾಗಿ ಪರಿಸರ ವ್ಯವಸ್ಥೆಗೂ ತೀವ್ರ ಧಕ್ಕೆಯುಂಟಾಗುತ್ತದೆ ಎಂದರು.

ಮಾಲಿನ್ಯ ನಿಯಂತ್ರಣ ಮಂಡಳಿಯ ಕೊಡಗು ಜಿಲ್ಲಾ ಪರಿಸರ ಅಧಿಕಾರಿ ಎಂ.ಜಿ.ರಘುರಾಮ್ ಮಾತನಾಡಿದರು.

ಕೊಡಗು ಪ್ರೆಸ್ ಕ್ಲಬ್ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಹಸಿರು ದೀಪಾವಳಿ ಆಚರಣೆ ಕುರಿತು ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಕಾಲೇಜಿನ ಎನ್‌ಎಸ್‌ಎಸ್ ಅಧಿಕಾರಿ ಟಿ.ಎಂ. ಸುಧಾಕರ್, ಸ್ಕೌಟ್ಸ್ ರೋವರ್ಸ್‌ನ ಲೀಡರ್ ನವೀನ್‌ಕುಮಾರ್, ಮಂಡಳಿಯ ಯೋಜನಾ ಸಹಾಯಕ ಆಸ್ಟಿನ್, ಉಪನ್ಯಾಸಕರು, ಬೋಧಕೇತರ ಸಿಬ್ಬಂದಿ, ರೇಂಜರ್ಸ್ ಮತ್ತು ರೋವರ್ಸ್ ಸ್ವಯಂ ಸೇವಕರು ಹಾಗೂ ವಿದ್ಯಾರ್ಥಿಗಳು ಇದ್ದರು.

ಬಾಳೆಲೆಯಲ್ಲಿ ಸ್ವಚ್ಛತಾ ಕಾರ್ಯಕ್ರಮ



ರಾಜಪುರ ಗ್ರಾಮಸ್ಥರು ಬಾಳೆಲೆಯಲ್ಲಿ ಸ್ವಚ್ಛತಾ ಕಾರ್ಯಕ್ರಮ ನಡೆಸಿ ಸಂಗ್ರಹಿಸಿದ ತ್ಯಾಜ್ಯ

ಪೊನ್ನಂಪೇಟೆ: ಬಾಳೆಲೆ ಸಮೀಪದ ರಾಜಾಪುರ (ದೇವನೂರು) ಗ್ರಾಮಸ್ಥರು ಬಾಳೆಲೆಯಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ಸ್ವಚ್ಛ ಕೊಡಗು –ಸುಂದರ ಕೊಡಗು ಯೋಜನೆಗೆ ಕೈಜೋಡಿಸಿರುವ ರಾಜಾಪುರ ಗ್ರಾಮಸ್ಥರು ಬಾಳೆಲೆಯ ಗಣೇಶ ದೇವಸ್ಥಾನದಿಂದ ಕಿಸ್ತೂರಿನವರೆಗಿನ ರಸ್ತೆಯ ಎರಡು ಭಾಗಗಳನ್ನು ಸಂಪೂರ್ಣ ಸ್ವಚ್ಛಗೊಳಿಸಿದರು.

ಒಟ್ಟು 10 ಕಿ.ಮೀ. ಉದ್ದದ ರಸ್ತೆಯಲ್ಲಿ ಸ್ವಚ್ಛತಾ ಕಾರ್ಯವನ್ನು ಪೂರ್ಣಗೊಳಿಸಿದರು. ಈ ಸಂದರ್ಭದಲ್ಲಿ ಸಂಗ್ರಹಿಸಿದ ತ್ಯಾಜ್ಯಗಳನ್ನು ವೈಜ್ಞಾನಿಕವಾಗಿ ವಿಲೇವಾರಿಗೊಳಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಗ್ರಾಮದ ಪ್ರಮುಖರಾದ ಪಾರುವಂಗಡ ಎನ್.ಸೋಮಣ್ಣ, ಸ್ವಚ್ಛ ಕೊಡಗು ಸುಂದರ ಕೊಡಗು ಉತ್ತಮ ಪರಿಕಲ್ಪನೆಯಾಗಿದೆ. ಸ್ವಚ್ಛತೆ ಕುರಿತು ಜಾಗೃತಿ ಮೂಡಿಸಲು ಈ ಯೋಜನೆ ಹೆಚ್ಚು ಸಹಕಾರಿಯಾಗಿದೆ.

ಕೊಡಗಿನ ಪ್ರತಿಯೊಬ್ಬರಲ್ಲೂ ಸ್ವಚ್ಛ ಕೊಡಗು ಕಲ್ಪನೆ ಸ್ವಯಂ ಪ್ರೇರಣೆಯಿಂದ ಮೂಡಿ ಬರಬೇಕಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಕಾವೇರಿ ತೀರ್ಥೋದ್ಭವದ ವೇಳೆ ಶುಭ ಕೋರುವ ಫಲಕ ಹರಿದ ಸಂಬಂಧ ಎಫ್‌ಐಆರ್ ದಾಖಲು

ಮಡಿಕೇರಿ,ಅ.18– ಪವಿತ್ರಕಾವೇರಿ ತೀರ್ಥೋದ್ಭವದ ಶುಭ ಕೋರುವ ಫಲಕಗಳನ್ನು ಹರಿದು ನಾಶ ಮಾಡಿದ ಪ್ರಕರಣಕ್ಕೆ ಸಂಬಧಿಸಿದಂತೆ ಮಡಿಕೇರಿ ಗ್ರಾಮಾಂತರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಕೊಡಗು ಗೌಡ ಸಮಾಜಗಳ ಒಕ್ಕೂಟದ ನೇತೃತ್ವದಲ್ಲಿ ಎಲ್ಲಾ ಸದಸ್ಯ ಸಮಾಜಗಳು ಮತ್ತು ಸಂಘಟನೆಗಳ ಸಹಕಾರದಲ್ಲಿ ಸುಮಾರು 80 ಫಲಕಗಳನ್ನು ಅ.14 ರಂದು ಕುಶಾಲನಗರದಿಂದ ತಲಕಾವೇರಿ ವರೆಗೆ ಅಳವಡಿಸಲಾಗಿತ್ತು. ಕಾರುಗುಂದ, ಬಕ್ಕ, ಚೇರಂಬಾಣೆ ಸೇರಿದಂತೆ ಕೆಲವು ಕಡೆ ಈ ಫಲಕಗಳನ್ನು ಕೆಲವು ದುಷ್ಕರ್ಮಿಗಳು ಅ.16ರ ರಾತ್ರಿ ಹರಿದು ಹಾಕಿದ್ದರು.

ಈ ಕುರಿತು ಕೊಡಗು ಗೌಡ ಸಮಾಜಗಳ ಒಕ್ಕೂಟದ ಕಾರ್ಯದರ್ಶಿ ಪೇರಿಯನ ಉದಯ ಅವರು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಈ ಘಟನೆಯಿಂದ 40 ಸಾವಿರ ರೂ.ಗಳ ನಷ್ಟವಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲೆತ್ನ

ಚಾಮರಾಜನಗರ ಬಂದ್ ಸಂಪೂರ್ಣ ಯಶಸ್ವಿ



ಶೂ ಎಸೆಯಲು ಯತ್ನಿಸಿದ ಪ್ರಕರಣ ಖಂಡಿಸಿ ನಡೆದ ಬೃಹತ್ ಪ್ರತಿಭಟನಾ ಮೆರವಣಿಗೆ.



ಬಂದ್ ಹಿನ್ನೆಲೆಯಲ್ಲಿ ಬಿಕೋ ಎನ್ನುತ್ತಿರುವ ಚಾಮರಾಜನಗರ ಪಟ್ಟಣ.

ಚಾಮರಾಜನಗರ, ಅ.18– ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾದ ಗವಾಯಿ ಅವರ ಮೇಲೆ ವಕೀಲ ರಾಕೇಶ್ ಕಿಶೋರ್ ಶೂ ಎಸೆಯಲು ಯತ್ನಿಸಿದ ಪ್ರಕರಣ ಖಂಡಿಸಿ ಶನಿವಾರ ಸಂವಿಧಾನ ಸಂರಕ್ಷಣಾ ಸಮಿತಿಯಿಂದ ಕರೆ ನೀಡಿದ್ದ ಚಾಮರಾಜನಗರ ಬಂದ್‌ಗೆ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಬಂದ್ ಹಿನ್ನೆಲೆಯಲ್ಲಿ ನಗರದಲ್ಲಿ ಬೆಳಗ್ಗೆಯಿಂದಲೇ ಬಹುತೇಕ ಅಂಗಡಿ– ಮುಂಗಟ್ಟುಗಳು ಬಂದ್ ಆಗಿದ್ದವು. ಬೆಳಗ್ಗೆ 10 ಗಂಟೆಯ ನಂತರ ನಗರದ ದೊಡ್ಡಂಗಡಿ ಬೀದಿ, ಚಿಕ್ಕಂಗಡಿ ಬೀದಿ, ಮಾರುಕಟ್ಟೆ ಭುವನೇಶ್ವರಿ ವೃತ್ತ, ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಸುತ್ತಮುತ್ತಲ ಅಂಗಡಿ ಮುಂಗಟ್ಟುಗಳು, ಬಿ. ರಾಚಯ್ಯ ಜೋಡಿ ರಸ್ತೆ, ಡಿವಿಯೇಷನ್ ರಸ್ತೆ ಬದಿಯಲ್ಲಿನ ಅಂಗಡಿ ಮುಂಗಟ್ಟುಗಳು ಬಾಗಿಲು ಬಂದ್ ಮಾಡುವ ಮೂಲಕ ಬಂದ್ ಯಶಸ್ವಿಗೆ ಸಹಕರಿಸಿದರು.

ಕೆಎಸ್‌ಆರ್‌ಟಿಸಿ ಬಸ್ ಸಂಚಾರ ಸ್ಥಗಿತ: ಬೆಳಗ್ಗೆ 10 ಗಂಟೆಯ ನಂತರ ನಗರದಲ್ಲಿ ಕೆಎಸ್‌ಆರ್‌ಟಿಸಿ ಬಸ್ ಸಂಚಾರ ಸ್ಥಗಿತಗೊಂಡಿತ್ತು ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು, ಪ್ರಯಾಣಿಕರು ನಿಲ್ದಾಣದಲ್ಲೇ ಗಂಟೆಗಂಟಲೆ ಕಾಯುವಂತಾಯಿತು.

ಇನ್ನೂ ನಗರದಿಂದ ಗುಂಡ್ಲುಪೇಟೆಗೆ ತೆರಳುತ್ತಿದ್ದ ಬಸ್‌ವೊಂದನ್ನು ನಗರದ ಸುಲ್ತಾನ್ ಷರೀಪ್ ವೃತ್ತದ ಬಳಿ ತಡೆದ ಪ್ರತಿಭಟನಾಕಾರರು, ಬಸ್‌ನಿಂದ ಪ್ರಯಾಣಿಕರನ್ನು ಇಳಿಸಿ, ಬಸ್ ಅನ್ನು ವಾಪಸ್ ಬಸ್ ನಿಲ್ದಾಣಕ್ಕೆ ಕಳುಹಿಸಿದ ಘಟನೆಯೂ ನಡೆಯಿತು.

ಶಾಲಾ– ಕಾಲೇಜಿಗೆ ರಜೆ ಘೋಷಣೆ: ಬಂದ್ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಜಿಲ್ಲಾ ಕೇಂದ್ರದಲ್ಲಿನ ಎಲ್ಲಾ ಶಾಲಾ– ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿತ್ತು. ಉಳಿದಂತೆ ಹೊಟೇಲ್, ಬಟ್ಟೆ ಅಂಗಡಿಗಳು, ದಿನಸಿ ಅಂಗಡಿಗಳು, ಕೆಲವು ಪೆಟ್ರೋಲ್ ಬಂಕ್‌ಗಳು, ಚಿತ್ರಮಂದಿರಗಳು ಬಂದ್ ಆಗಿದ್ದವು. ಆದರೆ, ತುರ್ತು ಸೇವೆಗಳಾದ ಆಸ್ಪತ್ರೆ, ಕ್ಲಿನಿಕ್, ಮೆಡಿಕಲ್ ಶಾಪ್‌ಗಳು, ಹಾಲಿನ ಅಂಗಡಿ, ಬ್ಯಾಂಕ್‌ಗಳು ಸರ್ಕಾರಿ ಹಾಗೂ ಖಾಸಗಿ ಕಚೇರಿಗಳು ಎಂದಿನಂತೆ ಕಾರ್ಯನಿರ್ವಹಿಸಿದವು. ಜೊತೆಗೆ ಆಟೋ, ಕಾರು ಸೇರಿದಂತೆ ಸಾರ್ವಜನಿಕರ ಸಂಚಾರ ಸಹಜವಾಗಿತ್ತು.

ನ್ಯಾಯಾಲಯದ ಕಾರ್ಯಕಲಾಪದಿಂದ ಹೊರಗುಳಿದ ವಕೀಲರು: ಬಂದ್ ಹಿನ್ನೆಲೆಯಲ್ಲಿ ನಗರದ ನ್ಯಾಯಾಲಯಗಳಲ್ಲಿ ಕಾರ್ಯನಿರ್ವಹಿಸುವ ವಕೀಲರು ನ್ಯಾಯಾಲಯದ ಕಾರ್ಯಕಲಾಪಗಳಿಂದ ಹೊರಗುಳಿಯುವ ಮೂಲಕ ಬಂದ್‌ಗೆ ಬೆಂಬಲ ಸೂಚಿಸಿದರು.

ಕೇಸರಿ ಕಲರ್ ಬಂಟಿಂಗ್ಸ್ ತೆರವಿಗೆ ಆಗ್ರಹ: ಆರ್‌ಎಸ್‌ಎಸ್ ಪಥ ಸಂಚಲನ ಕಾರ್ಯಕ್ರಮ ಆಯೋಜನೆ ಹಿನ್ನಲೆಯಲ್ಲಿ ನಗರದ ಭುವನೇಶ್ವರಿ ವೃತ್ತ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಹಾಕಿದ್ದ ಕೇಸರಿ ಕಲರ್ ಬಂಟಿಂಗ್ಸ್ ತೆರವುಗೊಳಿಸುವಂತೆ ಪ್ರತಿಭಟನಾಕಾರರು ಆಗ್ರಹಿಸಿದ ಘಟನೆಯೂ ನಡೆಯಿತು. ಅನುಮತಿ ಇಲ್ಲದೆ ಕೇಸರಿ ಬಂಟಿಂಗ್ಸ್ ಕಟ್ಟಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಕೇಸರಿ ಬಂಟಿಂಗ್ಸ್ ತೆರವುಗೊಳಿಸಲಾಯಿತು.

ಮೆರವಣಿಗೆ, ರಾಷ್ಟ್ರಪತಿಗಳಿಗೆ ಮನವಿ: ನಗರದ ಭುವನೇಶ್ವರಿ ವೃತ್ತದಿಂದ ಬೃಹತ್ ಮೆರವಣಿಗೆ ಹೊರಟ ಪ್ರತಿಭಟನಾಕಾರರು ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು. ವಕೀಲ ರಾಕೇಶ್ ಕಿಶೋರ್ ಅವರು ಸಿಜೆಐ ಅವರ ಮೇಲೆ ಶೂ ಎಸೆಯಲು ಯತ್ನಿಸಿದ್ದ ಪ್ರಕರಣವು ಸರ್ವೋಚ್ಚ ನ್ಯಾಯಾಲಯ ಪೀಠಕ್ಕೆ, ಪ್ರಜಾಪ್ರಭುತ್ವದ ಆತ್ಮವಾದ ಸಂವಿಧಾನಕ್ಕೆ ಮಾಡಿದ ಅವಮಾನ ಎಂದು ಪ್ರತಿಭಟನಾಕಾರರು ಕಿಡಿಕಾರಿದರು. ಇಂತಹ ಪ್ರಕರಣಗಳು ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲು ಮಾಡುವ ಬಹುದೊಡ್ಡ ಷಡ್ಯಂತ್ರದ ಭಾಗ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಯೊಬ್ಬರೂ ಧ್ವನಿ ಎತ್ತಬೇಕು: ದೇಶದಲ್ಲಿ ಸಂವಿಧಾನ, ನ್ಯಾಯಾಧೀಶರಿಗೆ ಅವಮಾನವಾದಾಗ ಪ್ರತಿಯೊಬ್ಬರು ಸಂವಿಧಾನ ಬದ್ಧವಾಗಿ ಜಾತಿ, ಧರ್ಮ, ವರ್ಣವನ್ನು ಬಿಟ್ಟು ಧ್ವನಿ ಎತ್ತಬೇಕು ಎಂದು ಮೈಸೂರಿನ ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶಸ್ವಾಮೀಜಿ ಕರೆ ನೀಡಿದರು.

ಚಾ.ನಗರ ಸ್ವಯಂಪ್ರೇರಿತ ಬಂದ್ ಹಿನ್ನೆಲೆಯಲ್ಲಿ ನಗರದ ಭುವನೇಶ್ವರಿ ವೃತ್ತದಲ್ಲಿ ಸಮಾವೇಶದಲ್ಲಿ ಅವರು ಮಾತನಾಡಿ, ಚಾಮರಾಜನಗರ ಅಂಬೇಡ್ಕರ್ ವಾದಿಗಳ ಅಪ್ಪಟ ನೆಲ ಇದಾಗಿದ್ದು, ಸನಾತನ ಧರ್ಮದ ದೇಶದಲ್ಲಿ ಎಲ್ಲರೂ ನಾವು ಹಿಂದು ಹಿಂದು ಎನ್ನುತ್ತಿದ್ದಾರೆ. ಓಟು ಕಿತ್ತುಕೊಳ್ಳಲು ಹಿಂದು ಎನ್ನುತ್ತಿದ್ದಾರೆ. ಅದಕ್ಕೆ ಜಿಲ್ಲೆಯಲ್ಲಿ ಅವಕಾಶ ಕೊಡಬಾರದು ಎಂದರು.

ನಂತರ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಮನುವಾದಿಗಳು ಸಂವಿಧಾನವನ್ನು ಬುಡಮೇಲು ಮಾಡಲು ಹೊರಟಿರುವುದು ಖಂಡನೀಯ. ನ್ಯಾಯಾಂಗದ ಮೇಲೆ ದೌರ್ಜನ್ಯ ಮಾಡಲು ಹೊರಟಿದ್ದು ಸರಿಯಲ್ಲ. ನ್ಯಾಯಾಧೀಶರಾದ ಗವಾಯಿ ಅವರ ಮೇಲೆ ಶೂ ಎಸೆಯಲು ಮುಂದಾದ ವಕೀಲರ ಮೇಲೆ ಕೇಂದ್ರ ಸರಕಾರ ಸೂಕ್ತ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು. ಅವರ ಮೇಲೆ ಕಠಿಣ ಶಿಕ್ಷೆ ಆಗುವವರೆಗೂ ನಮ್ಮ ಹೋರಾಟ ನಿರಂತರವಾಗಿ ಇರಲಿದೆ ಎಂದರು.ಬಳಿಕ ಶಾಸಕ ಎ.ಆರ್.ಕೃಷ್ಣಮೂರ್ತಿ, ಜಿಪಂ ಮಾಜಿ ಉಪಾಧ್ಯಕ್ಷ ಅಯ್ಯನಪುರ ಶಿವಕುಮಾರ್ ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷ ಹೆಚ್.ವಿ.ಚಂದ್ರು, ಕಾಡಾಧ್ಯಕ್ಷ ಪಿ.ಮರಿಸ್ವಾಮಿ, ವಕೀಲರಾದ ಪ್ರಸನ್ನಕುಮಾರ್, ರಾಮಸಮುದ್ರ ಪುಟ್ಟಸ್ವಾಮಿ, ಮೈಸೂರು ಮಹಾನಗರಪಾಲಿಕೆಯ ಮಾಜಿ ಮೇಯರ್ ಪುರುಷೋತ್ತಮ್, ಪ್ರ.ಶ್ರೀನಿವಾಸನಾಯಕ, ತಾಲೂಕು ಕುರುಬರ ಸಂಘದ ತಾಲೂಕು ಅಧ್ಯಕ್ಷ ಉಮೇಶ್, ಸಂಘಸೇನ, ಜಿಪಂ ಮಾಜಿ ಸದಸ್ಯ ಎಸ್.ಸೋಮನಾಯಕ, ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಅಬ್ರಾರ್ ಅಹಮದ್, ಬಿಎಸ್ಪಿ ರಾಜ್ಯ ಕಾರ್ಯದರ್ಶಿ ಎನ್.ನಾಗಯ್ಯ, ಡಿಎಸ್‌ಎಸ್ ಜಿಲ್ಲಾ ಸಂಚಾಲಕ ದೊಡ್ಡಿಂದುವಾಡಿ ಸಿದ್ದರಾಜು, ಶಿವನಾಗಣ್ಣ, ಬಿ.ಕೆ.ರವಿಕುಮಾರ್, ಸಿ.ಎಂ.ಶಿವಣ್ಣ, ಬ್ಯಾಡಮೂಡ್ಲು ಬಸವಣ್ಣ, ಮಧುಸೂದನ್, ಚಿಕ್ಕಮಹದೇವ್, ಆರ್.ಮಹದೇವ್, ನಾಗಯ್ಯ, ನಲ್ಲೂರು ಮಹದೇವಸ್ವಾಮಿ, ಮೋಹನ್ ನಗು ಇತರರು ಭಾಗವಹಿಸಿದ್ದರು.

ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ ಖಂಡಿಸಿ ಪ್ರತಿಭಟನೆ



ಒಡಿಪಿ ಸಂಸ್ಥೆ ಪದಾಧಿಕಾರಿಗಳು ಮಹಿಳೆಯರ ಮೇಲಿನ ಹೀನ ಕೃತ್ಯ ನಡೆಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಗ್ರೇಡ್ 2 ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಕೊಳ್ಳೇಗಾಲ, ಅ.18– ಮಹಿಳೋದಯ ಮಹಿಳಾ ತಾಲೂಕು ಒಕ್ಕೂಟದ ವತಿಯಿಂದ ಹೆಣ್ಣು ಮಕ್ಕಳ ಹಾಗೂ ಮಹಿಳೆಯರ ಮೇಲಿನ ಅತ್ಯಾಚಾರ, ಕೊಲೆ ಮತ್ತು ಲೈಂಗಿಕ ಕಿರುಕುಳ ಪ್ರಕರಣಗಳನ್ನು ಖಂಡಿಸಿ ಹಾಗೂ ಪಿಂಚಣಿ ವೇತನ ಹೆಚ್ಚಳ ಮಾಡುವಂತೆ ಒತ್ತಾಯಿಸಿ ಶನಿವಾರ ಮೌನ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಪಟ್ಟಣದ ನ್ಯಾಷನಲ್ ಸ್ಕೂಲ್ ಆವರಣದಲ್ಲಿ ಜಮಾಯಿಸಿದ್ದ ಒಡಿಪಿ ಸಂಸ್ಥೆಯ ಪದಾಧಿಕಾರಿಗಳು ಮೆರವಣಿಗೆಯ ಮೂಲಕ ತಾಲೂಕು ಕಚೇರಿಗೆ ತಲುಪಿ ಗ್ರೇಡ್ 2 ತಹಸೀಲ್ದಾರ್ ಕುಮಾರ್‌ಗೆ ತಮ್ಮ ಹಕ್ಕೊತ್ತಾಯಗಳ ಮನವಿಪತ್ರ ಸಲ್ಲಿಸಿದರು.

ಇದುವರೆಗೂ ರಾಜ್ಯದಲ್ಲಿ ಸುಮಾರು 340 ಅತ್ಯಾಚಾರ ಹಾಗೂ ಕೊಲೆ ಪ್ರಕರಣಗಳು, 3,089 ಪೋಕ್ಸೋ ಪ್ರಕರಣಗಳು ಮತ್ತು 3,643 ಲೈಂಗಿಕ ಕಿರುಕುಳ ಪ್ರಕರಣಗಳು, ಸುಮಾರು 25 ಸಾವಿರ ಬಾಲಕಿಯರು ಗರ್ಭಿಣಿಯರಾಗಿರುವ ಪ್ರಕರಣಗಳು ದಾಖಲಾಗಿವೆ. ಇನ್ನೂ ಅದೆಷ್ಟೋ ಪ್ರಕರಣಗಳು ಕಾರಣಾಂತರಗಳಿಂದ ದಾಖಲಾಗದೆ ಉಳಿದಿವೆ. ದಾಖಲಾದ ಪ್ರಕರಣಗಳು ಇನ್ನೂ ಸರಿಯಾಗಿ ಇತ್ಯರ್ಥವಾಗದೆ ಉಳಿದಿರುವುದರಿಂದ ಮಹಿಳೆಯರು ಮತ್ತು ಮಕ್ಕಳು ಉಸಿರುಗಟ್ಟುವ ಭಯದ ವಾತಾವರಣದಲ್ಲಿ ಬದುಕುವಂತಾಗಿದೆ. ಈ ಭಯದ ವಾತಾವರಣದಿಂದ ಮಹಿಳೆಯರು ಹೊರಬರಬೇಕಾಗಿದೆ. ಈ ನಿಟ್ಟಿನಲ್ಲಿ ಮಹಿಳೆಯರ ರಕ್ಷಣೆಗಾಗಿ ಹಕ್ಕುಗಳಿಗಾಗಿ ಮಹಿಳೋದಯ ಒಕ್ಕೂಟವು ಅತ್ಯಾಚಾರಿಗಳು ಮತ್ತು ಕೊಲೆಗೈದ ಆರೋಪಿಗಳಿಗೆ ಮರಣ ದಂಡನೆ ಶಿಕ್ಷೆ ವಿಧಿಸಬೇಕು. ಮಹಿಳೆಯರ ಮೇಲಿನ ಹೀನ ಕೃತ್ಯ ನಡೆಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂಬಿತ್ಯಾದಿ ಹಕ್ಕೊತ್ತಾಯಗಳ ಮನವಿ ಪತ್ರವನ್ನು ಸಲ್ಲಿಸಿದರು.

ಈ ವೇಳೆ ಮಹಿಳೋದಯ ಮಹಿಳಾ ತಾಲೂಕು ಒಕ್ಕೂಟ ಅಧ್ಯಕ್ಷೆ ರಾಜಮ್ಮ, ಕಾರ್ಯದರ್ಶಿ ಸಿದ್ದರಾಜಮ್ಮ, ಉಪಾಧ್ಯಕ್ಷೆ ಶಿವಮ್ಮ, ಶೋಭ, ಸೌಜನ್ಯ, ವಲಯ ಅಧಿಕಾರಿ ನಾಗಸುಂದರ, ಕಾರ್ಯಕರ್ತರಾದ ಫಿಲೋಮಿನ, ಉಮಾ ಇನ್ನಿತರಿದ್ದರು.

ಅ.24, ಚಾ.ನಗರ ನಗರಸಭೆ ವಿಶೇಷ ಸಭೆ

ಚಾಮರಾಜನಗರ, ಅ.18– ಚಾಮರಾಜನಗರ ನಗರಸಭೆಯ ವಿಶೇಷ ಸಭೆಯನ್ನು ನಗರಸಭಾ ಅಧ್ಯಕ್ಷ ಸುರೇಶ್ ಅವರ ಅಧ್ಯಕ್ಷತೆಯಲ್ಲಿ ಅ.24ರಂದು ಬೆಳಿಗ್ಗೆ 11 ಗಂಟೆಗೆ ನಗರಸಭೆ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

72ನೇ ಅಖಿಲ ಭಾರತ ಸಹಕಾರ ಸಪ್ತಾಹ : ಸಹಕಾರ ಸಂಘಗಳ ಕಟ್ಟಡಗಳ ಮೇಲೆ ಸಹಕಾರ ಧ್ವಜ ಹಾರಿಸಲು ಮನವಿ

ಚಾಮರಾಜನಗರ: ಜಿಲ್ಲೆಯಲ್ಲಿ 72ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ನ.14ರಿಂದ 20ರವರೆಗೆ 7 ದಿನಗಳು ಆಚರಿಸುತ್ತಿದ್ದು, ಸಹಕಾರ ಸಂಘ, ಸೌಹಾರ್ದ ಸಹಕಾರಿ ಸಂಘಗಳು, ಸಹಕಾರಿ ಬ್ಯಾಂಕುಗಳು ಸಂಘದ ಕಟ್ಟಡಗಳ ಮೇಲೆ ಸಹಕಾರ ಧ್ವಜವನ್ನು ಕಡ್ಡಾಯವಾಗಿ ಹಾರಿಸಲು ಸಹಕಾರ ಇಲಾಖೆ ತಿಳಿಸಿದೆ.

ಸಹಕಾರ ಧ್ವಜ ಇಲ್ಲದೆ ಇರುವ ಸಂಘದವರು ಚಾಮರಾಜನಗರ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ ಅವರನ್ನು ಸಂಪರ್ಕಿಸಿ ಸಹಕಾರ ಧ್ವಜವನ್ನು ಪಡೆಯಬಹುದು.

ಯಳಂದೂರು ಪದವಿ ಕಾಲೇಜಿಗೆ ಶೀಘ್ರದಲ್ಲೇ ಕಟ್ಟಡ



ಪಠ್ಯಪೂರಕ ಚಟುವಟಿಕೆಗಳ ಸಮಾರಂಭವನ್ನು ಶಾಸಕ ಕೃಷ್ಣಮೂರ್ತಿ ಉದ್ಘಾಟಿಸಿದರು.

ಯಳಂದೂರು, ಅ.18– ಪಟ್ಟಣದಲ್ಲಿರುವ ವೈ.ಎಂ.ಮಲ್ಲಿಕಾರ್ಜುನಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನೂತನ ಕಟ್ಟಡಕ್ಕೆ ಶೀಘ್ರದಲ್ಲೇ ಚಾಲನೆ ನೀಡಲಾಗುವುದು ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ವೈ.ಎಂ. ಮಲ್ಲಿಕಾರ್ಜುನಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ಹಮ್ಮಿಕೊಂಡಿದ್ದ ಪಠ್ಯಪೂರಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಇಲ್ಲಿಗೆ ನಿವೃತ್ತ ಶಿಕ್ಷಕ ಮಹದೇವಾಚಾರ್‌ರವರು 2 ಎಕರೆ ಜಮೀನನ್ನು ದಾನವಾಗಿ ನೀಡಿದ್ದರು. ಪಟ್ಟಣದ ಬೈಪಾಸ್ ರಸ್ತೆಯಲ್ಲಿರುವ ಜಮೀನಿನಲ್ಲಿ ಕಟ್ಟಡ ನಿರ್ಮಿಸಲು ಸಾಧ್ಯವಾಗುವುದಿಲ್ಲ, ಇದು ಹಳ್ಳದಲ್ಲಿದೆ ಎಂದು ತಜ್ಞರ ವರದಿಯ ಆಧಾರದ ಮೇಲೆ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮೈದಾನದಲ್ಲೇ 30 ಗುಂಟೆ ಜಮೀನನ್ನು ಪದವಿ ಕಾಲೇಜಿಗೆ ಗುರುತಿಸಲಾಗಿದೆ. ಇದು ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸೇರಿದ ಆಸ್ತಿಯಾಗಿದೆ. ಹಾಗಾಗಿ ಕೆಲವು ತಾಂತ್ರಿಕ ಸಮಸ್ಯೆಗಳಿದ್ದು ಇದನ್ನು ನಿವಾರಿಸಿ ಶೀಘ್ರದಲ್ಲೇ ಕಟ್ಟಡ ಕಾಮಗಾರಿ ಆರಂಭಿಸಲಾಗುವುದು ಎಂದರು.

ಕ್ಷೇತ್ರಕ್ಕೆ 500 ಕೋಟಿ ರೂ. ಅನುದಾನ: ನಾನು ಶಾಸಕನಾಗಿ ಆಯ್ಕೆಯಾದ ಮೇಲೆ ಕ್ಷೇತ್ರದ ಅಭಿವೃದ್ಧಿಗೆ 500 ಕೋಟಿ ರೂ. ಅನುದಾನವನ್ನು ಇದುವರೆಗೆ ತಂದಿದ್ದು ಅಭಿವೃದ್ಧಿ ಕಾಮಗಾರಿಗಳನ್ನು ಮಾಡಿದ್ದೇನೆ. ಆರೋಗ್ಯ, ಶಿಕ್ಷಣ, ನೀರಾವರಿ, ರಸ್ತೆ ಅಭಿವೃದ್ಧಿ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಇದನ್ನು ಬಳಕೆ ಮಾಡಿಕೊಳ್ಳಲಾಗಿದೆ. ಈ ಬಗ್ಗೆ ಶೀಘ್ರದಲ್ಲೇ ನಾನು ಪಟ್ಟಿ ಬಿಡುಗಡೆ ಮಾಡಲಿದ್ದೇನೆ. ಶಿಕ್ಷಣಕ್ಕೆ ನಮ್ಮ ಸರ್ಕಾರ ಹೆಚ್ಚಿನ ಆದ್ಯತೆಯನ್ನು ನೀಡಿದೆ. ಪರಿಶಿಷ್ಟ ಜಾತಿ, ವರ್ಗಗಳ ಪದವಿ ಶಿಕ್ಷಣ ಪಡೆಯುತ್ತಿರುವ ಮಕ್ಕಳಿಗೆ 27 ಸಾವಿರ ರೂ. ವಿದ್ಯಾರ್ಥಿ ವೇತನ, ಕಟ್ಟಡ ಕಾರ್ಮಿಕರ ಮಕ್ಕಳಿಗೆ ಲ್ಯಾಪ್ ಟಾಪ್ ವಿತರಣೆ, ಹಿಂದುಳಿದ ವರ್ಗಗಳ, ರೈತರ ಮಕ್ಕಳಿಗೆ 6 ಸಾವಿರ ರೂ. ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ ಎಂದರು.

ರಾಜಸ್ವ ನಿರೀಕ್ಷಕ ಎಂ.ಎಸ್.ಯದುಗಿರಿ ಮುಖ್ಯ ಭಾಷಣ ಮಾಡಿದರು. ಜಿಪಂ ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್, ಗ್ಯಾರಂಟಿ ಯೋಜನೆಯ ತಾಲೂಕು ಅಧ್ಯಕ್ಷ ಕಿನಹಳ್ಳಿ ಪ್ರಭುಪ್ರಸಾದ್, ಪಪಂ ಸದಸ್ಯ ಮಹೇಶ್ ಪ್ರಾಂಶುಪಾಲ ವಿಜಯ ಮಾತನಾಡಿದರು. ಪಪಂ ಮುಖ್ಯಾಧಿಕಾರಿ ಎಂ.ಪಿ. ಮಹೇಶ್, ಕುಮಾರ್, ಬಿಳಿಗಿರಿರಂಗನಾಥಸ್ವಾಮಿ ದೇಗುಲ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜೆ.ಶ್ರೀನಿವಾಸ್, ಪಪಂ ನಾಮನಿರ್ದೇಶಿತ ಸದಸ್ಯರಾದ ಲಿಂಗರಾಜಮೂರ್ತಿ, ಶ್ರೀಕಂಠಸ್ವಾಮಿ, ಜೆಎಸ್‌ಎಸ್ ಕಾಲೇಜಿನ ಪ್ರಾಂಶುಪಾಲ ಹೆಚ್.ಎಸ್.ಚಂದ್ರಶೇಖರ್, ಅಂಬಳೆ ವೀರಭದ್ರನಾಯಕ, ಕೆ.ಶ್ವೇತಾ, ಮನೋಜ್ ಕುಮಾರ್, ಎ.ವಾಸುದೇವ, ಎಂ.ವಿಕಾಸ್, ಎಂ.ಗಿರಿಜ, ಎಂ.ಜಿ.ಮುರಳಿ, ಕೆ.ಎಂ.ವಿನೋದ್, ಎಚ್.ಎ.ಅರುಣ ಇದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ

ಭಾನುವಾರ 19-10-2025



ಮರೆಯಾಗುತ್ತಿದೆ ಮಣ್ಣಿನ ಹಣತೆ ಮಹಿಮೆ...

ಎಂ.ಟಿ.ಯೋಗೇಶ್ ಕುಮಾರ್, ಮೊ: 9880813195

ಬೆಳಕಿನ ಹಬ್ಬ ದೀಪಾವಳಿ ಹಾಗೂ ಕಾರ್ತಿಕ ಸೋಮವಾರದಂದು ಮನೆ ಮನೆ ಬೆಳಗುವ ಶ್ರೇಷ್ಠತೆಯ ಪ್ರತೀಕವಾಗಿರುವ ಮಣ್ಣಿನ ಹಣತೆಗೆ ಈಗ ಬೇಡಿಕೆ ಕುಸಿದಿದೆ. ಇವುಗಳನ್ನು ಮಾಡುವುದನ್ನೇ ಕುಲಕಸುಬು ಮಾಡಿಕೊಂಡಿದ್ದ ಕುಂಬಾರರ ಸಮುದಾಯ ಸಂಕಷ್ಟಕ್ಕೀಡಾಗಿದೆ.

ಜನ ಈಗ ಅಲಂಕಾರಕ್ಕೆ ಮಾರು ಹೋಗುತ್ತಿದ್ದು, ಅದರಿಂದಾಗುವ ದುಷ್ಪರಿಣಾಮಗಳ ಬಗ್ಗೆ ಆಲೋಚಿಸುತ್ತಿಲ್ಲ. ಪರಿಸರಕ್ಕೆ ಮಾರಕ ವಾದ, ಆದರೆ ನೋಡಲು ಸುಂದರವಾಗಿ ಕಾಣುವ ವಸ್ತುಗಳನ್ನೇ ಹೆಚ್ಚು ಹೆಚ್ಚು ಬಳಸುತ್ತಿರುವುದು ನಮ್ಮ ಸಂಪ್ರದಾಯ, ಸಂಸ್ಕಾರಗಳು ಮೂಲೆಗುಂಪಾಗಲು ಕಾರಣವಾಗುತ್ತಿದೆ. ದೀಪಾವಳಿಯ ಮಣ್ಣಿನ ದೀಪಗಳ ಬಳಕೆ ವಿಷಯದಲ್ಲೂ ಅದೇ ಆಗಿದೆ. ದೀಪಾವಳಿಗಾಗಿ ಕುಂಬಾರರು ತಯಾಸುತ್ತಿದ್ದ ಮಣ್ಣಿನ ದೀಪಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿದ್ದು, ಈ ಬಾರಿ ಮಣ್ಣಿನ ದೀಪಗಳ ತಯಾರಿಕೆ ಗಣನೀಯ ಪ್ರಮಾಣದಲ್ಲಿ ಕುಸಿತ ಕಂಡಿದೆ.

ಮಂಕಾದ ದೂರದ ದೀಪ: ಮೈಸೂರು ತಾಲೂಕಿನ ದೂರ ಗ್ರಾಮದಲ್ಲಿರುವ ಕುಂಬಾರ ಕುಶಲ ಕೈಗಾರಿಕಾ ಸಹಕಾರ ಸಂಘದಲ್ಲಿ 14 ಕುಟುಂಬದ 50ಕ್ಕೂ ಹೆಚ್ಚು ಮಂದಿ ಮಣ್ಣಿನ ಹಣತೆ, ಕುಂಡ ಸೇರಿದಂತೆ ಮಣ್ಣಿನಿಂದ ವಿವಿಧ ವಸ್ತುಗಳನ್ನು ತಯಾರಿಸುತ್ತಾ ಬರುತ್ತಿದ್ದಾರೆ. ಹಲವು ವರ್ಷಗಳಿಂದ ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು ಸೇರಿದಂತೆ ವಿವಿಧೆಡೆಗೆ ದೀಪಾವಳಿ ಹಬ್ಬಕ್ಕಾಗಿ ಮಣ್ಣಿನ ದೀಪಗಳನ್ನು ಸರಬರಾಜು ಮಾಡುತ್ತಿದ್ದರು. ಆದರೆ, ಇದೀಗ ಬೇಡಿಕೆ ಇಲ್ಲದ ಕಾರಣ ಸಾಂಪ್ರದಾಯಿಕ ಕೈಕಸುಬು ಮಣ್ಣಿನ ಹಣತೆ ತಯಾರಿಕೆಯಿಂದಲೇ ಕುಂಬಾರರು ಹಿಂದೆ ಸರಿಯುವಂತಾಗಿದೆ.

10 ಲಕ್ಷದಿಂದ 50 ಸಾವಿರಕ್ಕೆ ಕುಸಿತ: ದೂರ ಗ್ರಾಮದ ಕುಂಬಾರ ಸಮುದಾಯದ 14 ಕುಟುಂಬದ ಕುಂಬಾರ ಕುಶಲ ಕೈಗಾರಿಕಾ ಸಹಕಾರ ಸಂಘದ ಮೂಲಕ ಒಂದೇ ಶೆಡ್‌ನಲ್ಲಿ 50ಕ್ಕೂ ಹೆಚ್ಚು ಜನ ಸೇರಿ ಮಣ್ಣಿನ ಹಣತೆ ತಯಾರಿಸುವ ಕಾಯಕದಲ್ಲಿ ತೊಡಗಿಸಿಕೊಂಡಿದ್ದಾರೆ. ಐದು ವರ್ಷದ ಹಿಂದೆ ವರ್ಷಕ್ಕೆ 8 ರಿಂದ 10 ಲಕ್ಷ ಮಣ್ಣಿನ ದೀಪ ತಯಾರಿಸಿ ಮಾರುತ್ತಿದ್ದ ಈ ಸಹಕಾರ ಸಂಘದ ಸದಸ್ಯರು, ಇದೀಗ ವರ್ಷಕ್ಕೆ ಕೇವಲ 50 ಸಾವಿರ ಮಣ್ಣಿನ ದೀಪವನ್ನಷ್ಟೇ ತಯಾರಿಸುವ ಮಟ್ಟಕ್ಕೆ ಬೇಡಿಕೆ ಕಡಿಮೆಯಾಗಿದೆ.

ಆರ್ಡರ್ ಕೊಟ್ಟರೆ ತಯಾರಿಸಿ ಕೊಡುತ್ತಾರೆ: ದೂರ ಗ್ರಾಮದಲ್ಲಿನ ಹಣತೆ ತಯಾರಿಕಾ ಕೇಂದ್ರದಲ್ಲಿ ಒಂದು ಮಣ್ಣಿನ ದೀಪಕ್ಕೆ ಒಂದೆರಡು ರೂ. ಬೆಲೆ. ಆದರೆ, ಅವುಗಳನ್ನು ಇತರೆಡೆ ಸರಬರಾಜು ಮಾಡುವಾಗ, ಸಾಗಾಣಿಕೆ ವೆಚ್ಚದೊಂದಿಗೆ ಚೀಲದ ದರವನ್ನೂ ನೀಡ ಬೇಕಾಗುತ್ತದೆ. ಹಾಗಾಗಿ ಬೆಲೆ ತುಸು ಹೆಚ್ಚಿರಬಹುದು. ಮಾರಾಟಗಾರರು ಆರ್ಡರ್ ಕೊಟ್ಟರೆ ಎಷ್ಟು ಬೇಕಾದರೂ ಮಣ್ಣಿನ ದೀಪ ತಯಾರಿಸಿಕೊಡುತ್ತಾರೆ.

ಮೌಲ್ಡ್‌ಗೆ ಬೌಲ್ಡ್ ಆದ ಜನ: ಇತ್ತೀಚಿನ ದಿನಗಳಲ್ಲಿ ಜನ ಎಲ್ಲದರಲ್ಲೂ ಆಧುನಿಕತೆಯ ಹೊಸತನಕ್ಕೆ ಮಾರು ಹೋಗುತ್ತಿದ್ದು, ದೀಪಾವಳಿ ಹಾಗೂ ಕಾರ್ತಿಕ ಸೋಮವಾರದಂದು ಮನೆ ಬೆಳಗುತ್ತಿದ್ದ ಸಾಂಪ್ರದಾಯಿಕ ಮಣ್ಣಿನ ದೀಪಗಳಿಗೂ ಫ್ಯಾಷನ್ ಪೆಡಂಭೂತ ಅಂಟಿಕೊಂಡಿದೆ. ಹಾಗಾಗಿ ಮಣ್ಣಿನ ದೀಪಗಳಿಗೆ ಸಂಚಾಕಾರ ಬಂದೊದಗಿದೆ. ನೋಡಲು ಸುಂದರವಾಗಿ ಕಾಣುವ, ನಾನಾ ವಿನ್ಯಾಸದ ಮೌಲ್ಡ್ ದೀಪಗಳು ಮಾರುಕಟ್ಟೆಗೆ ಬಂದಿದ್ದು, ಗ್ರಾಹಕರನ್ನು ಸೆಳೆಯುತ್ತಿವೆ. ರಾಸಾಯನಿಕ ವಸ್ತುಗಳ ಮಿಶ್ರಣದೊಂದಿಗೆ ತಯಾರಿಸಿರುವ ಈ ದೀಪಗಳಿಗೆ ಜನ ಬೌಲ್ಡ್ ಆಗಿದ್ದು, ಪರಿಸರ ಪೂರಕವಾದ, ಶ್ರೇಷ್ಟತೆಯ ಸಂಕೇತವೂ ಆಗಿರುವ ಮಣ್ಣಿನ ದೀಪಕ್ಕೆ ಬೇಡಿಕೆ ಕುಸಿದಿದೆ. ಮಾರುಕಟ್ಟೆಯಲ್ಲಿ 1.50 ರೂ. 2 ರೂ.ಗೆ ಮಣ್ಣಿನ ದೀಪ ಸಿಕ್ಕರೂ, ಜನ ಮಾತ್ರ 50 ರೂ., 100 ರೂ. ನೀಡಿ ಮೌಲ್ಡ್ ದೀಪ ಖರೀದಿಸುತ್ತಿದ್ದಾರೆ.

ತಯಾರಿಕೆ ಸುಲಭವಲ್ಲ: ಮಣ್ಣಿನ ದೀಪಗಳ ಮಾಡುವುದು ಸುಲಭದ ಮಾತಲ್ಲ. ಜೇಡಿ ಮಣ್ಣನ್ನು ತಂದು, ಅದನ್ನು ಹದ ಮಾಡಿ, ಒಂದೆಡೆ ಸಂಗ್ರಹಿಸಿಟ್ಟು, ಬಳಿಕ ಅದು ಮಾಗಿದ ಮೇಲೆ ಮೇಣದಂತೆ ತೆಗೆದು ಕೈಯಿಂದಲೇ ವಿವಿಧ ಅಳತೆಯ ದೀಪ ತಯಾರಿಸಲಾಗುತ್ತದೆ. ಹೀಗೆ ತಯಾರಿಸಿದ ಬಳಿಕ 3-4 ದಿನ ಬಿಸಿಲಿನಲ್ಲಿ ಒಣಗಿಸಿ, ಒಲೆಗೂಡಿನಲ್ಲಿ ಜೋಡಣೆ ಮಾಡಿ, ಚೆನ್ನಾಗಿ ಬೇಯಿಸ ಲಾಗುತ್ತದೆ. ಚೆನ್ನಾಗಿ ಬೆಂದಿರುವುದ ಖಚಿತಪಡಿಸಿಕೊಂಡು ಗೂಡು ಒಡೆದು, ಬಳಿಕ ದೀಪಗಳನ್ನು ಮಾರಾಟಕ್ಕೆ ಕೊಂಡೊಯ್ಯಲಾಗುತ್ತದೆ. ದೀಪ ತಯಾರಿಕೆಗೆ ಕನಿಷ್ಠ 15 ದಿನ ಬೇಕಾಗುತ್ತದೆ. ಇಷ್ಟಾದರೂ ಕುಲಕಸುಬು ಅನುಸರಿಸುತ್ತಿರುವ ಕುಂಬಾರರ ಹಿತ ಕಾಯಲು ಮುಂದಾಗದ ಜನ ಸಮುದಾಯ ಯಂತ್ರದಿಂದ ತಯಾರಿಸಿದ, ಪರಿಸರದ ಮೇಲೆ ದುಷ್ಪರಿಣಾಮ ಬೀರುವ ಮೌಲ್ಡ್ ದೀಪಗಳನ್ನು ದುಬಾರಿ ಬೆಲೆ ನೀಡಿ ಖರೀದಿಸುತ್ತಿರುವುದು ವಿಷಾದದ ಸಂಗತಿ ಎಂದು ಕುಂಬಾರ ಸಮುದಾಯ ಬೇಸರ ವ್ಯಕ್ತಪಡಿಸಿದೆ.



ಸಾಂಪ್ರದಾಯಿಕ ದೀಪ ತಯಾರಿಕಾ ಕಾಯಕ ಆಶ್ರಯಿಸಿದ ಕುಟುಂಬಗಳ ಸಂಕಷ್ಟ

ಕುಂಬಾರ ಕುಲಕಸುಬಿಗೆ ಕಂಟಕ

ದೂರ ಗ್ರಾಮದಲ್ಲಿ 14 ಕುಟುಂಬದ 50 ಜನ ಮಣ್ಣಿನಿಂದ ದೀಪ ಸೇರಿದಂತೆ ವಿವಿಧ ವಸ್ತುಗಳ ತಯಾರಿಕೆಯಲ್ಲಿ ತೊಡಗಿದ್ದಾರೆ. ದೀಪಾವಳಿ ಹಬ್ಬಕ್ಕಾಗಿ ಈ ಹಿಂದೆ ಲಕ್ಷಾಂತರ ಮಣ್ಣಿನ ದೀಪಗಳನ್ನು ತಯಾರಿಸುತ್ತಿದ್ದೆವು. ಆದರೆ, ಕೆಲ ವರ್ಷಗಳಿಂದೀಚೆಗೆ ಜನ ಮೌಲ್ಡ್ ದೀಪಗಳನ್ನು ಬಳಸುತ್ತಿದ್ದಾರೆ. ದುಬಾರಿ ಬೆಲೆಯಾದರೂ ಆ ದೀಪಗಳನ್ನೇ ಖರೀದಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಾದರೂ ಜನ ಮಣ್ಣಿನ ದೀಪಗಳನ್ನು ಬಳಸುವುದಕ್ಕೆ ಮುಂದಾಗಬೇಕು. ಆ ಮೂಲಕ ಕುಂಬಾರರ ಕುಲಕಸುಬನ್ನು ಪ್ರೋತ್ಸಾಹಿಸಬೇಕು. ಸರ್ಕಾರ, ಜಿಲ್ಲಾಡಳಿತ ಮೌಲ್ಡ್ ದೀಪಗಳ ಸರಬರಾಜಿಗೆ ಕಡಿವಾಣ ಹಾಕಬೇಕು.

- ಗೋವಿಂದರಾಜು, ಮಣ್ಣಿನದೀಪ ತಯಾರಕರು, ದೂರ ಗ್ರಾಮ



ಚಿನ್ನದ ದೀಪಕ್ಕಿಂತಲೂ ಮಣ್ಣಿನ ದೀಪ ಶ್ರೇಷ್ಠ

ದೀಪಾವಳಿ, ಕಾರ್ತಿಕ ಸೋಮವಾರ ಹಾಗೂ ಶಬರಿಮಲೆ ಯಾತ್ರೆ ವೇಳೆ ಬೆಳಗುವಾಗ ಮಣ್ಣಿನ ದೀಪಗಳನ್ನು ಹಚ್ಚಿದರೆ ಒಳ್ಳೆಯದಾಗುತ್ತದೆ. ಚಿನ್ನ, ಬೆಳ್ಳಿ ದೀಪಕ್ಕಿಂತಲೂ ಮಣ್ಣಿನ ದೀಪ ಹಚ್ಚುವುದು ಶ್ರೇಷ್ಠ. ಇಂತಹ ಶ್ರೇಷ್ಠ ದೀಪ ತ್ಯಜಿಸಿ, ಜನ ಮೌಲ್ಡ್ ದೀಪ ಬಳಸುತ್ತಿದ್ದಾರೆ. ಜನ ಸೌಂದರ್ಯಕ್ಕೆ ಮಾರು ಹೋಗದೆ ಸಾಂಪ್ರದಾಯಿಕ ಮಣ್ಣಿನ ದೀಪಗಳ ಶ್ರೇಷ್ಠತೆಯ ಬಗ್ಗೆ ಮನವರಿಕೆ ಮಾಡಿಕೊಂಡು, ಮಣ್ಣಿನ ದೀಪಗಳನ್ನು ಬಳಸಬೇಕು.

- ಪ್ರಕಾಶ್, ದೀಪ ತಯಾರಕರು

ಆರ್‌ಎಸ್‌ಎಸ್ ನಿಷೇಧ ಹ್ಯಾಗೆ ಮಾಡ್ತೀರಾ...?



ಕಳೆದೊಂದು ವಾರದಿಂದ ರಾಜ್ಯದಲ್ಲಿ 'ಆರ್‌ಎಸ್‌ಎಸ್ ನಿಷೇಧ ಮಾಡುತ್ತೇವೆ' ಎನ್ನುವ ಕೂಗು ಕಾಂಗ್ರೆಸ್ ವಲಯದಲ್ಲಿ, ಅದರಲ್ಲೂ ಪ್ರಮುಖವಾಗಿ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾಗಿರುವ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಪುತ್ರ ಪ್ರಿಯಾಂಕಾ ಖರ್ಗೆಯವರಿಂದ ಜೋರಾಗಿಯೇ ಕೇಳಿಬರುತ್ತಿದೆ. 'ಆರ್‌ಎಸ್‌ಎಸ್ ನಿಷೇಧ ಮಾಡುವುದೇನೋ ಸರಿ. ಆದರೆ ಹೇಗೆ ಮಾಡುತ್ತೀರಿ?' ಇಂತಹ ದೊಡ್ಡದೊಂದು ಪ್ರಶ್ನೆ ಪ್ರತಿಯೊಬ್ಬರ ಮನಸ್ಸಿನಲ್ಲಿ ಮೂಡುತ್ತದೆ. ಆರ್‌ಎಸ್‌ಎಸ್ ನಿಷೇಧ ಮಾಡುತ್ತೇವೆ ಎಂದು ಹೇಳುವ ಮತ್ತು ಅದನ್ನು ಬೆಂಬಲಿಸುವವರಿಗೆ ನಮ್ಮಿಂದ ಕೆಲವು ಪ್ರಶ್ನೆಗಳಿವೆ. ಹಾಗೆಯೇ ಡೌಟುಗಳು ಇವೆ!

ಮೊದಲನೇ ಡೌಟು

ಒಂದು ಸಂಘಟನೆಯನ್ನು ನಿಷೇಧ ಮಾಡುವುದು ಎಂದರೆ ಅದರ ನೋಂದಣಿ (ರಿಜಿಸ್ಟ್ರೇಷನ್) ಕ್ಯಾನ್ಸಲ್ ಮಾಡುವುದು. ಆ ಮೂಲಕ ಒಂದು ರಿಜಿಸ್ಟರ್ಡ್ ಸಂಘಟನೆಗೆ ಸಿಗಬೇಕಾದ ಎಲ್ಲ ಸೌಲಭ್ಯಗಳನ್ನೂ ನಿಲ್ಲಿಸಿಬಿಡುವುದು. ಆದರೆ, '**ಆರ್‌ಎಸ್‌ಎಸ್ ಒಂದು ನೋಂದಾಯಿತ ಸಂಘಟನೆಯೇ ಅಲ್ಲ**' ಎಂದು ನೀವೇ ಹೇಳುತ್ತೀರಿ! ಹಾಗಾದರೆ ರಿಜಿಸ್ಟ್ರೇಷನ್ನೇ ಆಗದ ಸಂಘಟನೆಯೊಂದರ ರಿಜಿಸ್ಟ್ರೇಷನ್ನನ್ನು ಹೇಗೆ ಕ್ಯಾನ್ಸಲ್ ಮಾಡುತ್ತೀರಿ?

ಎರಡನೇ ಡೌಟು

ಸಾಮಾನ್ಯವಾಗಿ ಒಂದು ಸಂಘಟನೆಯನ್ನು ನಿಷೇಧ ಮಾಡುವಾಗ ಅದಕ್ಕೆ ಸಂಬಂಧಿಸಿದ ಎಲ್ಲ ಬ್ಯಾಂಕ್ ಅಕೌಂಟ್‌ಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಅಥವಾ ಆ ಖಾತೆಗಳ ವಹಿವಾಟಿನ ಮೇಲೆ ನಿರ್ಬಂಧ ಹೇರಲಾಗುತ್ತದೆ. 'ಆರ್‌ಎಸ್‌ಎಸ್ ಒಂದು ನೋಂದಾಯಿತ ಸಂಘಟನೆಯೇ ಅಲ್ಲ' ಎಂದ ಮೇಲೆ ಅದರ ಹೆಸರಿನಲ್ಲಿ ಬ್ಯಾಂಕ್ ಅಕೌಂಟುಗಳು ಇರಲು ಹೇಗೆ ಸಾಧ್ಯ? ಇಲ್ಲದ ಬ್ಯಾಂಕ್ ಅಕೌಂಟುಗಳ ವಹಿವಾಟು ಹೇಗೆ ನಿರ್ಬಂಧಿಸುತ್ತೀರಿ?"

ಮೂರನೇ ಡೌಟು

ಒಂದು ಸಂಘಟನೆಯನ್ನು ನಿಷೇಧ ಮಾಡುವುದು ಎಂದರೆ ಅದರ ಎಲ್ಲ ಕಚೇರಿಗಳಿಗೆ ಬೀಗ ಜಡಿಯುವುದು. ತಾವುಗಳೇ ಹೇಳುವಂತೆ, ಆರ್‌ಎಸ್‌ಎಸ್ ಒಂದು ನೋಂದಾಯಿತ ಸಂಘಟನೆಯೇ ಅಲ್ಲ ಎಂದ ಮೇಲೆ ಅದಕ್ಕೆ ಕಚೇರಿಗಳು ಇರಲು ಹೇಗೆ ಸಾಧ್ಯ? ಬೇರೆ ಬೇರೆ ವ್ಯಕ್ತಿಗಳ/ಹಿತೈಷಿಗಳ ಅಥವಾ ಟ್ರಸ್ಟ್‌ಗಳ ಒಡೆತನದ ಕಟ್ಟಡಗಳಲ್ಲಿ ಸ್ವಯಂಸೇವಕರು ಒಂದೆಡೆ ಸೇರುತ್ತಾರೆಯೇ ಹೊರತು ತಮ್ಮದೇ ಸ್ವಂತ ಕಟ್ಟಡಗಳು/ ಕಚೇರಿಗಳು ಅವರಿಗೆ ಇರಲು ಸಾಧ್ಯವೇ ಇಲ್ಲ! ಹೀಗಿರುವಾಗ ಯಾವ ಕಚೇರಿಗೆ ಬೀಗ ಜಡಿಯುತ್ತೀರಿ?

ನಾಲ್ಕನೇ ಡೌಟು

ಸಂಘಟನೆಯನ್ನು ನಿಷೇಧ ಮಾಡುವುದು ಎಂದರೆ ಆ ಸಂಘಟನೆಯವರು ಮಾಡುವ ಕೆಲಸಗಳನ್ನು ಪೊಲೀಸರ ಮೂಲಕ ತಡೆಯುವುದು. ಯಾವುದೇ ಅಪಘಾತವಾಗಲೀ, ದುರಂತವಾಗಲೀ, ಯಾವುದೋ ರಾಜ್ಯದ ಯಾವುದೋ ಭಾಗದಲ್ಲಿ ನೆರೆ ಬರಲೀ, ಆರ್‌ಎಸ್‌ಎಸ್ ಸ್ವಯಂ ಸೇವಕರು ತಕ್ಷಣವೇ ಅಲ್ಲಿ ಹಾಜರಿದ್ದು ಪರಿಹಾರ ಕಾರ್ಯಗಳನ್ನು ಮಾಡುತ್ತಾರೆ. ನಿಷೇಧ ಮಾಡುತ್ತೇವೆ ಎನ್ನುವ ತಾವುಗಳೇ ಹೇಳುವಂತೆ ಆರ್‌ಎಸ್‌ಎಸ್ ಒಂದು ನೋಂದಾಯಿತ ಸಂಘಟನೆಯೇ ಅಲ್ಲ. ಅದೊಂದು ದೇಶಭಕ್ತ ಖಾಸಗಿ ಜನರ ಗುಂಪು ಅಷ್ಟೇ. ಹೀಗಿರುವಾಗ ಜನರ ಸಂಕಷ್ಟ ಕಾಲದಲ್ಲಿ ಸಹಾಯ ಮಾಡಲು ಧಾವಿಸುವ ಖಾಸಗಿ ವ್ಯಕ್ತಿಗಳನ್ನು, ಹಾಗೆ ಸಹಾಯ ಮಾಡದಂತೆ ಕಾನೂನು ಮುಖಾಂತರ ತಡೆಯುತ್ತೀರಿ. ಹಾಗೆ ತಡೆಯುವ ಪ್ರಯತ್ನ ಮಾಡಿದರೆ ಅಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಜನರು ನಿಮ್ಮನ್ನು ಸುಮ್ಮನೆ ಬಿಟ್ಟಾರೆಯೇ?

ಐದನೇ ಡೌಟು

ಒಂದು ಸಂಘಟನೆಯನ್ನು ನಿಷೇಧ ಮಾಡಿದರೆ ಆ ಸಂಘಟನೆಯಿಂದ ನಡೆಸಲ್ಪಡುವ ಸಂಸ್ಥೆಗಳು/ ಶಾಲೆಗಳು ಇತ್ಯಾದಿಗಳ ಚಟುವಟಿಕೆಗಳನ್ನೂ ನಿಲ್ಲಿಸಲಾಗುತ್ತದೆ. ಆದರೆ, 'ಆರ್‌ಎಸ್‌ಎಸ್ ಒಂದು ನೋಂದಾಯಿತ ಸಂಘಟನೆಯೇ ಅಲ್ಲವೆಂದ ಮೇಲೆ ಅದು ಶಾಲೆಗಳನ್ನಾಗಲೀ ಅಥವಾ ಇನ್ನಾವುದೇ ಸಂಸ್ಥೆಗಳನ್ನಾಗಲೀ ನಡೆಸಲು ಹೇಗೆ ಸಾಧ್ಯ? ಆರ್‌ಎಸ್‌ಎಸ್ ಬಿಂಬಿಸಲಾಗುವ ಶಾಲೆಗಳು ಆರ್‌ಎಸ್‌ಎಸ್ ಚಿಂತನೆಗಳಿಂದ ಪ್ರಭಾವಿತರಾದ ಖಾಸಗಿ ವ್ಯಕ್ತಿಗಳು ಸಂವಿಧಾನಬದ್ಧವಾಗಿ ನಡೆಸುತ್ತಿರುವ ಸಂಸ್ಥೆಗಳು. ಆರ್‌ಎಸ್‌ಎಸ್ ಮೇಲಿನ ವೈಯುಕ್ತಿಕ ದ್ವೇಷದಿಂದ ಅಂತಹ ಸಂಸ್ಥೆಗಳಿಗೆ ತೊಂದರೆ ಕೊಡಲು ಹೊರಟರೆ ನ್ಯಾಯಾಲಯಗಳು ಕೈಕಟ್ಟಿ ಕುಳಿತುಕೊಳ್ಳುತ್ತವೆ ಎಂದುಕೊಂಡಿದ್ದೀರಾ?

ಆರನೇ ಡೌಟು

ಸಾಮಾನ್ಯವಾಗಿ ಒಂದು ಸಂಘಟನೆಯನ್ನು ನಿಷೇಧ ಮಾಡಿದರೆ ಆ ಸಂಘಟನೆಯಿಂದ ಹೊರಬರುವ ಪುಸ್ತಕ/ಪತ್ರಿಕೆ/ನಿಯತಕಾಲಿಕೆಗಳು ಮುಂತಾದ ಪ್ರಕಟಣೆಗಳನ್ನು ತಡೆಹಿಡಿಯಲಾಗುತ್ತದೆ. ಆದರೆ, 'ಆರ್‌ಎಸ್‌ಎಸ್ ಒಂದು ನೋಂದಾಯಿತ ಸಂಘಟನೆಯೇ ಅಲ್ಲ ಎಂದ ಮೇಲೆ ಅದರ ಹೆಸರಿನಲ್ಲಿ ಪ್ರಕಟಣಾ ಸಂಸ್ಥೆಗಳಿರಲು ಹೇಗೆ ಸಾಧ್ಯ? ಯಾವ ಪ್ರಕಟಣಾ ಸಂಸ್ಥೆಗಳನ್ನು ಆರ್‌ಎಸ್‌ಎಸ್‌ನದ್ದು ಎಂದು ಬಿಂಬಿಸಲಾಗುತ್ತಿದೆಯೋ, ಅವೆಲ್ಲವೂ ಖಾಸಗಿ ವ್ಯಕ್ತಿಗಳು, ಟ್ರಸ್ಟ್‌ಗಳು ಅಥವಾ ಕಂಪನಿಗಳಿಂದ ಸ್ವತಂತ್ರವಾಗಿ ಮತ್ತು ಕಾನೂನುಬದ್ಧವಾಗಿ ನಡೆಸಲ್ಪಡುತ್ತಿರುವಂತಹವು. ಆರ್‌ಎಸ್‌ಎಸ್ ಮೇಲಿನ ವೈಯುಕ್ತಿಕ ದ್ವೇಷದಿಂದ ಕಾನೂನುಬದ್ಧವಾಗಿ ನಡೆಯುತ್ತಿರುವ ಅಂತಹ ಖಾಸಗಿ ಸಂಸ್ಥೆಗಳಿಗೆ ತೊಂದರೆ ಕೊಡಲು ಹೊರಟರೆ ಫಿರೋಜ್ ಗಾಂಧಿಯವರ ಮೊಮ್ಮಗ ನ್ಯಾಯಾಲಯದ ಮುಂದೆ ಕೈಮುಗಿದು ಕ್ಷಮೆ ಕೇಳಿದ ಘಟನೆ ಮತ್ತೊಮ್ಮೆ ಮರುಕಳಿಸಿಯೇ ತೀರುತ್ತದೆ.

ಏಳನೇ ಡೌಟು

ಉದ್ಯಾನವನಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳನ್ನು ನಿರ್ಬಂಧಿಸಲಾಗುವುದು ಎನ್ನುತ್ತಿದ್ದೀರಿ. ಆದರೆ ಉದ್ಯಾನವನಗಳು ಇರುವುದೇ ಪರಸ್ಪರರು ಒಂದೆಡೆ ಸೇರಲು, ವಾಯುವಿಹಾರ ಮಾಡಲು. ಅಲ್ಲಿ ಹೋಗಿ ಸ್ವಯಂ ಸೇವಕರು ಮಾಡುವುದೂ ಅದೇ ಕೆಲಸವನ್ನೇ ಹೊರತೂ ಇನ್ನಾವುದೋ ಅಕ್ರಮ ಚಟುವಟಿಕೆಗಳನ್ನಲ್ಲ. ಹೀಗಿರುವಾಗ ತಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಹಾಗೂ ಒಂದೆಡೆ ಕುಳಿತು ಚರ್ಚಿಸಲು ಪಾರ್ಕುಗಳಿಗೆ ಹೋಗುವ ಸ್ವಯಂಸೇವಕರನ್ನು ಮಾತ್ರ ಪಾರ್ಕಿನಿಂದ ಹೇಗೆ ಹೊರಗೆ ಕಳಿಸುತ್ತೀರಿ? ಅಥವಾ ನಾಯಿ ಬೆಕ್ಕುಗಳನ್ನು ಹೊರತುಪಡಿಸಿ ಪಾರ್ಕುಗಳ ಒಳಗೆ ಎಲ್ಲರ ಪ್ರವೇಶವನ್ನೂ ನಿಷೇಧಿಸುತ್ತೀರಾ? ಆ ದೇಶಭಕ್ತಿಗೀತೆಯಲ್ಲಿ ಹಿಂದು ರಾಷ್ಟ್ರ ಎನ್ನುವ ಪದವಿದೆ ಎನ್ನುವ ಕಾರಣಕ್ಕೆ ಅದನ್ನು ನಿಷೇಧಿಸುವುದಾದರೆ ಹಿಂದೂಸ್ತಾನ್ ಪೆಟ್ರೋಲಿಯಂ, ಹಿಂದೂಸ್ತಾನ್ ಏರೋನಾಟಿಕ್ಸ್ ಮುಂತಾದ ಹೆಸರುಗಳನ್ನೂ ನೀವು ನಿಷೇಧಿಸಬೇಕಾಗುತ್ತದೆ.

ಎಂಟನೇ ಡೌಟು

ಮುಜರಾಯಿ ದೇವಾಲಯಗಳ ವ್ಯಾಪ್ತಿಯಲ್ಲಿ ಸ್ವಯಂಸೇವಕರು ಹೋಗುವುದನ್ನು ನಿಷೇಧಿಸುತ್ತೇವೆ ಎನ್ನುತ್ತಿದ್ದೀರಿ! ದೇವಾಲಯಗಳು ಹಿಂದೂಗಳದ್ದು. ಹಿಂದೂಗಳು ದೇಶವನ್ನು ಕೂಡ ಭಾರತ ಮಾತೆ ಎನ್ನುವ ಹೆಸರಿನಲ್ಲಿ ಪೂಜಿಸುತ್ತಾರೆ. ಆದ್ದರಿಂದ ದೇವಾಲಯದ ಆವರಣದ ಒಳಗೆ ದೇಶಭಕ್ತಿಗೀತೆಯನ್ನು (ನಮಸ್ತೆ ಸದಾ ವತ್ಸಲೇ) ಹಾಡುತ್ತಾರೆ. ದೇವಾಲಯದ ಆವರಣದ ಒಳಗೆ ಭಕ್ತಿಗೀತೆಯನ್ನು ಹಾಡದಂತೆ ನಿರ್ಬಂಧಿಸುವ ಹಕ್ಕು ಸಂವಿಧಾನಕ್ಕೂ ಇಲ್ಲ. ಇದಿಷ್ಟೇ ಅಲ್ಲದೆ, ಅಲ್ಲಿಗೆ ಯಾರು ಬರುತ್ತಾರೋ ಅವರೆಲ್ಲರೂ ಹಿಂದುಗಳಾಗಿ ಮತ್ತು ವೈಯುಕ್ತಿಕವಾಗಿಯೇ ಬರುತ್ತಾರೆ. ಆರ್‌ಎಸ್‌ಎಸ್ ಮೇಲಿನ ವೈಯುಕ್ತಿಕ ದ್ವೇಷದಿಂದ ನೀವೇನಾದರೂ ಆ ಹಿಂದೂಗಳನ್ನು ಹಿಂದೂ ದೇವಾಲಯಗಳ ಆವರಣದೊಳಗೆ ಪ್ರವೇಶಿಸದಂತೆ ತಡೆದರೆ ನ್ಯಾಯಾಲಯ ನಿಮಗೆ ಅಂತಿಂತಹ ಛೀಮಾರಿ ಹಾಕುವುದಿಲ್ಲ!

ಒಂಬತ್ತನೇ ಡೌಟು

ಆರ್‌ಎಸ್‌ಎಸ್ ಪಥಸಂಚಲನಕ್ಕೆ ಅವಕಾಶ ನೀಡುವುದಿಲ್ಲ ಎನ್ನುತ್ತಿದ್ದೀರಿ. ಆದರೆ ತಾವುಗಳೇ ಹೇಳುವಂತೆ 'ಆರ್‌ಎಸ್‌ಎಸ್ ಒಂದು ನೋಂದಾಯಿತ ಸಂಘಟನೆಯೇ ಅಲ್ಲ'. ಪಥಸಂಚಲನ ಮಾಡಬೇಕಾದಾಗ ಕೆಲವು ವ್ಯಕ್ತಿಗಳು ಕಾನೂನು ರೀತ್ಯಾ ಪೊಲೀಸ್ ಅನುಮತಿಯೂ ಸೇರಿದಂತೆ ಎಲ್ಲವನ್ನೂ ಪಡೆದುಕೊಂಡೇ ಪಥಸಂಚಲನ ಮಾಡುತ್ತಾರೆ. ಆ ಪಥಸಂಚಲನ ಒಂದಷ್ಟು ವ್ಯಕ್ತಿಗಳು ಒಂದೆಡೆ ಸೇರಿ ಮಾಡುವುದೇ ಹೊರತು ಆರ್‌ಎಸ್‌ಎಸ್ ಎನ್ನುವ ನೋಂದಾಯಿತ ಸಂಘಟನೆ ಅಲ್ಲ. ಕಾನೂನು ಪಾಲಿಸುವ ಯಾವುದೇ ವ್ಯಕ್ತಿಗಳು ಪಥಸಂಚಲನಕ್ಕೆ ಅವಕಾಶ ಕೇಳಿದಾಗ ಸಾಂವಿಧಾನಿಕವಾಗಿ ಅದನ್ನು ನೀವು ನಿರಾಕರಿಸುವಂತೆಯೇ ಇಲ್ಲ.

ಹತ್ತನೇ ಡೌಟು

ಆರ್‌ಎಸ್‌ಎಸ್ ಸಮವಸ್ತ್ರ ಎಂದು ಹೇಳಲಾಗುವ ವಸ್ತ್ರ ಧರಿಸಿ ವಿಧಾನಸೌಧಕ್ಕೆ ಬರುತ್ತೇವೆ ಎಂದು ಬಿಜೆಪಿ ಶಾಸಕರು ಹೇಳುತ್ತಿದ್ದಾರೆ. ಅದನ್ನು ಹೇಗೆ ತಡೆಯುತ್ತೀರಿ? ತಾವುಗಳೇ ಹೇಳುವಂತೆ ಆರ್‌ಎಸ್‌ಎಸ್ ಒಂದು ನೋಂದಾಯಿತ ಸಂಘಟನೆಯೇ ಅಲ್ಲ. ಹೀಗಿರುವಾಗ ಆ ಸಮವಸ್ತ್ರ ಕೂಡ ಒಂದು ಸಂಘಟನೆಯ ಅಧಿಕೃತ ಸಮವಸ್ತ್ರ ಎಂದು ಕಾನೂನು ಪರಿಗಣಿಸುವುದಿಲ್ಲ. ಬಿಜೆಪಿ ಶಾಸಕರು ಅಂದು ಒಂದೇ ಬಣ್ಣದ ಬಟ್ಟೆ ಧರಿಸಿ ಬಂದಿರುತ್ತಾರೆ ಅಷ್ಟೇ. ಹೆಚ್ಚೆಂದರೆ ವಿಧಾನಸೌಧದ ಒಳಗೆ ಲಾಠಿಯನ್ನು ಮಾತ್ರ ತರದಂತೆ ತಡೆಯಬಹುದೇ ಹೊರತು ಆ ಅನಧಿಕೃತ ಸಮವಸ್ತ್ರವನ್ನು ಧರಿಸಿ ಬರದಂತೆ ತಡೆಯಲು ದೇಶದ ಯಾವ ಕಾನೂನಿನಿಂದಲೂ ಸಾಧ್ಯವೇ ಇಲ್ಲ. ಹಾಗೊಂದು ವೇಳೆ ತಡೆಯಲೇಬೇಕು ಎನ್ನುವ ತೀರ್ಮಾನ ನೀವು ಮಾಡಿದರೆ ವಿಧಾನಸೌಧ ಪ್ರವೇಶಿಸುವವರಿಗೆ ವಸ್ತ್ರಸಂಹಿತೆ ಜಾರಿ ಮಾಡಬೇಕಾಗುತ್ತದೆ. ಹಾಗೆ ಮಾಡಿದರೆ ಯಾರೂ ಈಗ ಧರಿಸುವ ಬಟ್ಟೆಯಲ್ಲಿ ಬರುವುದಕ್ಕೆ ಕಷ್ಟವಾಗಬಹುದು!

ಹನ್ನೊಂದನೇ ಡೌಟು

ಒಂದು ಸಂಘಟನೆಯನ್ನು ನಿಷೇಧ ಮಾಡುವುದು ಎಂದರೆ ಅದರ ಮೂಲದ ಎಲ್ಲ ಸಂಘಟನೆಗಳನ್ನೂ ನಿಷೇಧಿಸುವುದು ಎಂದೇ ಅರ್ಥ. ಹಾಗಾದರೆ ನೀವು ಬಿಜೆಪಿಯನ್ನೂ ನಿಷೇಧಿಸುತ್ತೀರಾ? ಸ್ವದೇಶೀ ಜಾಗರಣ ಮಂಚ್ ನಿಷೇಧಿಸುತ್ತೀರಾ? ಭಾರತೀಯ ಮಜ್ದೂರ್ ಸಂಘವನ್ನು ನಿಷೇಧಿಸುತ್ತೀರಾ? ಅಥವಾ ಸಂವಿಧಾನಬದ್ಧವಾಗಿ ನಡೆಯುತ್ತಿರುವ ಇಂತಹ ನೂರಾರು ಇತರ ಸಂಘಟನೆಗಳನ್ನು ನಿಷೇಧಿಸುತ್ತೀರಾ?

ಇಲ್ಲಾ ಎನ್ನುವುದಾದರೆ:

ನೀವು ಹೇಳುತ್ತಿರುವ 'ಆರ್‌ಎಸ್‌ಎಸ್ ನಿಷೇಧ' ಎಂದರೆ ಏನು?

ಇಂತಹ ಹೇಳಿಕೆಗಳನ್ನು ನೀಡುತ್ತಾ ತೀವ್ರ ಬಡತನ, ಅನಕ್ಷರತೆ ಮತ್ತು ಸೌಲಭ್ಯ ವಂಚನೆಗಳಿಂದ ನರಳುತ್ತಿರುವ ಕಲ್ಬುರ್ಗಿ ಮತ್ತು ಇತರ ಹಿಂದುಳಿದ ಜಿಲ್ಲೆಗಳ ಜನರ ಗಮನವನ್ನು ಬೇರೆಡೆಗೆ ಸೆಳೆಯುವುದನ್ನು ಬಿಟ್ಟು ಬೇರೇನನ್ನು ಸಾಧಿಸಲು ನಿಮ್ಮಿಂದ ಸಾಧ್ಯವಿದೆ?



ಪ್ರವೀಣ್ ಕುಮಾರ್ ಮಾವಿನಕಾಡು

ಮಕ್ಕಳ ಚಿತ್ರಕಥೆ: 'ದಯವಿಟ್ಟು ರಸ್ತೆ ದಾಟಬೇಡಿ...!'


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಜಪಾನ್ ದೇಶದಲ್ಲಿ ಒಂದು ಖಾಲಿ ರಸ್ತೆ ಭಾರತೀಯನೊಬ್ಬ ಅಭ್ಯಾಸ ಬಲದಂತೆ ಸಿಗ್ನಲ್ ತೋರಿಸದಿದ್ದರೂ ರಸ್ತೆ ದಾಟಲು ಹೋದ.




ಪಕ್ಕದಲ್ಲಿದ್ದ ಆ ದೇಶದ ಪ್ರಜೆಯೊಬ್ಬ 'ದಯವಿಟ್ಟು ದಾಟಬೇಡಿ...!' ಎಂದ. ಆದರೆ ಭಾರತೀಯ 'ರಸ್ತೆ ಖಾಲಿ ಇದೆ..... ದಾಟಿದರೆ ತಪ್ಪೇನು...?' ಎಂದು ಕೇಳಿದ.




ಅದಕ್ಕೆ ಆ ಜಪಾನೀಯ, 'ಚಿಕ್ಕ ಮಕ್ಕಳು ಯಾರಾದರು ನೋಡ್ತಾರೇನೊ....!' ಎಂದ.



ಭಾರತೀಯನಿಗೆ ಅರ್ಥವಾಗಲಿಲ್ಲ. 'ಪೊಲೀಸರು ನೋಡಿದರೆ ತೊಂದರೆಯೇ ಹೊರತು... ಚಿಕ್ಕ ಮಕ್ಕಳು ನೋಡಿದರೆ ತೊಂದರೆಯೇನು...?' ಎಂದು ಕೇಳಿದ.



ಆ ವ್ಯಕ್ತಿ, 'ಪೊಲೀಸರು ನೋಡಿದರೆ ನಿನಗೆ ಟ್ರಾಫಿಕ್ ಸೆನ್ಸ್ ಇಲ್ಲ ಎಂದು 5 ಡಾಲರ್ ದಂಡ ಹಾಕುತ್ತಾರೆ. ಆದರೆ ಚಿಕ್ಕ ಮಕ್ಕಳು ನೋಡಿದರೆ ಒಂದು ಪೀಳಿಗೆಯೇ ಹಾಳಾಗಿ ಹೋಗುತ್ತದೆ. ಇದು ಭಾವೀ ನಾಗರಿಕತೆಯನ್ನು ರೂಪಿಸುವ ನೀತಿ...!' ಎಂದು ಹೇಳಿದ.



ಜಪಾನಿಯನ ಆ ಮಾತಿನಿಂದ ಭಾರತೀಯನಿಗೆ ಸುಧಾರಿಸಿಕೊಳ್ಳಲು ಬಹಳ ಸಮಯವೇ ಬೇಕಾಯಿತು.

ನೀತಿ: ಪ್ರತಿಯೊಬ್ಬನಿಗೂ ಅರಿವಿರಬೇಕು, ಚಿಕ್ಕ ಮಕ್ಕಳು ನಾವು ಹೇಳಿದ್ದು ಮಾಡಲ್ಲ.... ನಾವು ಮಾಡಿದ್ದನ್ನೇ ಅನುಸರಿಸುತ್ತಾರೆ. ಅದು ನಮ್ಮ ಉತ್ತಮ ಜೀವನ ಶೈಲಿಯೇ ಇರಲಿ, ಶಿಸ್ತುಬದ್ಧ ನಡೆಯೇ ಇರಲಿ.

ಮಸೀದಿ ರಸ್ತೆಯಲ್ಲಿ ಅನುಮತಿ ನೀಡದ ಪೊಲೀಸರು

ಸಿದ್ಧವಾಗಿದ್ದ ಆರ್‌ಎಸ್‌ಎಸ್ ಪಥ ಸಂಚಲನ ರದ್ದು

ಸರ್ಕಾರ, ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ವಾಗ್ದಾಳಿ

ತಿ.ನರಸೀಪುರ, ಅ.18–ಮಸೀದಿ ಇರುವ ಪಟ್ಟಣದ ಲಿಂಕ್ ರಸ್ತೆಯಲ್ಲಿ ಪಥ ಸಂಚಲನಕ್ಕೆ ಪೊಲೀಸರು ಅನುಮತಿ ನಿರಾಕರಿಸಿದ ಹಿನ್ನೆಲೆಯಲ್ಲಿ ಶನಿವಾರ ಹಿಂದೂಪರ ಸಂಘಟನೆಗಳು ಆಯೋಜಿಸಿದ್ದ ರಾಷ್ಟ್ರೀಯ ಸ್ವಯಂ ಸೇವಕರ ಸಂಘದ ಪಥ ಸಂಚಲನ ರದ್ದಾಗಿದ್ದು, ರಾಜ್ಯ ಸರ್ಕಾರದ ವಿರುದ್ಧ ಆರ್‌ಎಸ್‌ಎಸ್ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು.

ಆರ್‌ಎಸ್‌ಎಸ್ ಕಾರ್ಯ ಚಟುವಟಿಕೆಗಳಿಗೆ ಅನುಮತಿಯನ್ನು ಕಡ್ಡಾಯಗೊಳಿಸಿದ್ದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ವಿರುದ್ಧ ಬಲ ಪ್ರದರ್ಶಿಸಲು ಪಟ್ಟಣದಲ್ಲಿ ಹಿಂದೂಪರ ಸಂಘಟನೆಗಳು ಪಥ ಸಂಚಲನಕ್ಕೆ

ಸಿಎಂ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಚುನಾಯಿತ ಕ್ಷೇತ್ರ ತಿ.ನರಸೀಪುರದಲ್ಲಿ ಸ್ವಯಂ ಸೇವಕರ ಪಥ ಸಂಚಲನಕ್ಕೆ ಅನುಮತಿ ನೀಡದೆ ರಾಜ್ಯ ಸರ್ಕಾರದ ಪಾಳೇಗಾರಿಕೆ ಅಟ್ಟಹಾಸ ನಡೆಸುತ್ತಿದ್ದು, ಅಭಿವ್ಯಕ್ತಿ ಮತ್ತು ವಾಕ್ ಸ್ವಾತಂತ್ರ್ಯವನ್ನು ಪೊಲೀಸರ ಮೂಲಕ ಧಮನ ಮಾಡಲಾಗುತ್ತಿದೆ. ನಾಡಿನಲ್ಲಿ ನವರಾತ್ರಿಯ ಆಸುಪಾಸಿನಲ್ಲಿ ಹಿಂದೂಪರ ಸಂಘಟನೆಗಳು ಪಥ ಸಂಚಲನ ಆಯೋಜಿಸಿ ನಡೆಸುವುದು ಹಿಂದಿನಿಂದಲೂ ಪದ್ಧತಿ ಪೊಲೀಸರ ಅನುಮತಿ ಪಡೆದು ಲಿಂಕ್ ರಸ್ತೆಯಲ್ಲಿ ಪಥ ಸಂಚಲನವನ್ನು ನಡೆಸುತ್ತೇವೆ

–ಅಕ್ಷಯ್, ಆರ್‌ಎಸ್‌ಎಸ್ ವಿಭಾಗೀಯ ಸಂಚಾಲಕ

ಸಿದ್ಧತೆಗಳನ್ನು ಮಾಡಿಕೊಂಡಿದ್ದವು. ಅದಕ್ಕಾಗಿ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಾಲಯದ ಅವರಣದಲ್ಲಿ ನೂರಾರು ಸಂಖ್ಯೆಯಲ್ಲಿ ಶ್ವೇತ ವಸ್ತ್ರಧಾರಿಗಳಾಗಿದ್ದ ಸ್ವಯಂ ಸೇವಕರು ಸಿದ್ಧರಾಗಿದ್ದರು. ಸಂಘದ ನಿಯಮದಂತೆ ಸಂಚಾರಕ್ಕೆ ಅಣಿಯಾದರು.

ಸದಾ ವತ್ಸಲೇ ಗೀತೆಯನ್ನು ಆಡಿದ ಬಳಿಕ ದೇವಾಲಯದ ಸುತ್ತಲೂ ಮೂರು ಪ್ರದಕ್ಷಿಣೆ ಹಾಕಿದರು. ಬಳಿಕ ಉದ್ದೇಶಿತ ಲಿಂಕ್ ರಸ್ತೆಯಲ್ಲಿ ಪಥ ಸಂಚಲನ ನಡೆಸಲು ಮುಂದಾಗುತ್ತಿದ್ದಂತೆ ಪೊಲೀಸ್ ಇನ್ಸ್‌ಪೆಕ್ಟರ್ ಧನಂಜಯ ಅವರು ಲಿಂಕ್ ರಸ್ತೆಯಲ್ಲಿ ಮಸೀದಿ ಇರುವುದರಿಂದ ಅಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಸಂಚಲನಕ್ಕೆ ಅವಕಾಶ ನೀಡಲು ನಿರಾಕರಿಸಿ, ಪರ್ಯಾಯ ರಸ್ತೆಯಲ್ಲಿ ಸಂಚರಿಸಬೇಕು ಎಂದು ತಿಳಿಸಿದರು.

ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಸಂಘದ ವಿಭಾಗೀಯ ಸಂಚಾಲಕ ಅಕ್ಷಯ್ ಅವರು ಉದ್ದೇಶಿತ ರಸ್ತೆಯಲ್ಲಿ ಸಂಚಲನ ನಡೆಸುತ್ತೇವೆ. ಯಾವುದೇ ಕಾರಣಕ್ಕೂ ಬದಲಿ ರಸ್ತೆಯಲ್ಲಿ ಹೋಗಲ್ಲವೆಂದು ಪಟ್ಟು ಹಿಡಿದರು. ಲಿಂಕ್ ರಸ್ತೆಯಲ್ಲಿ ಸಂಚಾರಕ್ಕೆ ಅನುಮತಿಯನ್ನು ಪೊಲೀಸರು ನೀಡದಿದ್ದರಿಂದ ಪಥ ಸಂಚಲನವನ್ನು ರದ್ದುಗೊಳಿಸಿದರು.

ಬಿಜೆಪಿ ವಕ್ತಾರ ದಯಾನಂದ ಪಟೇಲ್ ಮಾತನಾಡಿ, ಆರ್‌ಎಸ್‌ಎಸ್ ಅನ್ನು ನಿಷೇಧಿಸುವ ಪ್ರಸ್ತಾಪ ಮಾಡುವ ಮೂಲಕ ಸಚಿವ ಪ್ರಿಯಾಂಕ ಖರ್ಗೆ ಅವರು ಹಳ್ಳಿ ಹಳ್ಳಿಯಲ್ಲಿ ಹಿಂದೂ ಧರ್ಮದ ಅಭಿಮಾನವನ್ನು ಪುಟಿದೇಳಿಸುವ ಮೂಲಕ ಸಂಘಟನೆಗೆ ಬ್ರಾಂಡ್ ಅಂಬಾಸಿಡರ್ ಆಗಿದ್ದಾರೆ. ರಾಜ್ಯ ಕಾಂಗ್ರೆಸ್ ಸರ್ಕಾರ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಸ್ವಯಂ ಸೇವಕರ ಸಂಘಟನೆಗೆ ಅಂಕುಶ ಹಾಕುವ ಪ್ರಯತ್ನ ಯಾವುದೇ ಕಾರಣಕ್ಕೂ ಕೈಗೂಡಲ್ಲ ಎಂದು ಎಚ್ಚರಿಸಿದರು.



ಪಟ್ಟಣದ ಶ್ರೀ ಗುಂಜಾ ನರಸಿಂಹ ಸ್ವಾಮಿ ದೇವಾಲಯದ ಆವರಣದಲ್ಲಿ ಪಥ ಸಂಚಲನಕ್ಕೆ ಸಜ್ಜಾಗಿರುವ ಸ್ವಯಂಸೇವಕರು.

ಮಾಜಿ ಶಾಸಕರಾದ ಹರ್ಷವರ್ಧನ, ಸಿ.ರಮೇಶ್, ಹಿರಿಯ ಶಸ್ತ್ರಚಿಕಿತ್ಸಕ ಡಾ.ಎಂ.ರೇವಣ್ಣ, ವರುಣ ಪರಾಜಿತ ಅಭ್ಯರ್ಥಿ ತೋಟದಪ್ಪ ಬಸವರಾಜು, ಮುಖಂಡ ಶರತ್ ಪುಟ್ಟಬುದ್ಧಿ, ಕ್ಷೇತ್ರಾಧ್ಯಕ್ಷ ನಗರ್ಲೆ ಮಹದೇವಸ್ವಾಮಿ, ಜಿಪಂ ಮಾಜಿ ಸದಸ್ಯ ಕೆಸಿ.ಲೋಕೇಶ್, ಟೌನ್ ಅಧ್ಯಕ್ಷ ಕೆ. ನಂಜುಂಡಸ್ವಾಮಿ, ಎ.ಎನ್.ರಂಗುನಾಯಕ, ಪುರಸಭೆ ಸದಸ್ಯರಾದ ಎಸ್.ಕೆ.ಕಿರಣ, ರೂಪಶ್ರೀ ಪರಮೇಶ್, ಆರ್.ಶಿವಕುಮಾರ್, ರಾಮಸ್ವಾಮಿ, ಬೆನಕನಹಳ್ಳಿ ವಿಜಯಕುಮಾರ್, ವರುಣ ಮಂಜು, ಕಿರಗಸೂರು ಮಹದೇವಸ್ವಾಮಿ, ಡಿ.ಎಲ್.ಮಹದೇವಪ್ಪ, ನಾಗೇಂದ್ರ, ಮಹದೇವ ಶೆಟ್ಟಿ ಹಾಗೂ ಇತರರು ಇದ್ದರು.

ಹೆಗ್ಗಡಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಆಯ್ಕೆ



ಹೆಗ್ಗಡಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಆಯ್ಕೆಯಾದ ಅಧ್ಯಕ್ಷ, ಉಪಾಧ್ಯಕ್ಷರನ್ನು ಸನ್ಮಾನಿಸಲಾಯಿತು.

ನಂಜನಗೂಡು: ತಾಲೂಕಿನ ಹೆಗ್ಗಡ ಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಹೆಚ್.ಬಿ.ರೇವಣ್ಣ, ಉಪಾಧ್ಯಕ್ಷರಾಗಿ ಪದ್ಮ ಆಯ್ಕೆಯಾದರು.

12 ಸದಸ್ಯರ ಬಲವನ್ನು ಹೊಂದಿರುವ ಹೆಗ್ಗಡಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಶನಿವಾರ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆಯನ್ನು ನಡೆಸಲಾಯಿತು. ಬ್ಯಾಂಕ್ ಪ್ರತಿನಿಧಿಯು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗಿಯಾಗಿರುವುದರಿಂದ ಸದಸ್ಯರ ಬಲದ ಸಂಖ್ಯೆ 13ಕ್ಕೆ ಏರಿಕೆಯಾಗಿತ್ತು.

ಅಧ್ಯಕ್ಷ ಸ್ಥಾನಕ್ಕೆ ಹೆಚ್.ಬಿ.ರೇವಣ್ಣ, ಮನೋಜ್ ನಾಮಪತ್ರ ಸಲ್ಲಿಸಿದ್ದರು. ಹೆಚ್.ಬಿ.ರೇವಣ್ಣ 7 ಮತಗಳನ್ನು ಪಡೆದು ವಿಜಯಶಾಲಿಯಾದರು. ಮನೋಜ್ 5 ಮತಗಳನ್ನು ಪಡೆದು ಪರಾಭವಗೊಂಡರು, ಒಂದು ಮತ ತಿರಸ್ಕೃತಗೊಂಡಿತು.

ಉಪಾಧ್ಯಕ್ಷ ಸ್ಥಾನಕ್ಕೆ ಪದ್ಮ ಹೊರತುಪಡಿಸಿ ಯಾರೊಬ್ಬರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾ ಅಧಿಕಾರಿಯಾಗಿದ್ದ ಸಹಕಾರ ಇಲಾಖೆಯ ಹಿರಿಯ ನಿರೀಕ್ಷಕರಾದ ರಾಜು ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಯನ್ನು ಘೋಷಿಸಿದರು.

ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ಮಾತನಾಡಿ, ಸದಸ್ಯರು ಪಕ್ಷಾತೀತವಾಗಿ ಸಂಘದ ಅಭಿವೃದ್ಧಿಗೆ ಸಹಕಾರ ನೀಡಬೇಕು, ಆ ಮೂಲಕ ರೈತರಿಗೆ ಸವಲತ್ತುಗಳನ್ನು ಒದಗಿಸಲು ಶ್ರಮಿಸಬೇಕು ಎಂದು ಸಲಹೆ ನೀಡಿದರು.

ನೂತನ ಅಧ್ಯಕ್ಷ ಎಚ್.ಬಿ.ರೇವಣ್ಣ ಮಾತನಾಡಿ, ಎಲ್ಲಾ ಸದಸ್ಯರ ಸಹಕಾರ ಪಡೆದು ಸಂಘವನ್ನು ಲಾಭದತ್ತ ಮುನ್ನಡೆಸುವ ಜೊತೆಗೆ ರೈತರಿಗೆ ಸವಲತ್ತುಗಳನ್ನು ಒದಗಿಸಲು ಶ್ರಮಿಸುತ್ತೇನೆ ಎಂದರು.

ನಿರ್ದೇಶಕರಾದ ಮನೋಜ್, ಗೋವಿಂದರಾಜು, ಅಶೋಕ್, ಮಲ್ಲೇಶ್, ನಂಜುಂಡಸ್ವಾಮಿ, ಸೋಮ, ಲೋಕೇಶ್, ಮಹೇಶ್, ಕಾರ್ಯದರ್ಶಿ ರವಿ, ಶಿವು, ದೊಡ್ಡಅಂಕಶೆಟ್ಟಿ, ಕಿಟ್ಟಣ್ಣ, ವೆಂಕಟೇಶ್, ಸಿದ್ದಪ್ಪ, ಸೋಮಶೇಖರ್, ರಾಜಶೇಖರ, ನಿರಂಜನ್ ಇದ್ದರು.

ಸಂಪೂರ್ಣ ಒಳ ಮೀಸಲಾತಿಗೆ ಆಗ್ರಹಿಸಿ ಪ್ರತಿಭಟನೆ



ಸಂಪೂರ್ಣ ಒಳಮೀಸಲಾತಿಗೆ ಆಗ್ರಹಿಸಿ ಪ್ರತಿಭಟನಾಕಾರರು ಮನವಿ ಸಲ್ಲಿಸಿದರು.

ಹೆಚ್.ಡಿ.ಕೋಟೆ, ಅ.18– ಡಾ.ಬಾಬು ಜಗಜೀವನ್ ರಾಮ್ ವಿಚಾರ ವೇದಿಕೆ ಮತ್ತು ಮಾತಂಗ ಜನ ಜಾಗೃತಿ ವೇದಿಕೆ ನೇತೃತ್ವದಲ್ಲಿ ಸಂಪೂರ್ಣ ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಹೆಚ್.ಡಿ.ಕೋಟೆ ಪಟ್ಟಣದಲ್ಲಿ ಮಾದಿಗ ಸಮುದಾಯದ ಮುಖಂಡರು ಬೃಹತ್ ಪ್ರತಿಭಟನೆಯನ್ನು ನಡೆಸಿದರು.

ಪಟ್ಟಣದ ಅಂಬೇಡ್ಕರ್ ಭವನದ ಬಳಿ ಜಮಾಯಿಸಿದ ಸಮುದಾಯದ ಮುಖಂಡರು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ನಂತರ ತಮಟೆ ಬಾರಿಸುತ್ತ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತ ಮೆರವಣಿಗೆ ಮುಖಾಂತರ ಮಿನಿ ವಿಧಾನಸೌಧ ಮುಂಭಾಗ ರಸ್ತೆ ತಡೆ ಮಾಡಿ ಘೋಷಣೆ ಕೂಗುತ್ತ ಪ್ರತಿಭಟಿಸಿದರು.

ಈ ವೇಳೆ ಮಾತನಾಡಿದ ಡಾ.ಬಾಬು ಜಗಜೀವನ್ ರಾಮ್ ವಿಚಾರ ವೇದಿಕೆ ಅಧ್ಯಕ್ಷ ಸಿ.ತಿಮ್ಮಯ್ಯ ಮಾದಿಗ ಸಮುದಾಯ ಸುಮಾರು 35 ವರ್ಷಗಳಿಂದ ನಿರಂತರವಾಗಿ ಹೋರಾಟ ಮಾಡುತ್ತಿದ್ದಾರೆ. ನಾಗಮೋಹನ್ ದಾಸ್ ಆಯೋಗದಂತೆ ರಾಜ್ಯ ಸರ್ಕಾರ ಒಳ ಮೀಸಲಾತಿಯನ್ನು ಸಂಪೂರ್ಣವಾಗಿ ಜಾರಿ ಮಾಡಬೇಕು ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಮಾಜ ಕಲ್ಯಾಣ ಇಲಾಖೆ ಸಚಿವ ಮಹದೇವಪ್ಪ ನಮಗೆ ಅನ್ಯಾಯ ಮಾಡಿದ್ದಾರೆ ಎಂದರು.

ಸಂಪೂರ್ಣವಾಗಿ ಒಳ ಮೀಸಲಾತಿಯನ್ನು ಜಾರಿ ಮಾಡದೆ ಹೋದರೆ ಮುಂಬರುವ ಚುನಾವಣೆಯಲ್ಲಿ ನಿಮ್ಮನ್ನು ಸೋಲಿಸಿ ಮನೆಗೆ ಕಳಿಸುವ ಕೆಲಸವನ್ನು ಮಾದಿಗ ಸಮುದಾಯ ಮಾಡುತ್ತದೆ ಎಂದು ಎಚ್ಚರಿಕೆಯನ್ನು ನೀಡಿದರು.

ಮಾಜಿ ಅಧ್ಯಕ್ಷ ಪಿ.ನಾಗರಾಜು ಮಾತನಾಡಿ, ಮಾದಿಗ ಸಮುದಾಯ ಇಡೀ ರಾಜ್ಯಾದ್ಯಂತ ರಾಜಕೀಯವಾಗಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿರುವ ಸಮುದಾಯ. ಈ ಸಮುದಾಯಕ್ಕೆ ನ್ಯಾಯವನ್ನು ದೊರಕಿಸಬೇಕಾದರೆ ಸಂಪೂರ್ಣವಾಗಿ ಒಳ ಮೀಸಲಾತಿಯನ್ನು ಜಾರಿ ಮಾಡಬೇಕು. ಬಡ್ತಿ, ನೇರ ನೇಮಕಾತಿ, ಉದ್ಯೋಗಕ್ಕೆ ಸಂಬಂಧಿಸಿದಂತೆ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರದಲ್ಲಿ ಆಗಿರುವ ಸಮಸ್ಯೆಗಳನ್ನು ಶೀಘ್ರದಲ್ಲೇ ಬಗೆ ಹರಿಸಬೇಕು ಎಂದು ಹೇಳಿದರು.

ತಾಲೂಕು ಆಡಳಿತ ಸೌಧದ ಮುಂಭಾಗ ತಹಸೀಲ್ದಾರ್ ಶ್ರೀನಿವಾಸ್ ಅವರ ಉಪಸ್ಥಿತಿಯಲ್ಲಿ ಅಧೀಕ್ಷಕ ಸಿದ್ದರಾಜು ಅವರಿಗೆ ಮನವಿ ಪತ್ರ ಸಲ್ಲಿಸಿ ಪ್ರತಿಭಟನೆ ಕೈಬಿಟ್ಟರು.

ಗೌರವಾಧ್ಯಕ್ಷ ಪರಶಿವಮೂರ್ತಿ, ಉಪಾಧ್ಯಕ್ಷ ಉಡ ನಾಗರಾಜ್, ಸುಭಾಷ್, ಮಾತಂಗ ಜನಜಾಗೃತಿ ವೇದಿಕೆಯ ಅಧ್ಯಕ್ಷ ಬೂದನೂರು ರವೀಶ್, ಮಾಜಿ ಅಧ್ಯಕ್ಷ ಪಿ.ನಾಗರಾಜು, ವೆಂಕಟೇಶ್, ಡಿ.ನಾಗರಾಜ್, ಬೆಟ್ಟಸ್ವಾಮಿ, ಬಸವರಾಜು, ಶಿವಯ್ಯ, ಶಿವರಾಜ್, ಮಹೇಶ್, ಪ್ರಕಾಶ್, ದೇವನಾಥ, ಚೆಲುವರಾಜು, ಶಿವರಾಜ್, ಸೋಮು ಪಟೇಲ್, ಕಾಳಪ್ಪಾಜಿ ಸಿ, ಹಂಚೀಪುರ ನಾಗರಾಜ್, ಮಹದೇವ, ನಾಗೇಂದ್ರ, ಶಿವಾಜಿ, ಶಿವರಾಜ್, ಮಂಜು, ಚೇತನ್, ಡಾ.ಬಾಬು ಜಗಜೀವನ್ ರಾಮ್ ವಿಚಾರ ವೇದಿಕೆ ಮತ್ತು ಮಾತಂಗ ಜನ ಜಾಗೃತಿ ವೇದಿಕೆ ಪದಾಧಿಕಾರಿಗಳು ಹಾಜರಿದ್ದರು.

ಸಚಿವ ಪ್ರಿಯಾಂಕ್ ಖರ್ಗೆಗೆ ಬೆದರಿಕೆ: ನರಸೀಪುರದಲ್ಲಿ ಪ್ರತಿಭಟನೆ

ತಿ.ನರಸೀಪುರ, ಅ.18–ರಾಜ್ಯದಲ್ಲಿ ಆರ್‌ಎಸ್‌ಎಸ್ ಸಂಘಟನೆಯನ್ನು ನಿಷೇಧಿಸುವ ಸಂಬಂಧ ಪತ್ರ ಬರೆದ ಸಚಿವ ಪ್ರಿಯಾಂಕ ಖರ್ಗೆ ಅವರನ್ನು ಬೆದರಿಸಿ, ನಿಂದಿಸಿರುವ ಆರ್‌ಎಸ್‌ಎಸ್ ಕಾರ್ಯಕರ್ತರ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ಪಟ್ಟಣದ ತಾಲೂಕು ಕಚೇರಿ ಮುಂಭಾಗ ಶುಕ್ರವಾರ ದಲಿತ ಸಂಘರ್ಷ ಸಮಿತಿ (ಬಣರಹಿತ)ಯ ಕಾರ್ಯಕರ್ತರು ಹಾಗೂ ಮುಖಂಡರು ಪ್ರತಿಭಟನೆ ನಡೆಸಿದರು.

ತಾಲೂಕು ಆಡಳಿತ ಕಚೇರಿ ಮುಂಭಾಗ ಜಮಾಯಿಸಿದ ದಸಂಸ ಪದಾಧಿಕಾರಿಗಳು ದಲಿತ ಸಮುದಾಯದ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಡಾ.ಹೆಚ್.ಸಿ.ಮಹದೇವಪ್ಪನವರ ವಿರುದ್ಧ ಬೆದರಿಕೆ ಹಾಕಿ, ನಿಂದನೆ ಮಾಡುತ್ತಿರುವ ಆರ್‌ಎಸ್‌ಎಸ್ ಪ್ರಾಯೋಜಿತ ಕಿಡಿಗೇಡಿಗಳ ವಿರುದ್ಧ ಧಿಕ್ಕಾರ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನಾ ಧರಣಿಯನ್ನು ಪ್ರಾರಂಭಿಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಜಿಲ್ಲಾ ಸಂಚಾಲಕ ಸಿ.ಉಮಾ ಮಹದೇವ ಮಾತನಾಡಿ, ಶತಮಾನೋತ್ಸವ ಆಚರಿಸುತ್ತೇವೆ ಎನ್ನುತ್ತಿರುವ ಆರ್‌ಎಸ್‌ಎಸ್ ಸ್ವಾತಂತ್ರ ಪೂರ್ವದಲ್ಲಿ ಆರಂಭವಾಗಿದ್ದರೆ, ಯಾವುದೇ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲಿಲ್ಲ. ಸಮಾಜದಲ್ಲಿ ಅಶಾಂತಿ, ಅರಾಜಕತೆಯನ್ನು ಸೃಷ್ಟಿಸಲು ಕ್ರಿಯಾಶೀಲವಾಗಿರುವ ಸಂಘಟನೆಯನ್ನು ನಿಷೇಧಿಸುವ ಸಚಿವ ಪ್ರಿಯಾಂಕ ಖರ್ಗೆ ಅವರ ಪ್ರಸ್ತಾಪ ಸರಿಯಾಗಿದೆ. ಅವರ ವಿರುದ್ಧವೇ ಕೆಲವು ಕಿಡಿಗಿಡಿಗಳು ಕರೆ ಮಾಡಿ, ಕೊಲೆ ಬೆದರಿಕೆ ಹಾಕುತ್ತಿರುವುದು ನಿಜಕ್ಕೂ ಖಂಡನೀಯ ಎಂದರು.

ಮೂರುವರೆ ದಶಕದ ಒಳ ಮೀಸಲಾತಿ ಹೋರಾಟದ ಅವಧಿಯಲ್ಲಿ ಮಾದಿಗ ಸಮಾಜದವರೇ ಸಚಿವರಾಗಿದ್ದರೂ ಮಾಡಲಾಗದ ಒಳ ಮೀಸಲಾತಿಯನ್ನು, ಸಮಾಜ ಕಲ್ಯಾಣ ಸಚಿವರಾಗಿ ಮಹದೇವಪ್ಪ ಅವರು ಮಾಡಿದ್ದಾರೆ. ಅಂತಹವರ ವಿರುದ್ಧವೇ ಹೋರಾಟದ ನೆಪದಲ್ಲಿ ಭಾಸ್ಕರ್ ಪ್ರಸಾದ್ ಎಂಬಾತ ಹಗುರವಾಗಿ ಮಾತನಾಡುತ್ತಿರುವುದು ಸರಿಯಲ್ಲ. ಇಂತಹ ವರ್ತನೆಯನ್ನು ಆತ ಸರಿಪಡಿಸಿಕೊಳ್ಳಬೇಕು. ಇಲ್ಲದಿದ್ದರೆ



ಸಚಿವ ಪ್ರಿಯಾಂಕ್ ಖರ್ಗೆಗೆ ಬೆದರಿಕೆ ಖಂಡಿಸಿ ಪ್ರತಿಭಟನೆ ನಡೆಸುತ್ತಿರುವುದು.

ಸಚಿವರಿಬ್ಬರಿಗೆ ಕೊಲೆ ಬೆದರಿಕೆ ಹಾಕಿ, ಸಾರ್ವಜನಿಕವಾಗಿ ನಿಂದಿಸುತ್ತಿರುವ ಕಿಡಿಗೇಡಿಗಳನ್ನು ಸರ್ಕಾರ ಕಾನೂನು ಕ್ರಮದ ಮೂಲಕವೇ ಶಿಕ್ಷೆಯನ್ನೂ ನೀಡಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ನಂತರ ಶೀರಸ್ತೇದಾರ್ ಮಂಜುಳಾ ಅವರಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ತುಂಬಲ ಅಂದಾನಿ, ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಘಟನಾ ಸಂಚಾಲಕ ಅಲತ್ತೂರು ಶಿವರಾಜ್, ಅಶೋಕ್ ಕೆ.ಎಂ.ವಾಡಿ, ಚಂದ್ರ ಅಶೋಕಪುರಂ, ಸಿಂಚನ ಕೆ.ಆರ್.ನಗರ, ತಾಲೂಕು ಸಂಚಾಲಕ ಕೇತುಪುರ ಶಿವಪ್ರಕಾಶ್, ನಗುವನಹಳ್ಳಿ ಪಂಚಾಯಿತಿ ಮಾಜಿ ಅಧ್ಯಕ್ಷೆ ಕೆ.ಪಲ್ಲವಿ, ಗರ್ಗೇಶ್ವರಿ ಗ್ರಾಮ ಪಂಚಾಯಿತಿ ಸದಸ್ಯ ಯಡದೊರೆ ಸಿದ್ದರಾಜು, ದಲಿತ ಕಲಾವಿದರ ಸಂಘದ ಉಪಾಧ್ಯಕ್ಷರಾದ ತುಂಬಲ ಶಿವಣ್ಣ, ಪ್ರಧಾನ ಕಾರ್ಯದರ್ಶಿ ಸಿ.ಬಿ.ಹುಂಡಿ ನಾಗೇಶ್, ತಾಲೂಕು ಸಂಘಟನಾ ಸಂಚಾಲಕರಾದ ಕೇತುಪುರ ರವೀಂದ್ರ, ಶಿವನಂಜು, ಗೌರಮ್ಮ, ಶಶಿಕಲಾ, ಚಂದ್ರಕಲಾ, ಬೇವಿನಹಳ್ಳಿ ಲತಾ, ಹೇಮಾ, ಸುಜ್ಜಲೂರು ಮಹದೇವ, ತೊಟ್ಟವಾಡಿ ಮಹದೇವ ಹಾಗೂ ಇತರರು ಇದ್ದರು.

---

43 ಕೋಟಿ ರೂ. ವೆಚ್ಚದಲ್ಲಿ ನಾಲೆ ಆಧುನೀಕರಣ

ಕೆ.ಆರ್.ನಗರ: ರಾಮ ಸಮುದ್ರ ಬಲದಂಡೆ ನಾಲೆಯ ಕೊನೆ ಹಂತದವರೆಗಿನ ಹದಿನೈದು ಗ್ರಾಮಗಳ ನೀರಾವರಿ ಅಚ್ಚುಕಟ್ಟು ಪ್ರದೇಶದಲ್ಲಿ ರೈತರು ಭತ್ತ ಬೆಳೆಯಲು ನಾಲೆಯ ನೀರು ಸರಾಗವಾಗಿ ಹರಿಯಲು ಸುಮಾರು 43 ಕೋಟಿ ವೆಚ್ಚದಲ್ಲಿ ನಾಲಾ ಆಧುನೀಕರಣ ಕಾಮಗಾರಿಗೆ ಕೈಗೊಳ್ಳಲಾಗಿದೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ತಾಲೂಕಿನ ಸಾತಿಗ್ರಾಮ, ಕಾಮೇನಹಳ್ಳಿ, ಬೋರೆ ಕಲ್ಲಹಳ್ಳಿ, ಸೌತನಹಳ್ಳಿ ಗ್ರಾಮಗಳಲ್ಲಿ ಒಂದು ಕೋಟಿ ವೆಚ್ಚದಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ, ಚರಂಡಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದರು.

ಸಾತಿಗ್ರಾಮ, ಸೌತನಹಳ್ಳಿ, ಹೊಸೂರು ಕಲ್ಲಹಳ್ಳಿ, ಬೋರೆ ಕಲ್ಲಹಳ್ಳಿ, ಕಾಮೇನಹಳ್ಳಿ, ಚಾಮಲಪುರ, ತಿಪ್ಪೂರು, ದೆಗ್ಗನಹಳ್ಳಿ ಕನುಗನಹಳ್ಳಿ ಗ್ರಾಮಗಳಿಗೆ ನಾಲೆಯ ನೀರು ಸರಾಗವಾಗಿ ಹರಿಯದ ಕಾರಣದಿಂದ ನಾಲೆಗೆ



ಕಾಮಗಾರಿಗೆ ಶಾಸಕ ಡಿ.ರವಿಶಂಕರ್ ಗುದ್ದಲಿ ಪೂಜೆ ನೆರವೇರಿಸಿದರು.

ಆಧುನೀಕರಣದ ಕಾಮಗಾರಿ ಕೈಗೊಳ್ಳಲಾಗಿದ್ದು ಮುಂದಿನ ವರ್ಷದಿಂದ ಕೊನೆಹಂತದವರೆಗೆ ನೀರು ಸರಾಗವಾಗಿ ಹರಿಯಲಿದೆ. ಇದಕ್ಕಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹಣ ಬಿಡುಗಡೆ ಮಾಡಿದ್ದು ಟೆಂಡರ್ ಪ್ರಕ್ರಿಯೆ ಮುಗಿದಿದ್ದು ಡಿಸೆಂಬರ್‌ನಿಂದ ಕಾಮಗಾರಿಗೆ ಆರಂಭವಾಗಲಿದೆ ಎಂದು ತಿಳಿಸಿದರು.

ಮೊದಲನೇ ವರ್ಷ ಸರ್ಕಾರ ಅನುದಾನ ಕೊಟ್ಟಿರಲಿಲ್ಲ, ಎರಡನೇ ವರ್ಷದಲ್ಲಿ ಹಂತಹಂತವಾಗಿ ಅನುದಾನ ಕೊಡಲಾಗುತ್ತಿದೆ. ಕಾರಣ ಇಷ್ಟೆ, ಸರ್ಕಾರ ಐದು ಗ್ಯಾರಂಟಿಗಳ ಮೂಲಕವಾಗಿ ನೇರವಾಗಿ ಪ್ರತಿ ಮನೆಗೂ ತಲುಪುತ್ತಿದ್ದು ಆದ್ದರಿಂದ ಅನುದಾನ ಕೊರತೆಯಾಗಿತ್ತು ಎಂದು ತಿಳಿಸಿದರು.

25 ಲಕ್ಷ ವೆಚ್ಚದಲ್ಲಿ ಸಾತಿಗ್ರಾಮದ ಶನೇಶ್ವರ ಬೀದಿಯಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ ಚರಂಡಿ ಅಭಿವೃದ್ಧಿ ಕಾಮಗಾರಿ, ಎಸ್‌ಇಪಿ ಹಾಗೂ ಟಿಎಸ್‌ಪಿ ಯೋಜನೆ ಮೂಲಕ 50 ಲಕ್ಷ ಅನುದಾನ ನೀಡಲಾಗುತ್ತದೆ ಎಂದರು.

ತಲಕಾಡಲ್ಲಿ ಕಾವೇರಿ ಆರತಿ...





ಬಾಲಕೃಷ್ಣಾನಂದ ಮಹಾಸಂಸ್ಥಾನದ ವತಿಯಿಂದ ಶನಿವಾರ ತಲಕಾಡಿನಲ್ಲಿ ನಡೆದ ಕಾವೇರಿ ಆರತಿಯಲ್ಲಿ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್ ಶ್ರೀವತ್ಸ ಭಾಗವಹಿಸಿ ಶ್ರೀ ಶ್ರೀ ಗೋವಿಂದಾನಂದ ಸರಸ್ವತಿ ಮಹಾಸ್ವಾಮಿಗಳಿಂದ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಶ್ರೀ ಮಠದ ಸುಹಾಸ್ ಶಾಸ್ತ್ರೀ, ವಾದ್ಯಾರ್ ವೇಣು, ಅಗಸ್ತ್ಯ ಸೊಸೈಟಿ ನಿರ್ದೇಶಕರಾದ ಎಚ್.ಪಿ.ಚೇತನ್, ಸುಧೀಂದ್ರ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಜಂಟಿ ಕಾರ್ಯದರ್ಶಿ ಟಿ.ಎಸ್ ಅರುಣ್ ಉಪಸ್ಥಿತರಿದ್ದರು.

ಸ್ವಸ್ಥ ನಾರಿ ಸಶಕ್ತ ಪರಿವಾರ ಕಾರ್ಯಕ್ರಮ

ತಿ.ನರಸೀಪುರ, ಅ.18– ತಿ.ನರಸೀಪುರ ಪುರಸಭೆ ಪಟ್ಟಣದ ಸಭಾಂಗಣದಲ್ಲಿ ಸ್ವಸ್ಥ ನಾರಿ ಸಶಕ್ತ ಪರಿವಾರ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಪುರಸಭೆ ಸ್ಥಾಯಿ ಸಮಿತಿ ಸದಸ್ಯ ತುಂಬಲ ಪ್ರಕಾಶ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಹಿಳೆಯರಿಗೆ ಸರ್ಕಾರ ಹಲವಾರು ಯೋಜನೆ ಜಾರಿಗೆ ತಂದಿದ್ದು, ಯೋಜನೆಗೆ ಫಲಾನುಭವಿ ನೋಂದಣಿ ಆಗಿ ಕುಟುಂಬದ ಮುಖ್ಯ ನಿರ್ವಹಣೆ ಹೊಣೆ ಆವರ ಮೇಲೆ ಇರುತ್ತದೆ. ಮಕ್ಕಳ ಆರೋಗ್ಯ, ಮಕ್ಕಳ ಏಳಿಗೆ ಹಾಗೂ ವೃದ್ಧರ ಆರೈಕೆ ಕುಟುಂಬ ಗುರುತರ ಜವಾಬ್ದಾರಿ ಮೂಲಕ ಸಶಕ್ತ ಪರಿವಾರಕ್ಕೆ ನಾಂದಿ ಎಂದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಗೋವಿಂದರಾಜು ಮಾತನಾಡಿ, ರಾಷ್ಟ್ರೀಯ ಪೋಷಣಾ ಮಾಸಾಚರಣೆ ಕಾರ್ಯಕ್ರಮದ ನಿಮಿತ್ತ ಸ್ವಸ್ಥ ನಾರಿ ಸಶಕ್ತ ಪರಿವಾರ ಕಾರ್ಯಕ್ರಮ ನಮ್ಮಗಳ ಜವಾಬ್ದಾರಿಯ ಅರಿವನ್ನು ತೋರಿಸುತ್ತದೆ. ಸರ್ಕಾರ ಹಲವಾರು ಯೋಜನೆ ಜಾರಿಗೆ ತಂದಿದ್ದು, ಗೃಹಲಕ್ಷ್ಮೀ, ಗೃಹಜ್ಯೋತಿ, ಸುಕನ್ಯಾ ಸಮೃದ್ಧಿ, ಮಾತೃ ವಂದನಾ, ಶಕ್ತಿ ಯೋಜನೆ, ಉದ್ಯೋಗಿನಿ, ಬೀದಿಬದಿ ವ್ಯಾಪಾರಸ್ಥರ ಪ್ರೋತ್ಸಾಹ ಧನ ಸಹಾಯದ ಮೂಲಕ ಮಹಿಳೆ ಅಭಿವೃದ್ಧಿಗೆ ಸ್ವಂತ ಉದ್ಯೋಗಿಗಳಾಗಿ ಆದಾಯ ಚಟುವಟಿಕೆಯಲ್ಲಿ ತೊಡಗುವ ಮೂಲಕ ಕುಟುಂಬ ಸಬಲೀಕರಣಕ್ಕೆ ಕಾರಣವಾಗುತ್ತದೆ ಎಂದರು.

ಹುಣಸೂರು ನಗರಸಭೆಯಲ್ಲಿ ಸದ್ದು ಮಾಡಿದ ಆಸ್ಪತ್ರೆ ಕಟ್ಟಡದ ವರದಿ

ಹುಣಸೂರು, ಅ.18–ಹುಣಸೂರಿನ ಕಾವೇರಿ ಹಾರ್ಟ್ ಅಂಡ್ ಮಲ್ಟಿ ಸ್ಪೆಷಾಲಿಟಿ ಅಸ್ಪತ್ರೆ ಕಟ್ಟಡದ ಬಗ್ಗೆ ಸಿದ್ಧಪಡಿಸಲಾದ ವರದಿ ನಗರಸಭೆಯ ವಿಶೇಷ ಸಭೆಯಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ನಡುವಿನ ವಾಕ್ಸಮರಕ್ಕೆ ಸಾಕ್ಷಿಯಾಯಿತು.

ನಗರಸಭಾ ಅಧ್ಯಕ್ಷ ಮಾಲಿಕ್ ಪಾಷ ಅವರ ಅಧ್ಯಕ್ಷತೆಯಲ್ಲಿ ಇಂದು ಕರೆಯಲಾಗಿದ್ದ ವಿಶೇಷ ಸಭೆಯಲ್ಲಿ ಶಾಸಕ ಜಿ.ಡಿ ಹರೀಶ್ ಗೌಡರ ಎದುರಿನಲ್ಲೇ ವಿರೋದ ಪಕ್ಷದವರು ವರದಿ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಭಾರಿ ಕೂಗಾಟ ಮಾಡಿ, ಇದು ನ್ಯಾಯಯುತವಾದ ವರದಿಯಲ್ಲ. ಅಕ್ರಮಕ್ಕೆ ಬೆಂಬಲಿಸಿದ ವರದಿಯಾಗಿದೆ. ಏಕ ಪಕ್ಷೀಯ ವರದಿಯಾಗಿದ್ದು ನಾವು ಇದನ್ನು ಒಪ್ಪುವುದಿಲ್ಲ ಎಂದು ಕೂಗಾಡಿದರು.

ಕಾವೇರಿ ಹಾರ್ಟ್ ಅಂಡ್ ಮಲ್ಟಿ ಸ್ಪೆಷಾಲಿಟಿ ಅಸ್ಪತ್ರೆ ಅಕ್ರಮ ಕಟ್ಟಡದ ಬಗ್ಗೆ ಸಾಕಷ್ಟು ವಿರೋಧವಿದ್ದು ಅದನ್ನು ತೆರವು ಗೊಳಿಸಲು ನ್ಯಾಯಾಲಯದ ಅದೇಶವಿದೆ. ಅದರಂತೆ ನಗರಸಭೆ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯಾಚರಣೆಗೆ ತೆರಳಿದ ಸಂದರ್ಭದಲ್ಲಿ ಎರಡು ಗುಂಪುಗಳ ನಡುವೆ



ಹುಣಸೂರಿನಲ್ಲಿ ನಡೆದ ನಗರಸಭೆಯ ವಿಶೇಷ ಸಭೆ.

ವಾದ ವಿವಾದಗಳಾಗಿ ತೆರವು ಕಾರ್ಯಾಚರಣೆಗೆ ತಡೆಯಾಜ್ಞೆ ತರಲಾಯಿತು. ಇದರಿಂದ ವಾಪಸ್ ಅದ ಅಧಿಕಾರಿಗಳು ಕಟ್ಟಡದ ನಿರ್ಮಾಣದ ಬಗ್ಗೆ ಹಾಗೂ ಒತ್ತುವರಿ ಅಗಿರುವ ಬಗ್ಗೆ ಅ ದಿನವೇ ಸಭೆ ನಡೆಸಿ ನಗರಸಭೆಯಿಂದ 1964 ಕಾಲಂ 343 ಅಡಿಯಲ್ಲಿ ಕೌನ್ಸಿಲ್ ಸಭೆ ನಡೆಸಿ ಏಕ ಸದಸ್ಯ ಮೇಲ್ಮನವಿ ಪ್ರಾಧಿಕಾರ ಸಮಿತಿ ಯನ್ನು ರಚಿಸಿ ವರದಿ ನೀಡಲು ಸೂಚಿಸಲಾಗಿತ್ತು.

ಅದರಂತೆ ಸಮಿತಿ ಸದಸ್ಯ ಹೆಚ್.ಪಿ.ಸತೀಶ್ ಕುಮಾರ್ ಕಟ್ಟಡದ ನಿರ್ಮಾಣ ಮತ್ತು ಒತ್ತುವರಿ ಬಗ್ಗೆ ಪರಿಶೀಲನೆ ಮಾಡಿ ವರದಿಯನ್ನು ತಯಾರಿಸಿ ಇಂದು ನಡೆದ ಸಾಮಾನ್ಯ ಸಭೆ ಮಂಡಿಸಿದಾಗ ವರದಿ ಬಗ್ಗೆ ಆಡಳಿತ ಪಕ್ಷಗಳು ಪರವಾಗಿದ್ದರೂ, ವಿರೋಧ ಪಕ್ಷಗಳು ವಿರೋಧವಾಗಿ ಆಕ್ಷೇಪ ವ್ಯಕ್ತಪಡಿಸಿ ಕೂಗಾಡಿದರು. ನಂತರ ಶಾಸಕರು ಮದ್ಯ ಪ್ರವೇಶಿಸಿ ವರದಿಯ ಸಲ್ಲಿಕೆ ಬಗ್ಗೆ ಮತ್ತು ನಿರ್ಣಯದ ಬಗ್ಗೆ ಎಲ್ಲ ಸದಸ್ಯರು ಮತ ಚಲಾವಣೆ ಹಾಕಿ ನಿರ್ಣಯ ತೆಗೆದುಕೊಳ್ಳಿ ಎಂದು ಹೇಳಿದಾಗ ನಾವು ಯಾವುದೇ ತೀರ್ಮಾನ ಹೇಳಬೇಕಾದರೆ ನಮಗೆ ಕಾಲಾವಕಾಶ ಬೇಕು. ಈ ಕಾರಣದಿಂದ ಮುಂದಿನ ಸಭೆಗೆ ಈ ವಿಷಯವನ್ನು ತನ್ನಿ, ಈ ಸಭೆಯಲ್ಲಿ ಬೇಡ ಎಂದರು.

ಅದರೂ ಅಡಳಿತಾರೂಢ 15ಕ್ಕೂ ಹೆಚ್ಚು ಸದಸ್ಯರು ಸಾರ್ವಜನಿಕರಿಗೆ ಅರೋಗ್ಯ ಸೇವೆ ನೀಡುವ ಅಸ್ಪತ್ರೆಯಾಗಿರುವ ಕಾರಣ ಇದರಲ್ಲಿ ರಾಜಕೀಯ ತರಬೇಡಿ, ಕ್ಷಮದಾನ ನೀಡಿ, ಅವಕಾಶ ಮಾಡಿಕೊಡಿ. ಇದಕ್ಕೆ ನಮ್ಮ ಸಮ್ಮತಿ ಇದೆ ಎಂದು ವರದಿಗೆ ಒಪ್ಪಿಗೆ ಸೂಚಿಸಿ ಕೈ ಎತ್ತಿ ವಿರೋಧ ಪಕ್ಷದವರು ವಿರೋಧ ವ್ಯಕ್ತಪಡಿಸಿ ಕೈ ಎತ್ತಿದರು.

ಅಲ್ಲದೆ ಹಿಂದೆ ಈ ಅಸ್ಪತ್ರೆಯ ಕಟ್ಟಡದ ಪರವಾನಿಗೆ ಮತ್ತು ಕಟ್ಟಡ ಕಟ್ಟಲು ಬೆಂಬಲವಾಗಿ ನಿಂತಿದ್ದವರೇ ಇಂದು ವಿರೋಧ ಮಾಡುತ್ತಿದ್ದಾರೆ. ಇದು ಕೌನ್ಸಿಲ್ ಸಭೆಗೆ ಮಾತ್ರವಲ್ಲ. ಇಡಿ ನಗರದ ಜನತೆಗೆ ತಿಳಿದ ವಿಚಾರವಾಗಿದೆ. ಅದರೂ ಸಾರ್ವಜನಿಕರಿಗೆ ಅರೋಗ್ಯ ಸೇವೆ ನೀಡುವ ಅಸ್ಪತ್ರೆಗೆ ವಿನಃ ಕಾರಣ ತೊಂದರೆ ನೀಡುವುದು ಸರಿಯಲ್ಲ. ತಪ್ಪುಗಳನ್ನು ಕಾನೂನು ಚೌಕಟ್ಟಿನಲ್ಲಿ ಸರಿಪಡಿಸಿಕೊಂಡು ಒಳ್ಳೆಯ ರೀತಿಯಲ್ಲಿ ಮುಂದೆ ಸಾಗುವುದು ಒಳ್ಳೆಯದು ಎಂದು ಆಡಳಿತ ಪಕ್ಷದ ಸದಸ್ಯರು ಹೇಳಿದರು.

ಸಭೆಯಲ್ಲಿ ಪೌರಾಯುಕ್ತೆ ಮಾನಸ, ಉಪಾಧ್ಯಕ್ಷೆ ಆಶಾ ಕೃಷ್ಣನಾಯಕ್, ಸ್ಥಾಯಿ ಸಮಿತಿ ಅಧ್ಯಕ್ಷ ಹರೀಶ್, ಎಲ್ಲ ಸದಸ್ಯರು ಮತ್ತು ಅಧಿಕಾರಿ ಸಿಬ್ಬಂದಿಗಳು ಭಾಗವಹಿಸಿದ್ದರು.

ಹಳೆ ನರಿಪುರ ಬಳಿ ವೇಗದೂತ ಬಸ್ಸುಗಳ ನಿಲುಗಡೆ

ನಿಲುಗಡೆ ಸೂಚನಾ ಫಲಕ ಅಳವಡಿಕೆ

ತಿ.ನರಸೀಪುರ, ಅ.18– ತಿ.ನರಸೀಪುರದಿಂದ ಪುರಿಗಾಲಿ ಮಾರ್ಗವಾಗಿ ಬೆಂಗಳೂರಿಗೆ ಸಂಚರಿಸುವ ಎಲ್ಲಾ ಕೆಎಸ್‌ಆರ್‌ಟಿಸಿ ವೇಗದೂತ ಬಸ್ಸುಗಳು ಹಳೇ ನರಿಪುರ ಗ್ರಾಮದಲ್ಲಿ ನಿಲುಗಡೆಯಾಗಲಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಬಿ.ಮಹದೇವ ಪ್ರಭು ತಿಳಿಸಿದರು.

ತಿ.ನರಸೀಪುರದಿಂದ ಪುರಿಗಾಲಿ ಮಾರ್ಗ ಬೆಂಗಳೂರಿಗೆ ಹೋಗುವ ಎಲ್ಲಾ ವೇಗದೂತ ವಾಹನಗಳನ್ನು ಹಳೇ ನರಿಪುರ ಗ್ರಾಮದಲ್ಲಿ ನಿಲುಗಡೆ ಮಾಡುವ ಸಲುವಾಗಿ ನಿಲುಗಡೆ ಸೂಚನಾ ನಾಮಫಲಕವನ್ನು ಅಳವಡಿಸಿ ಅವರು ಮಾತನಾಡಿದರು. ಇದುವರೆಗೂ ಈ ಮಾರ್ಗವಾಗಿ ಸಂಚರಿಸುತ್ತಿದ್ದ ವೇಗದೂತ ಬಸ್ಸುಗಳು ಹಳೇ ನರಿಪುರ ಗ್ರಾಮದಲ್ಲಿ ನಿಲ್ಲಿಸುತ್ತಿರಲಿಲ್ಲ. ಇದರಿಂದ ಬೆಂಗಳೂರಿಗೆ ತೆರಳುವ ಪ್ರಯಾಣಿಕರಿಗೆ ತೊಂದರೆಯಾಗುತ್ತಿತ್ತು. ಇದನ್ನು ಅರಿತ ತಾವು ಸರ್ಕಾರದ ಮಟ್ಟದಲ್ಲಿ ವ್ಯವಹರಿಸಿ ಇನ್ನು ಮುಂದೆ ಈ ಮಾರ್ಗವಾಗಿ ಸಂಚರಿಸುವ ಎಲ್ಲಾ ವೇಗದೂತ ಬಸ್ಸುಗಳು ಹಳೇ ನರಿಪುರ ಗ್ರಾಮದಲ್ಲಿ ನಿಲುಗಡೆ ಮಾಡುವಂತೆ ಸೂಚಿಸಲಾಗಿದೆ. ಇನ್ನು ಮುಂದೆ ಇಲ್ಲಿ ಬಸ್ಸುಗಳು ನಿಲುಗಡೆ ಮಾಡಲಿವೆ ಎಂದು ವಿವರಿಸಿದರು.



ಬಸ್ ನಿಲುಗಡೆಯ ಸೂಚನಾ ಫಲಕ ಅಳವಡಿಸುತ್ತಿರುವುದು.

ಸರ್ಕಾರ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಅವಕಾಶ ಕಲ್ಪಿಸಿದ್ದು, ಅದನ್ನು ಸದುಪಯೋಗಪಡೆದುಕೊಳ್ಳಬೇಕು. ಗೃಹಲಕ್ಷ್ಮಿ, ಅನ್ನಭಾಗ್ಯ ಸೇರಿದಂತೆ ಸರ್ಕಾರದ ಎಲ್ಲಾ ಗ್ಯಾರಂಟಿ ಯೋಜನೆಗಳು ತಾಲೂಕಿನ ಎಲ್ಲಾ ಅರ್ಹ ಫಲಾನುಭವಿಗಳಿಗೆ ತಲುಪುತ್ತಿದ್ದು, ಯಾರಿಗಾದರೂ ಸರಿಯಾಗಿ ಸೌಲಭ್ಯಗಳು ತಲುಪದಿದ್ದರೆ ತಮ್ಮನ್ನು ಸಂಪರ್ಕಿಸುವಂತೆ ಅವರು ಇದೇ ವೇಳೆ ಮನವಿ ಮಾಡಿದರು.

ಕೆಪಿಸಿಸಿ ಸದಸ್ಯ ದೊಡ್ಡಬಾಗಿಲು ಮಲ್ಲಿಕಾರ್ಜುನ, ಇರ್ಷದ್ ಅಲಿ, ಪರ್ಷದ್ ಪಾಷಾ, ಸಲೀಂ, ಅಭಿ ಹಾಗೂ ಇತರೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರುಗಳು ಬಸ್ ಡಿಪೋ ಮ್ಯಾನೇಜರ್ ಮತ್ತು ಸಿಬ್ಬಂದಿ ವರ್ಗದ ವರು ಹಾಗೂ ಸ್ಥಳೀಯ ಕಾಂಗ್ರೆಸ್ ಮುಖಂಡರುಗಳು, ಯಜಮಾನರುಗಳು, ಗ್ರಾಮಸ್ಥರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ನಾಳೆ ದೀಪಾವಳಿ, ಶ್ರೀಮದ್ದಯಾನಂದ ನಿರ್ವಾಣ ದಿನ

ಮೈಸೂರು, ಅ.18–ಮೈಸೂರಿನ ದೇವರಾಜ ಮೊಹಲ್ಲಾದ ಕರ್ನಾಟಕ ರಾಜ್ಯ ಆರ್ಯ ಪ್ರತಿನಿಧಿ ಸಭಾದಲ್ಲಿ ಅ.20 ರಂದು ಸಂಜೆ 5 ಗಂಟೆಗೆ ಮಹರ್ಷಿ ದಯಾನಂದ ಸರಸ್ವತಿ ಅವರ ನಿರ್ವಾಣ ದಿನದಂದು ವಿಶೇಷ ಹವನವನ್ನು ಏರ್ಪಡಿಸಲಾಗಿದೆ. ಶಾರದೀಯ ನವ ಸಸ್ಯೇಷ್ಟಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಆರ್ಯ ಪ್ರತಿನಿಧಿ ಸಭಾ(ರಿ.) ತನ್ನ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಮನುವಾದಿಗಳ ಬಗ್ಗೆ ಸದಾ ಎಚ್ಚರಿಕೆಯಿಂದ ಇರಿ

• ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ • ಅಂಬೇಡ್ಕರ್ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ • ಜಾತಿ ವ್ಯವಸ್ಥೆ ಇರುವ ತನಕ ಮೀಸಲಾತಿ ಅತ್ಯಗತ್ಯ

ಮೈಸೂರು, ಅ.18(ಬಿಎಲ್‌ಯು)– ಬಾಬಾ ಸಾಹೇಬ್ ಅಂಬೇಡ್ಕರ್ ನೀಡಿರುವ ಸಂವಿಧಾನದ ವಿರುದ್ಧ ಸನಾತನ ಧರ್ಮಿಗಳು ಸೇರಿದಂತೆ ಮನುವಾದಿಗಳು ತೀವ್ರ ವಿರೋಧ ಮಾಡುತ್ತಿದ್ದು, ಈ ಬಗ್ಗೆ ನೀವು ಎಚ್ಚರಿಕೆಯಿಂದ ಇರಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿಯ ವಿಶ್ವಜ್ಞಾನಿ ಸಭಾಂಗಣದಲ್ಲಿ ಇಂದು ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ರಜತ ಮಹೋತ್ಸವ ಹಾಗೂ ನೂತನ ಜ್ಞಾನದರ್ಶನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ಸಂವಿಧಾನ ವಿರೋಧಿಸುತ್ತಿರುವ ಇವರ ನಡೆ ಬಗ್ಗೆ ಜನರಿಗೆ ಜಾಗೃತಿ ಮೂಡಿಸಬೇಕು ಎಂದು ಕಿವಿಮಾತು ಹೇಳಿದರು.

ಕೆಲವರು ಅಂಬೇಡ್ಕರ್ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ. ಈ ವಿಚಾರ ಜನರಿಗೆ ಅರಿವಿರಬೇಕು. ಇಲ್ಲದಿದ್ದರೆ ಅವರ ಮಾತೆ ಸತ್ಯ ಎಂದು ಜನರು ನಂಬಿ ಬಿಡುತ್ತಾರೆ.

ಲೋಕಸಭಾ ಚುನಾವಣೆಯಲ್ಲಿ ಅಂಬೇಡ್ಕರ್ ಸೋಲಿಸಿದ್ದು ಕಾಂಗ್ರೆಸಿಗರು ಎಂದು ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಆದರೆ ತಮ್ಮ ಸೋಲಿಗೆ ಸಾರ್ವಕರ್ ಹಾಗೂ ಕಮ್ಯೂನಿಸ್ಟರು ಕಾರಣ ಎಂದು ಸ್ವತಃ ಅಂಬೇಡ್ಕರ್ ಅವರೆ ತಮ್ಮ ಸೇಹಿತರೊಬ್ಬರಿಗೆ ಪತ್ರ ಬರೆದಿದ್ದರು. ಆದರೆ ಮನುವಾದಿಗಳು ಈ ವಿಚಾರವನ್ನು ಮರೆಮಾಚುತ್ತಿದ್ದಾರೆ.

ಶ್ರೇಷ್ಠ ಸಂವಿಧಾನ: ಅಂಬೇಡ್ಕರ್ ಒಬ್ಬರೇ ಸಂವಿಧಾನ ಬರೆದಿಲ್ಲ ಎಂದು ವಾದ ಮಾಡುತ್ತಿದ್ದಾರೆ. ಅಲ್ಲದೆ ಅಂಬೇಡ್ಕರ್ ಬರೆದಂತೆ ಹತ್ತು ವರ್ಷಕ್ಕೆ ಮಾತ್ರ ಮೀಸಲಾತಿ ಅವಧಿ ಇತ್ತು ಎಂದು ಹೇಳುತ್ತಿದ್ದಾರೆ. ಆದರೆ ವಿಶ್ವದ ಎಲ್ಲಾ ದೇಶಗಳ ಸಂವಿಧಾನದ ಬಗ್ಗೆ ಅಧ್ಯಯನ ಮಾಡಿ, ಇಲ್ಲಿನ ಸಮಾಜ ಮತ್ತು ಜನ ಜೀವನಕ್ಕೆ ತಕ್ಕಂತೆ ಅಂಬೇಡ್ಕರ್ ಶ್ರೇಷ್ಠ ಸಂವಿಧಾನ ರಚನೆ ಮಾಡಿದ್ದಾರೆ. ಎಲ್ಲಿವರೆಗೆ ಜಾತಿ ವ್ಯವಸ್ಥೆ ಹಾಗೂ ಅಸಮಾನತೆ ಇರುತ್ತದೆಯೊ ಅಲ್ಲಿವರೆಗೆ ಮೀಸಲಾತಿ ಇರಬೇಕೆಂದು ಸ್ವತಃ ಅಂಬೇಡ್ಕರ್ ಅವರೆ ಬರೆದಿದ್ದಾರೆ ಎಂದು ಸಿದ್ದರಾಮಯ್ಯ ಸಂವಿಧಾನ ವಿರೋಧಿಗಳಿಗೆ ತಿರುಗೇಟು ನೀಡಿದರು.

ಅಂಬೇಡ್ಕರ್, ವಿಶ್ವದ ಮೇಧಾವಿಗಳಲ್ಲಿ ಒಬ್ಬರು. ವೈಜ್ಞಾನಿಕ ಮತ್ತು ವೈಚಾರಿಕತೆಯನ್ನು ಅರ್ಥ ಮಾಡಿಕೊಂಡ ಶ್ರೇಷ್ಠ ಜ್ಞಾನಿಯಾಗಿದ್ದರು. ಅಸಮಾನತೆಯ ವಿರುದ್ಧ ಹೋರಾಟ ಮಾಡಿದ ಛಲಗಾರ ಎಂದು ಪ್ರಶಂಸಿಸಿದರು.

ವಿದ್ಯೆ ಯಾರಪ್ಪನ ಮನೆ ಸ್ವತ್ತಲ್ಲ ಎಂದು ಪ್ರತಿಪಾದಿಸಿದ ಸಿದ್ದರಾಮಯ್ಯ ಅವರು, ಪ್ರತಿಯೊಬ್ಬರಿಗೂ ಅವಕಾಶ ಸಿಗಬೇಕು. ಅವಕಾಶ ಸಿಕ್ಕರೆ ಜ್ಞಾನಿ ಹಾಗೂ ವಿದ್ವಾಂಸರಾಗುತ್ತಾರೆ. ಆದರೆ, ಅಂಬೇಡ್ಕರ್ ತಮ್ಮ ವಿದ್ವತ್ತು ಮತ್ತು ಪ್ರತಿಭೆಯಿಂದ ಅವಕಾಶವನ್ನು ಪಡೆದುಕೊಂಡು ತಮ್ಮ ಇಡೀ ಜೀವನವನ್ನು ಸಮಾಜದ ಶ್ರೇಯೋಭಿವೃದ್ಧಿಗೆ ಮುಡಿಪಾಗಿಟ್ಟರು ಎಂದರು.

ಅಂಬೇಡ್ಕರ್ ಅವರಿಗೆ ಅಂಬೇಡ್ಕರ್ ಅವರೆ ಸರಿಸಾಟಿ. ಮತ್ತೊಬ್ಬ ಅಂಬೇಡ್ಕರ್ ಹುಟ್ಟಲು ಸಾಧ್ಯವೇ ಇಲ್ಲ. ಆದರೆ ನೀವೆಲ್ಲಾ ಅವರಂತೆ ಆಗದಿದ್ದರೂ ಅವರ ಹಾದಿಯಲ್ಲಿ ಸಾಗಿ ಸಮ ಸಮಾಜ ನಿರ್ಮಾಣ ಮಾಡಬೇಕು. ಆರ್ಥಿಕ, ರಾಜಕೀಯ, ಸಾಮಾಜಿಕ ಅಸಮಾನತೆ ದೂರ ಮಾಡಬೇಕು ಎಂದು ಸಲಹೆಯಿತ್ತರು.

ಇದೇ ವೇಳೆ ಮಾತನಾಡಿದ ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ಅವರು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಾಂವಿಧಾನಿಕ ಅಧ್ಯಯನ ಪೀಠ ಸ್ಥಾಪನೆಗೆ 10 ಕೋಟಿ ಹಾಗೂ ಕರ್ನಾಟಕದಲ್ಲಿ ಅಂಬೇಡ್ಕರ್ ಹೆಜ್ಜೆ ಗುರುತು ಸಾಕ್ಷ್ಯ ಚಿತ್ರಕ್ಕೆ 7 ಕೋಟಿ ನೀಡಿರುವ ಸಿಎಂ ಸಿದ್ದರಾಮಯ್ಯ ಅವರನ್ನು ಅಭಿನಂದಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ವಿಧಾನಪರಿಷತ್ ಸದಸ್ಯರಾದ ಡಾ.ತಿಮ್ಮಯ್ಯ, ಕೆ.ಶಿವಕುಮಾರ್, ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ದಿವಂಗತ ಮಾಜಿ ಸಂಸದ ಶ್ರೀನಿವಾಸ ಪ್ರಸಾದ್ ಪತ್ನಿ ಡಿ.ಭಾಗ್ಯಲಕ್ಷ್ಮಿ, ಹಿರಿಯ ಪ್ರಾಧ್ಯಾಪಕರಾದ ಡಾ.ಜೆ.ಸೋಮಶೇಖರ್, ಪ್ರೊ.ಎಸ್. ನರೇಂದ್ರ ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಮಾನಸ ಗಂಗೋತ್ರಿಯ ವಿಶ್ವಜ್ಞಾನಿ ಸಭಾಂಗಣದಲ್ಲಿ ಶನಿವಾರ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಮತ್ತು ವಿಸ್ತರಣಾ ಕೇಂದ್ರದ ರಜತ ಮಹೋತ್ಸವ ಹಾಗೂ ನೂತನ ಜ್ಞಾನದರ್ಶನ ಕಟ್ಟಡವನ್ನು ಉದ್ಘಾಟಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ಇವ ನಮ್ಮವ ಎನ್ನುತ್ತಾರೆ, ನಂತರ ನಿನ್ನ ಜಾತಿ ಯಾವುದೆಂದು ಕೇಳುತ್ತಾರೆ

ಇವನಾರವ, ಇವನಾರವ ನೆಂದೆಣಿಸದಿರಯ್ಯ, ಇವ ನಮ್ಮವ, ಇವ ನಮ್ಮವ, ನೆಂದೆಣಿಸಯ್ಯ ಕೂಡಲ ಸಂಗಮದೇವಾ ಎಂದು ತೋರ್ಪಡಿಕೆಗೆ ಹೇಳುವ ಕೆಲವರು ಕೊನೆಗೆ ನಿನ್ನ ಜಾತಿ ಯಾವುದು ಎಂದು ಕೇಳುತ್ತಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಕಳೆದ 800 ವರ್ಷಗಳ ಹಿಂದೆಯೇ ಬಸವಣ್ಣ ಸಮಾನತೆಯ ಸಮಾಜ ಬೋಧಿಸಿದ್ದರು. ಸ್ವಾತಂತ್ರ್ಯ ಬಂದು 75 ವರ್ಷಗಳಾಯಿತು. ಆದರೆ ಇನ್ನು ಕೂಡ ಜಾತೀಯತೆ ಬೇರು ಬಿಟ್ಟಿದೆ. ಚಲನೆ ಇಲ್ಲದ ಜಾತಿ ವ್ಯವಸ್ಥೆ ಜಢತ್ವದಿಂದ ಕೂಡಿದೆ. ಇದರಿಂದ ಜಾತೀಯತೆಯ ಶೂಲಕ್ಕೆ ಸಿಲುಕಿರುವವರು ಇನ್ನು ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ದಲಿತ ಸಮುದಾಯಕ್ಕೆ ಸೇರಿರುವ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶರ ಮೇಲೆ ಶೂ ಎಸೆದಿರುವುದು ಜಾತಿ ವ್ಯವಸ್ಥೆಯ ಗಟ್ಟಿತನವನ್ನು ತೋರಿಸುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು. ಮೇಲ್ಜಾತಿಯವರು ಎದುರು ಸಿಕ್ಕಾಗ ತಲೆಭಾಗಿ ನಮಸ್ಕರಿಸಿ ಗೌರವ ತೋರುತ್ತೀರಾ. ಆದರೆ ಕೆಳ ಸಮುದಾಯದ ದೊಡ್ಡ ಶ್ರೀಮಂತ, ವಿದ್ಯಾವಂತ ಸಿಕ್ಕಾಗ ಏಕ ವಚನದಲ್ಲಿ ಮಾತನಾಡುತ್ತೀರಾ. ಮೊದಲು ನಿಮ್ಮಲ್ಲಿರುವ ಈ ಮನೋಭಾವ ಬದಲಾಗಬೇಕು. ಇಲ್ಲವೆಂದರೆ ಗುಲಾಮಗಿರಿಯ ಕಪಿ ಮುಷ್ಟಿಯಲ್ಲಿ ಸಿಲುಕಿ ನಲುಗುತ್ತೀರಾ ಎಂದು ಸಿದ್ದರಾಮಯ್ಯ ಎಚ್ಚರಿಸಿದರು.

ಹೋರಾಟದ ಹಕ್ಕು ಸಿಕ್ಕಿರುವುದು ಸಂವಿಧಾನದಿಂದ

ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ದೇಶದ ಏಕತೆ ಮತ್ತು ಅಖಂಡತೆ ವಿಚಾರದಲ್ಲಿ ಜನರು ಸಿಡಿದೇಳಲು ಬಾಬಾ ಸಾಹೇಬ್ ಅಂಬೇಡ್ಕರ್ ಕೊಟ್ಟ ಸಂವಿಧಾನದ ಹಕ್ಕಿನಿಂದಲೇ ಹೊರತು ಪ್ರಧಾನಿ ನರೇಂದ್ರ ಮೋದಿ ಸರ್ಕಾರದಿಂದಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಪ್ರಾಯಪಟ್ಟರು.

ವಾಕ್ ಸ್ವಾತಂತ್ರ್ಯ ಹೋದರೆ ಪ್ರಜಾಪ್ರಭುತ್ವವೇ ಇರುವುದಿಲ್ಲ. ಇದನ್ನು ಅರಿತು ಅಂಬೇಡ್ಕರ್ ಅವರು ಸಂವಿಧಾನದಲ್ಲಿ ವಾಕ್ ಸ್ವಾತಂತ್ರ್ಯ ನೀಡಿದ್ದಾರೆ. ಈ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ತಳದಿಂದ ಮೇಲಿನವರೆಗೆ ಗಟ್ಟಿಗೊಳಿಸಿದ್ದಾರೆ ಎಂದರು.

ಆದರೆ ನರೇಂದ್ರ ಮೋದಿ ಸರ್ಕಾರದಲ್ಲಿ ಪ್ರಜಾಪ್ರಭುತ್ವದ ಪರಿಕಲ್ಪನೆ ದೂರವಾಗುತ್ತಿದೆ. ದೇಶದ ಅವ್ಯವಸ್ಥೆ ಬಗ್ಗೆ ನಾವೇನಾದರೂ ಮಾತನಾಡಿದರೆ ಕೆಲಸ ಹೋಗುತ್ತದೆ ಎಂದು ಭಯಭೀತರಾಗಿರುವ ಬಹಳಷ್ಟು ಜನರು ಮೌನವಾಗಿದ್ದಾರೆ. ಇದನ್ನು ಅಂದೇ ಮನಗಂಡಿದ್ದ ಅಂಬೇಡ್ಕರ್ ಅವರು ವ್ಯಕ್ತಿ ಪೂಜೆ ವಿರೋಧಿಸಿದ್ದರು ಎಂದು ಡಾ.ಮಹದೇವಪ್ಪ ಹೇಳಿದರು.

ಎಲ್ಲಾ ರೀತಿಯ ಗೋಜು, ಗೊಂದಲ ನಿವಾರಣೆ ಮಾಡಿ ಪ್ರಜಾ ಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿಗೊಳಿಸಬೇಕು ಎಂದು ಸಲಹೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯಕ್ಕೆ ದೊಡ್ಡ ಪರಂಪರೆ ಇದೆ, ಚಾರಿತ್ರಿಕ ಇತಿಹಾಸವಿದೆ. ಈ ವಿಶ್ವವಿದ್ಯಾನಿಲಯದ ಸ್ಥಾಪಕರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅಂದೇ ಪ್ರಜಾ ಪ್ರಭುತ್ವ ವ್ಯವಸ್ಥೆ ಜಾರಿಗೊಳಿಸಿ ಮೀಸಲಾತಿ ಸೌಲಭ್ಯ ನೀಡಿದ್ದರು ಎಂದು ಹೇಳಿದರು. ಮೊದಲ ರಾಷ್ಟ್ರಪತಿ ಸರ್ವಪಲ್ಲಿ ರಾಧಾಕೃಷ್ಣನ್, ರಾಷ್ಟ್ರಕವಿ ಕುವೆಂಪು ಅವರು ಅಧ್ಯಯನ ಮಾಡಿದ ದೊಡ್ಡ ಇತಿಹಾಸ ಈ ವಿಶ್ವವಿದ್ಯಾನಿಲಯಕ್ಕೆ ಇದೆ ಎಂದು ಡಾ.ಮಹದೇವಪ್ಪ ಹೇಳಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಡೀಸೆಲ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸೈಯಾರಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಬೈಸನ್ (ತ)	4 ಪ್ರದರ್ಶನಗಳು
ಸಂಗಂ	
ಡ್ಯೂಡ್ (ತ)	4 ಪ್ರದರ್ಶನಗಳು
ಲಿಡೋ	
ತೆಲುಸು ಕದ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪ್ರೇಮಿಗಳ ಗಮನಕ್ಕೆ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಂತಾರ ಚಾಪ್ಟರ್ 1(ಕ): ಮ.1.00ಕ್ಕೆ, ರಾ.7.00ಕ್ಕೆ, ರಾ.10.30ಕ್ಕೆ, ಡ್ಯೂಡ್ (ತ): ಬೆ.10.10ಕ್ಕೆ, ಸಂ.4.20ಕ್ಕೆ
ಸ್ಕ್ರೀನ್ 2	ಬೈಸನ್ (ತ): ಮ.1.00ಕ್ಕೆ, ಸಂಜೆ 4.15ಕ್ಕೆ, ಡೀಸೆಲ್ (ತ): ಮ.1.20ಕ್ಕೆ, ತೆಲುಸು ಕದ (ತೆ): ರಾ.7.35ಕ್ಕೆ. ದಿ ಪೆಟ್ ಡಿಟೆಕ್ಟಿವ್ (ಇ): ರಾ.10.20ಕ್ಕೆ
ಸ್ಕ್ರೀನ್ 3	ಡ್ಯೂಡ್ (ತ): ರಾ.7.20ಕ್ಕೆ, ರಾ. 10.15ಕ್ಕೆ, ಕಾಂತಾರ ಚಾಪ್ಟರ್ 1(ಕ): ಸಂ. 4.00ಕ್ಕೆ, ಪ್ರೇಮಿಗಳ ಗಮನಕ್ಕೆ (ಕ): ಬೆ.10.25ಕ್ಕೆ, ಟೈಮ್ ಪಾಸ್ (ಕ): ಮ.1.15ಕ್ಕೆ
ಸ್ಕ್ರೀನ್ 4	ಕಾಂತಾರ ಚಾಪ್ಟರ್ 1(ಕ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ನೆಕ್ಸಸ್ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 8.05ಕ್ಕೆ, 9.05ಕ್ಕೆ, 10.25ಕ್ಕೆ, 11.15ಕ್ಕೆ, ಮ: 12.15ಕ್ಕೆ, 2.40ಕ್ಕೆ, 3.40ಕ್ಕೆ, ಸಂಜೆ 6.05ಕ್ಕೆ, 6.55ಕ್ಕೆ, ರಾತ್ರಿ: 7.05ಕ್ಕೆ, 9.30ಕ್ಕೆ, 9.45ಕ್ಕೆ, 10ಕ್ಕೆ, 10.30ಕ್ಕೆ.
ಕಾಂತಾರ ಚಾಪ್ಟರ್ 1(ಹಿ): ಬೆ: 9.10ಕ್ಕೆ, ಮ.3.10ಕ್ಕೆ.
ಡ್ಯೂಡ್ (ತ): ಬೆ: 10ಕ್ಕೆ, ಸಂ: 4ಕ್ಕೆ, ರಾ: 10.20ಕ್ಕೆ
ಟೈಮ್ ಪಾಸ್ (ಕ): ಬೆ: 11.15ಕ್ಕೆ
ತೆಲುಸು ಕಾದಾ (ತೆ): ಮ: 12.20ಕ್ಕೆ, ರಾತ್ರಿ 7.20ಕ್ಕೆ
ಬೈಸನ್ ಕಾಳಮಂದಾನ್ (ತ): ಬೆ: ಮ: 12.40ಕ್ಕೆ, ಸಂಜೆ 6.35ಕ್ಕೆ
ಡೀಸೆಲ್ (ತ): ಮ: 1.40ಕ್ಕೆ
ಮಹಾಯೋಧ ರಾಮ (ಹಿ): ಮ: 1.50ಕ್ಕೆ
ಕೆ–ರ್‍ಯಾಂಪ್ (ತೆ): ಸಂ: 4.15ಕ್ಕೆ, ರಾ: 10.10ಕ್ಕೆ
ಮಿತ್ರ ಮಂಡಳಿ (ತೆ): ಸಂ: 4.40ಕ್ಕೆ
ಗುಡ್ ಫಾರ್ಚ್ಯೂನ್ (ಇ): ಸಂ: 7.30ಕ್ಕೆ

ಗರುಡ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 8.20ಕ್ಕೆ, 9.05ಕ್ಕೆ, 9.40ಕ್ಕೆ, 11.30ಕ್ಕೆ, ಮ: 12.15ಕ್ಕೆ, 2.55ಕ್ಕೆ, 3.40ಕ್ಕೆ, ಸಂ: 6.20ಕ್ಕೆ, 7.05ಕ್ಕೆ, ರಾ: 9.45ಕ್ಕೆ, 10.30ಕ್ಕೆ
ಪ್ರೇಮಿಗಳ ಗಮನಕ್ಕೆ (ಕ): ಬೆ: 11.05ಕ್ಕೆ
ಡ್ಯೂಡ್ (ತ): ಮ: 12.50ಕ್ಕೆ, ರಾ: 7.10ಕ್ಕೆ
ಟೈಮ್ ಪಾಸ್ (ಕ): ಮ: 1.50ಕ್ಕೆ
ಬೈಸನ್ ಕಾಳಮಂದಾನ್ (ತ): ಮ: 3.40ಕ್ಕೆ, ರಾ.10.05ಕ್ಕೆ
ತೆಲುಸು ಕಾದಾ (ತೆ): ಮ: 4.30ಕ್ಕೆ
ಕೆ–ರ್‍ಯಾಂಪ್ (ತೆ): ರಾ: 7.20ಕ್ಕೆ
ಮಿತ್ರ ಮಂಡಳಿ (ತೆ): ರಾ: 10.15ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕಲಿಕೆಯ ನಾವಿನ್ಯತೆಗೆ ಕೃತಕ ಬುದ್ಧಿಮತ್ತೆ ಪಾತ್ರ ಅಪಾರ

ಎಸ್‌ಜೆಸಿಇ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ.ಹೆಚ್.ವೈ.ವಾಣಿ ಅಭಿಮತ



ಮೈಸೂರು, ಅ. 18– ನಾವು ಇಂದು ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಜೀವಿಸುತ್ತಿದ್ದು, ವಿದ್ಯಾರ್ಥಿಗಳ ಕಲಿಕೆಯ ನಾವಿನ್ಯತೆಗೆ ಕೃತಕ ಬುದ್ಧಿಮತ್ತೆಯ ಪಾತ್ರ ಅಪಾರವಿದೆ ಎಂದು ಮೈಸೂರಿನ ಎಸ್‌ಜೆಸಿಇ ಕಾಲೇಜಿನ ಮಾಹಿತಿ ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ.ವಾಣಿ ಹೆಚ್.ವೈ ತಿಳಿಸಿದರು.

ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ಎವಿ ಕೊಠಡಿಯಲ್ಲಿ ಸಾಂಸ್ಥಿಕ ನಾವಿನ್ಯತೆ ಮಂಡಳಿಯ(IIC) ಆಶ್ರಯದಲ್ಲಿ ಐಕ್ಯೂಎಸಿ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ಕೃತಕ ಬುದ್ಧಿಮತ್ತೆ ಪರಿಕರ ಉಪಯೋಗಿಸಿ ನೂತನ ಕಲಿಕೆ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಕೃತಕ ಬುದ್ಧಿಮತ್ತೆಯ ಮಹತ್ವವನ್ನು ತಿಳಿಸಿದರು.

ಇಂದಿನ ಬೋಧನೆ ಮತ್ತು ಕಲಿಕೆಯ ವಿಧಾನಗಳಲ್ಲಿ ಕೃತಕ ಬುದ್ಧಿಮತ್ತೆಯ ಪರಿಕರಗಳ ಪಾತ್ರ ಮತ್ತು ಉಪಯೋಗವನ್ನು ತಿಳಿಸಿದರು. ಜೊತೆಗೆ ಕೃತಕ ಬುದ್ಧಿಮತ್ತೆಯ ಪರಿಕರಗಳನ್ನು ಪ್ರಾಯೋಗಿಕವಾಗಿ ಬಳಸುವ ವಿಧಾನಗಳನ್ನು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ ತಿಳಿಸಿದರು. ಕಲಿಕೆಯಲ್ಲಿ ಬೆಳವಣಿಗೆ ತರಲು ಪರಿಕರಗಳು ಸಹಾಯಕವಾಗಿವೆ. ಇಂತಹ ಪರಿಕರಗಳ ಸಹಾಯದಿಂದ ಇಬ್ಬರಲ್ಲೂ ಬೌದ್ಧಿಕ ತಿಳುವಳಿಕೆಯ ಮಟ್ಟ ಮತ್ತು ಇಂತಹ ಹೊಸ ಆವಿಷ್ಕಾರಗಳನ್ನು ಬಳಸುವ ಮೂಲಕ ಉತ್ತಮ ಶೈಕ್ಷಣಿಕ ಬೆಳವಣಿಗೆ ಸಾಧಿಸಲು ಸಾಧ್ಯವಿದೆ ಎಂಬುದನ್ನು ತಿಳಿಸಿಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಡಾ. ರೇಚಣ್ಣ ವಹಿಸಿದ್ದರು. ಸಾಂಸ್ಥಿಕ ನಾವಿನ್ಯತೆ ಮಂಡಳಿ ಸಂಚಾಲಕರಾದ ಡಾ. ಸುಕನ್ಯ ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಪುರುಷರ ಬ್ಯಾಸ್ಕೆಟ್‌ಬಾಲ್ ಮತ್ತು ಮಹಿಳೆಯರ ಥ್ರೋಬಾಲ್ ಸ್ಪರ್ಧೆ

ಜೆಎಸ್‌ಎಸ್ ವಿಜ್ಞಾನ–ತಂತ್ರಜ್ಞಾನ ವಿಶ್ವವಿದ್ಯಾಲಯ, ಮಹಾರಾಣಿ ವಾಣಿಜ್ಯ ಕಾಲೇಜು ಚಾಂಪಿಯನ್





ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ ತಂಡ, ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ತಂಡ

ಮೈಸೂರು, ಅ. 18– ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ ಸ್ಮರಣಾರ್ಥ ಪುರುಷರ ಬ್ಯಾಸ್ಕೆಟ್‌ಬಾಲ್ ಮತ್ತು ಮಹಿಳೆಯರ ಥ್ರೋಬಾಲ್ ಸ್ಪರ್ಧೆಯಲ್ಲಿ ಕ್ರಮವಾಗಿ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ ಹಾಗೂ ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ತಂಡಗಳು ಚಾಂಪಿಯನ್‌ಗಳಾಗಿ ಹೊರಹೊಮ್ಮಿವೆ. ಈ ಕ್ರೀಡಾಕೂಟವನ್ನು ಜೆಎಸ್‌ಎಸ್ ಎಸ್‌ಟಿಯು ದೈಹಿಕ ಶಿಕ್ಷಣ ವಿಭಾಗವು ತನ್ನ ಆವರಣದಲ್ಲಿ ಶುಕ್ರವಾರ ಆಯೋಜಿಸಲಾಗಿತ್ತು.

ಪುರುಷರ ಬ್ಯಾಸ್ಕೆಟ್‌ಬಾಲ್ ಫೈನಲ್‌ನಲ್ಲಿ ಜೆಎಸ್‌ಎಸ್ ಎಸ್‌ಟಿಯು ತಂಡವು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ವಿರುದ್ಧ 56–47 ಅಂಕಗಳ ಅಂತರದಿಂದ ರೋಚಕ ಜಯ ಸಾಧಿಸಿತು. ಚೈತನ್ಯ (16 ಅಂಕ) ಮತ್ತು ಭುವನ್ ಕುಮಾರ್ (14 ಅಂಕ) ಉತ್ತಮ ಪ್ರದರ್ಶನ ನೀಡಿದರೆ, ಎನ್‌ಐಇ ಪರವಾಗಿ ಆರ್ಯನ್ 24 ಅಂಕ ಗಳಿಸಿ ಮಿಂಚಿದರು. ಅವರ ಅದ್ಭುತ ಆಟದ ಹಿನ್ನೆಲೆಯಲ್ಲಿ ಪಂದ್ಯಾವಳಿಯ ಆಟಗಾರ ಪ್ರಶಸ್ತಿ ಪಡೆದರು. ಸೆಮಿಫೈನಲ್ ಹಂತದಲ್ಲಿ ಜೆಎಸ್‌ಎಸ್ ಎಸ್‌ಟಿಯು 50–36 ಅಂಕಗಳಿಂದ ಸೆಂಟ್ ಜೋಸೆಫ್ ಕಾಲೇಜು ತಂಡವನ್ನು ಸೋಲಿಸಿತು. ಸೆಮಿಫೈನಲ್‌ನಲ್ಲಿ ಎನ್‌ಐಇ ತಂಡವು ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಅಂಡ್ ರಿಸರ್ಚ್ ತಂಡದ ಮೇಲೆ 38–23 ಅಂಕಗಳ ಜಯಗಳಿಸಿತು.

ಮಹಿಳೆಯರ ಥ್ರೋಬಾಲ್ ಫೈನಲ್‌ನಲ್ಲಿ ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ತಂಡವು ಸರಸ್ವತೀಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜು ವಿರುದ್ಧ 25–22, 25–23 ಅಂಕಗಳ ಅಂತರದಿಂದ ಸತತ ಸೆಟ್‌ಗಳಲ್ಲಿ ಜಯ ಸಾಧಿಸಿತು. ಲವಿನಾ ಚಾಂಪಿಯನ್ ತಂಡದ ಪರ ಮಿಂಚಿದರೆ, ಜೆಎಸ್‌ಎಸ್ ಮಹಿಳಾ ಕಾಲೇಜಿನ ಸುಷ್ಮಾ ಶ್ರೇಷ್ಠ ಆಟ ಪ್ರದರ್ಶಿಸಿ ಪಂದ್ಯಾವಳಿಯ ಆಟಗಾರ್ತಿ ಪ್ರಶಸ್ತಿಗೆ ಭಾಜನರಾದರು. ಸೆಮಿಫೈನಲ್‌ನಲ್ಲಿ ಮಹಾರಾಣಿ ಕಾಲೇಜು ಜೆಎಸ್‌ಎಸ್ ಎಸ್‌ಟಿಯು ವಿರುದ್ಧ 25–10, 25–13 ಅಂಕಗಳಿಂದ ಗೆದ್ದರೆ, ಜೆಎಸ್‌ಎಸ್ ಮಹಿಳಾ ಕಾಲೇಜು ಜೆಎಸ್‌ಎಸ್‌ಎಸ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಫಾರ್ ವುಮೆನ್ ವಿರುದ್ಧ 25–18, 25–13 ಅಂಕಗಳಿಂದ ಜಯ ಸಾಧಿಸಿತು.

ಜೆಎಸ್‌ಎಸ್ ಮಹಾವಿದ್ಯಾಪೀಠದ ನಿರ್ದೇಶಕರು (ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ) ಕೆ.ಆರ್. ಸಂತಾನಂ, ಉಪಕುಲಪತಿ ಪ್ರೊ. ಎ.ಎನ್. ಸಂತೋಷ್ ಕುಮಾರ್, ಪ್ರೊ. ಎಸ್.ಎ. ಧನರಾಜ್, ಎಸ್‌ಜೆಸಿಇ ಉಪಪ್ರಾಂಶುಪಾಲ ಪಿ. ಮಲ್ಲು, ವಿದ್ಯಾರ್ಥಿ ಕಲ್ಯಾಣಾಧಿಕಾರಿ ಪ್ರೊ. ಎಂ.ಎಸ್. ಸುನಿಲ್ ಕುಮಾರ್ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕ ರೇವಣ್ಣ ಸಿ. ಉಪಸ್ಥಿತರಿದ್ದರು.

ಕಲಬುರಗಿ ಪ್ರವಾಹ ಸಂತ್ರಸ್ತರಿಗೆ ಎಐಡಿಎಸ್‌ಓ

ಮೈಸೂರಲ್ಲಿ ದೇಣಿಗೆ ಸಂಗ್ರಹ



ಕಲಬುರಗಿ ಜಿಲ್ಲೆಯ ಪ್ರವಾಹ ಸಂತ್ರಸ್ತರ ನೆರವಿಗಾಗಿ ಎಐಡಿಎಸ್‌ಓ ನೇತೃತ್ವದಲ್ಲಿ ವಿದ್ಯಾರ್ಥಿಗಳು ಮೈಸೂರಿನ ವಿವಿಧೆಡೆ ಜನರಿಂದ ದೇಣಿಗೆ ಸಂಗ್ರಹಿಸಿದರು.

ಮೈಸೂರು, ಅ.18(ಎಸ್‌ಪಿಎನ್)– ಧಾರಾಕಾರ ಮಳೆಯಿಂದಾಗಿ ಕಲಬುರಗಿ ಜಿಲ್ಲೆಯಲ್ಲಿ ಪ್ರವಾಹ ಉಂಟಾಗಿದ್ದು, ಇದರಿಂದ ಸಾವಿರಾರು ಕುಟುಂಬಗಳ ಬದುಕು ಬೀದಿಗೆ ಬಂದಿದೆ. ಇಂತಹವರ ನೆರವಿಗಾಗಿ ಎಐಡಿಎಸ್‌ಓ ನೇತೃತ್ವದಲ್ಲಿ ವಿದ್ಯಾರ್ಥಿಗಳು ಮೈಸೂರಿನ ವಿವಿಧೆಡೆ ಜನರಿಂದ ದೇಣಿಗೆ ಸಂಗ್ರಹಿಸಿದರು.

ಕಲ್ಯಾಣ ಕರ್ನಾಟಕ ಹಾಗೂ ನೆರೆರಾಜ್ಯ ಮಹಾರಾಷ್ಟ್ರದಲ್ಲಿ ಭೀಮ ನದಿಗೆ ಹರಿಸಿದ ನೀರು ರೈತರ ಹೊಲ, ಮನೆಗಳಿಗೆ ನುಗ್ಗಿ ಸಂಪೂರ್ಣವಾಗಿ ಜನಜೀವನ ಅಸ್ತವ್ಯಸ್ತವಾಗಿದೆ. ಅಲ್ಲಿನ ರೈತರ ಹೊಲಮನೆ, ಮನೆಯಲ್ಲಿರುವಂತಹ ದವಸ–ಧಾನ್ಯ ಎಲ್ಲವೂ ಸಂಪೂರ್ಣ ನಾಶವಾಗಿದ್ದು, ಜನ ಬೀದಿಗೆ ಬಿದ್ದಿದ್ದಾರೆ.

ಪ್ರವಾಹದಿಂದಾಗಿ ಕನಿಷ್ಟ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯೂ ಸಂತ್ರಸ್ತರಿಗೆ ಸಿಗದೆ, ಪ್ರತಿದಿನ ರೋಗರುಜಿನಗಳು ಕಾಣಿಸಿಕೊಂಡು ನೂರಾರು ಜನರು ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ಇಲ್ಲಿನ ಸರ್ಕಾರಿ ಆಸ್ಪತ್ರೆಗೆ ಔಷಧಿಗಳ ಕೊರತೆಯಿಂದಾಗಿ ಖಾಸಗಿ ಆಸ್ಪತ್ರೆಗಳಲ್ಲೂ ಚಿಕಿತ್ಸೆ ಪಡೆಯಲು ಹಣವಿಲ್ಲದೆ, ಜನರು ನರಳುತ್ತಿದ್ದಾರೆ. ರಾಜ್ಯ ಸರ್ಕಾರ ಇಂತಹವರ ನೆರವಿಗೆ ಕೂಡಲೇ ಧಾವಿಸಬೇಕು ಎಂದು ಎಐಡಿಎಸ್‌ಓ ಮೈಸೂರು ಜಿಲ್ಲಾ ಸಮಿತಿ ಸಂಚಾಲಕ ನಿತಿನ್ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ನಿತಿನ್, ಉಪಾಧ್ಯಕ್ಷೆ ಸ್ವಾತಿ, ಪದಾಧಿಕಾರಿಗಳಾದ ಹೇಮಾ, ಚಂದ್ರಿಕಾ, ದಿಶಾ, ಅಂಜಲಿ, ಅಭಿಷೇಕ್ ನಂದೀಶ್ ಹಾಗೂ ವಿದ್ಯಾರ್ಥಿಗಳಾದ ಮಾನಸ, ಕಾವ್ಯ, ದಿವ್ಯಶ್ರೀ, ಸಿಂಧು, ಮಂಜುನಾಥ್ ಭಾಗವಹಿಸಿದ್ದರು.

ಮೈಸೂರಿನ ಮಣಿಪಾಲ್ ಆಸ್ಪತ್ರೆ ವೈದ್ಯರಿಂದ ಮೂತ್ರಪಿಂಡದ ಗೆಡ್ಡೆ ಯಶಸ್ವಿ ಶಸ್ತ್ರ ಚಿಕಿತ್ಸೆ

ಮೈಸೂರು, ಅ. 18– ಮೈಸೂರಿನ ಮಣಿಪಾಲ್ ಆಸ್ಪತ್ರೆಯ ವೈದ್ಯರ ತಂಡ ಸತತ ಮೂರೂವರೆ ಗಂಟೆ ಕಾಲ ಮೂತ್ರಪಿಂಡದ ಗೆಡ್ಡೆಯನ್ನು ಶಸ್ತ್ರ ಚಿಕಿತ್ಸೆ ಮೂಲಕ ತೆಗೆದು ಯಶಸ್ವಿಯಾಗಿದೆ.

52 ವರ್ಷದ ವೀರಪ್ಪ (ಹೆಸರು ಬದಲಾಯಿಸಲಾಗಿದೆ) ಅವರು ಕೆಲವು ತಿಂಗಳುಗಳಿಂದ ಭಾರೀ ತೂಕ ನಷ್ಟ ಮತ್ತು ನಿರಂತರ ಆಯಾಸದಿಂದ ಬಳಲುತ್ತಿದ್ದರು. ಅವರು ಈಗಾಗಲೇ ಅಧಿಕ ರಕ್ತದೊತ್ತಡ ಮತ್ತು ದೀರ್ಘಕಾಲದ ಶ್ವಾಸಕೋಶದ ಕಾಯಿಲೆಯಿಂದಲೂ ಬಳಲುತ್ತಿದ್ದರು. ಈ ಹೊಸ ಲಕ್ಷಣಗಳಿಗೆ ಮಾರಣಾಂತಿಕ ಮೂತ್ರಪಿಂಡದ ಬೃಹತ್ ಗೆಡ್ಡೆ ಕಾರಣ ಎಂಬುದನ್ನು ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಪತ್ತೆ ಮಾಡಲಾಯಿತು.

ವೀರಪ್ಪ ಅವರು ಆಸ್ಪತ್ರೆಯ ಮೂತ್ರಶಾಸ್ತ್ರದ ಡಾ. ಕಿರಣ್ ಕುಮಾರ್ ಅವರನ್ನು ಸಂಪರ್ಕಿಸಿದಾಗ, ಅವರಿಗೆ CT ಮತ್ತು MRI ಸ್ಕ್ಯಾನ್ ಮಾಡಲಾಯಿತು. ಆಗ ಅವರ ಬಲ ಮೂತ್ರಪಿಂಡದಲ್ಲಿ 20X16 ಸೆಂ.ಮೀ ಗಾತ್ರದ ದೈತ್ಯ ಕ್ಯಾನ್ಸರ್ ಗೆಡ್ಡೆ (ರೀನಲ್ ಸೆಲ್ ಕಾರ್ಸಿನೋಮ) ಇರುವುದು ಕಂಡುಬಂತು. ಈ ಗೆಡ್ಡೆ ಸುಮಾರು 2 ಕಿಲೋಗ್ರಾಂಗಳಷ್ಟು ತೂಕವಿತ್ತು ಮತ್ತು ಹೃದಯಕ್ಕೆ ರಕ್ತವನ್ನು ಹಿಂತಿರುಗಿಸುವ ದೇಹದ ಮುಖ್ಯ ರಕ್ತನಾಳವಾದ ಇನ್ಫಿರಿಯರ್ ವೆನಾ ಕ್ಯಾವಾ (Inferior Vena Cava - IVC) ಗೆ ವಿಸ್ತರಿಸಿತ್ತು. ಅತಿ ಹೆಚ್ಚು ವಿಸ್ತಾರವಿದ್ದ ಸ್ಥಾನದಲ್ಲಿ, ಗೆಡ್ಡೆ ರಕ್ತನಾಳದೊಳಗೆ ಬೃಹತ್ತಾಗಿತ್ತು. ಇದು ಮಾರಣಾಂತಿಕ ಪರಿಸ್ಥಿತಿಯನ್ನು ಸಹ ಸೃಷ್ಟಿಸಿತ್ತು. ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಅತೀ ಸಣ್ಣ ಚ್ಯುತಿಯೂ ಗೆಡ್ಡೆಯ ತುಣುಕುಗಳನ್ನು ಹೃದಯ ಅಥವಾ ಶ್ವಾಸಕೋಶಕ್ಕೆ ಕಳುಹಿಸುವ ಗಂಭೀರವಾದ ಅಪಾಯ ಹೊಂದಿತ್ತು. ಹಾಗಾಗಿ ಬಹಳ ಎಚ್ಚರಿಕೆಯ ನಿರ್ವಹಣೆ ಅಗತ್ಯವಿತ್ತು.

ಮತ್ತೋರ್ವ ಮೂತ್ರ ಶಾಸ್ತ್ರಜ್ಞ ಡಾ. ದಿನೇಶ್ ಕುಮಾರ್ ಪ್ರಕಾರ 'ವಯಸ್ಕರಲ್ಲಿ ಮೂತ್ರಪಿಂಡದ ಜೀವಕೋಶದ ಕ್ಯಾನ್ಸರ್ ಸಾಮಾನ್ಯವಾಗಿ ಕಂಡು ಬರುವ ಕಾಯಿಲೆ ಆಗಿದೆ ಆದರೆ ಆರಂಭಿಕ ಹಂತಗಳಲ್ಲಿ ಅವು ಯಾವುದೇ ಲಕ್ಷಣಗಳನ್ನು ತೋರಿಸುವುದಿಲ್ಲ ಮತ್ತು ಸಾಮಾನ್ಯ ತಡವಾಗಿ ರೋಗನಿರ್ಣಯ ಮಾಡಲಾಗುತ್ತದೆ. ಅಪರೂಪದ ಸಂದರ್ಭಗಳಲ್ಲಿ, ಕ್ಯಾನ್ಸರ್ ದೇಹದ ಅತ್ಯಂತ ಪ್ರಮುಖ ರಕ್ತನಾಳಗಳಲ್ಲಿ ಒಂದಾದ ಇನ್ಫಿರಿಯರ್ ವೆನಾ ಕ್ಯಾವಾ ಒಳಗೆ ವಿಸ್ತರಿಸುತ್ತದೆ. ಇದು ಗೆಡ್ಡೆಯನ್ನು ಶಸ್ತ್ರಚಿಕಿತ್ಸೆಯಿಂದ ತೆಗೆದುಹಾಕುವುದನ್ನು ಅತ್ಯಂತ ಜಟಿಲಗೊಳಿಸುತ್ತದೆ.

ಸತತ ಮೂರೂವರೆ ಗಂಟೆಗಳ ಕಾಲ, ಶಸ್ತ್ರ ಚಿಕಿತ್ಸೆಯ ನಂತರ ಮೂತ್ರಶಾಸ್ತ್ರಜ್ಞರು ಗೆಡ್ಡೆಯನ್ನು ತೆಗೆದು ಹಾಕಿದರು. ಸಿಟಿವಿಎಸ್ ಶಸ್ತ್ರಚಿಕಿತ್ಸಕರು ಥ್ರಂಬಸ್ (ರಕ್ತನಾಳದೊಳಗಿನ ಗೆಡ್ಡೆಯ ಹೆಪ್ಪುಗಟ್ಟುವಿಕೆ) ಅನ್ನು ಹೊರ ಹಾಕುವ ಮೂಲಕ ಇನ್ಫಿರಿಯರ್ ವೆನಾ ಕ್ಯಾವಾವನ್ನು ರಕ್ಷಿಸಿದರು.

ಶಸ್ತ್ರಚಿಕಿತ್ಸೆಯ ನಂತರ, ವೀರಪ್ಪ ಅವರನ್ನು ಐಸಿಯುಗೆ ಸ್ಥಳಾಂತರಿಸಿ, ಆರು ಗಂಟೆಗಳ ಕಾಲ ವೆಂಟಿಲೇಟರ್‌ನಲ್ಲಿ ಇರಿಸಲಾಯಿತು. ಒಂದೇ ದಿನದಲ್ಲಿ ಅವರು ಸ್ವಂತವಾಗಿ ಉಸಿರಾಡುತ್ತಿದ್ದು, ಅವರನ್ನು ವಾರ್ಡ್‌ಗೆ ಸ್ಥಳಾಂತರಿಸಲಾಯಿತು ಎಂದು ವೈದ್ಯರು ವಿವರಿಸಿದ್ದಾರೆ.

ಕವಿಗೋಷ್ಠಿಗೆ ಕವನಗಳ ಆಹ್ವಾನ

ಮೈಸೂರು, ಅ.18–ಸನ್ನಿಧಿ ಪ್ರಕಾಶನದ ವತಿಯಿಂದ ಅ.26ರ ಭಾನುವಾರದಂದು ಕವಿಗೋಷ್ಠಿ ಆಯೋಜಿಸಿದ್ದು, ಆಸಕ್ತ ಕವಿ ಕವಯಿತ್ರಿಯರಿಂದ ಕವನಗಳನ್ನು ಆಹ್ವಾನಿಸಲಾಗಿದೆ

ಮೈಸೂರಿನ ಸರಸ್ವತಿಪುರಂನಲ್ಲಿರುವ ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್ ಸಭಾಂಗಣದಲ್ಲಿ ಕವಿಗೋಷ್ಠಿ ನಡೆಯಲಿದ್ದು, ಭಾಗವಹಿಸಲು ಇಚ್ಛಿಸುವ ಯಾವುದೇ ವಯೋಮಾನದ ಆಸಕ್ತ ಕವಿ–ಕವಯಿತ್ರಿಯರು ಯಾವುದೇ ವಸ್ತು ವಿಷಯ ಕುರಿತು ರಚಿಸಿದ ತಮ್ಮ ಸ್ವರಚಿತ 20 ಸಾಲುಗಳ ಮಿತಿಯೊಳಗಿನ ಎರಡು ಕವಿತೆಗಳು ಅಥವಾ 6 ಸಾಲಿನ ಆರು ಚುಟುಕು ಹನಿಗವಿತೆಗಳನ್ನು ಕಳುಹಿಸಲು ಕೋರಲಾಗಿದೆ.

ಆಯ್ಕೆಯಾದ ಕವಿತೆಗಳ ಕವಿಗಳಿಗೆ ಕವನ ವಾಚಿಸಲು ಅವಕಾಶ ಮಾಡಿಕೊಡಲಾಗುವುದು. ಭಾಗವಹಿಸುವ ಎಲ್ಲಾ ಕವಿಗಳಿಗೂ ಪ್ರಶಸ್ತಿ ಪತ್ರ ಹಾಗೂ ನೆನಪಿನ ಕಾಣಿಕೆ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 9916892562, 9916892562 ಸಂಪರ್ಕಿಸಬಹುದು. ನೋಂದಣಿಗೆ ಕೊನೆ ದಿನಾಂಕ ಅ.21ರ ಸಂಜೆ 8.30 ರವರೆಗೆ.

ಸೀಮಿತ ಸ್ಥಳಗಳಲ್ಲಿ ವಿಶ್ವಸಂಸ್ಥೆ ಧ್ವಜಾರೋಹಣ

ಮೈಸೂರು, ಅ.18(ಎಸ್‌ಪಿಎನ್)– ವಿಶ್ವಸಂಸ್ಥೆ ದಿನಾಚರಣೆ ಅಂಗವಾಗಿ ಅ.24ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ರಾಷ್ಟ್ರಧ್ವಜದೊಂದಿಗೆ ವಿಶ್ವಸಂಸ್ಥೆಯ ಧ್ವಜವನ್ನು ಹಾರಿಸಿ, ಆಚರಣೆ ಮಾಡುವಂತೆ ರಾಜ್ಯ ಸರ್ಕಾರ ಆದೇಶಿಸಿದೆ.

ರಾಷ್ಟ್ರಧ್ವಜವನ್ನು ಹಾರಿಸಲಾಗುತ್ತಿರುವ ಕಟ್ಟಡಗಳ ಮೇಲೆ ರಾಷ್ಟ್ರಧ್ವಜದ ಜೊತೆಗೆ ವಿಶ್ವಸಂಸ್ಥೆಯ ಧ್ವಜವನ್ನು ಹಾರಿಸುವ ಕುರಿತು ಭಾರತ ಧ್ವಜ ಸಂಹಿತೆ 2002ರ ನಿಯಮದ ಪ್ರಕಾರ ಹಾರಿಸುವಂತೆ ಸೂಚಿಸಿದ್ದು, ವಿಶ್ವಸಂಸ್ಥೆಯ ಧ್ವಜವನ್ನು ರಾಜಭವನ, ವಿಧಾನಮಂಡಲ, ಹೈಕೋರ್ಟ್ ಮೇಲೆ ಹಾರಿಸುವ ಅವಶ್ಯಕತೆ ಇರುವುದಿಲ್ಲ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ರಾಜಕೀಯ) ಅಧೀನ ಕಾರ್ಯದರ್ಶಿ ಬಿ.ಕೆ.ಸಂದೀಪ್ ಸೂಚಿಸಿದ್ದಾರೆ.

ಹಾಸನಾಂಬ ದೇವಿ ದರ್ಶನ ಪಡೆದ ಸಿಎಂ ಸಿದ್ದರಾಮಯ್ಯ ಪತ್ನಿ ಶ್ರೀಮತಿ ಪಾರ್ವತಿ



ಹಾಸನ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಶ್ರೀಮತಿ ಪಾರ್ವತಿ ಅವರು ಶನಿವಾರ ಹಾಸನಾಂಬ ದೇವಿ ದರ್ಶನ ಪಡೆದಿದ್ದಾರೆ.

ತಮ್ಮ ಆಪ್ತರ ಜೊತೆ ಆಗಮಿಸಿದ ಅವರನ್ನು ಮಹಿಳಾ ಪೊಲೀಸರು ದೇವಸ್ಥಾನಕ್ಕೆ ಭದ್ರತೆಯಲ್ಲಿ ಕರೆತಂದಿದ್ದು, ಪಾರ್ವತಿ ಅವರು ಹಾಸನಾಂಬ ದೇವಿ ದರ್ಶನ ಪಡೆದಿದ್ದಾರೆ. ಹಾಸನಾಂಬ ದೇವಿ ದರ್ಶನದ ನಂತರ ಸಿದ್ದೇಶ್ವರಸ್ವಾಮಿ ದರ್ಶನ ಪಡೆದು ತೆರಳಿದ್ದಾರೆ. ಇದೇ ಮೊದಲ ಬಾರಿಗೆ ಅವರು ಹಾಸನಾಂಬ ದೇವಿ ದರ್ಶನ ಪಡೆದಿದ್ದಾರೆ.

ನಾಳೆಯಿಂದ ಉಚಿತ ಕಣ್ಣಿನ ತಪಾಸಣಾ ಶಿಬಿರ

ಮೈಸೂರು, ಅ.18–ದೀಪಾವಳಿ ಹಬ್ಬದ ಪ್ರಯುಕ್ತ ಶಾರದಾದೇವಿನಗರದ ಅನ್ನಪೂರ್ಣ ಕಣ್ಣಿನ ಆಸ್ಪತ್ರೆಯಲ್ಲಿ ಅ.20ರಿಂದ 31ರವರೆಗೆ ಹಿರಿಯ ನಾಗರಿಕರಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ನಡೆಯಲಿದೆ. ಮಾಹಿತಿಗೆ ಮೊ. 8892240562, ದೂ.0821–42683333 ಸಂಪರ್ಕಿಸಬಹುದು.



ಹುಟ್ಟು ಹಬ್ಬದ ಶುಭಾಶಯಗಳು
ಚಾರ್ವಿಕ .ಎಂ
ದೇವರು ಇವರಿಗೆ ಆಯಸ್ಸು, ಆರೋಗ್ಯ, ಐಶ್ವರ್ಯ, ಕೊಟ್ಟು ಕಾಪಾಡಲಿ ಎಂದು ಪ್ರಾರ್ಥಿಸುತ್ತೇವೆ
ಶುಭಕೋರುವವರು:
ತಂದೆ-ಮಂಜುನಾಥ್, ತಾಯಿ-ಅಶ್ವಿನಿ, ಅಜ್ಜಿ-ಕಮಲಮ್ಮ, ಪ್ರೇಮ ಅಜ್ಜಿ ಸ್ವಾಮಯ್ಯ, ಪುಟ್ಟರಾಜು, ಚಿಕ್ಕ ಸಂಜಯ್ ಹಾಗೂ ಮುದ್ದು ತಂಗಿ ಪೂರ್ವಿಕ

ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀ ಸ್ವಾಮೀಗೌಡ

ದುಃಖತಪ್ತರು: ಪತ್ನಿ : ದೇವಮ್ಮ, ಹೆಣ್ಣು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಚೌಡೇಗೌಡರ ಕುಟುಂಬ, ಬೆಳಗೊಳ, ಬಲಮುರಿ ರಸ್ತೆ, ಶ್ರೀರಂಗಪಟ್ಟಣ ತಾ||

ಮೊದಲನೇ ವರ್ಷದ ಪುಣ್ಯಸ್ಮರಣೆ



ದುಃಖತಪ್ತರು : ಮಕ್ಕಳು ಮತ್ತು ಸೊಸೆಯಂದಿರು, ಅಳಿಯ ಹಾಗೂ ಮೊಮ್ಮಕ್ಕಳು ಮತ್ತು ಲೇಟ್ ಮಂಚಮ್ಮ ಹಾಗೂ ಲೇಟ್ ಯಾಲಕಯ್ಯ ಮತ್ತು ಕುಟುಂಬ ವರ್ಗದವರು
#3867, 2ನೇ ಕ್ರಾಸ್, 2ನೇ ಮೇನ್, ಗಾಂಧಿನಗರ,

ಶ್ರೀಮತಿ ಪದ್ಮಮ್ಮನವರು
ಲೇ. ಶ್ರೀ ನಾರಾಯಣ(KEB) ರವರ ಧರ್ಮಪತ್ನಿ

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 15–ಎಸ್‌ಎನ್‌ಟಿ–ಎಂವೈಎಸ್–2025
ದಿನಾಂಕ : 10–10–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಮೈಸೂರು ವಿಭಾಗದಲ್ಲಿ ಟಿಆರ್‌ಆರ್, ಟಿಡಬ್ಲ್ಯುಎಸ್ ಮತ್ತು ಟಿಎಫ್‌ಟಿಆರ್ ಕಾಮಗಾರಿಗೆ ಸಂಬಂಧಿಸಿದಂತೆ ಸಿಗ್ನಲಿಂಗ್ ಕಾಮಗಾರಿಗಳು.	ರೂ. 1,13,79,518.57
2	ಹೊಳೆ ನರಸೀಪುರ – ಮಾವಿನಕೆರೆ ನಿಲ್ದಾಣಗಳ ನಡುವೆ ಕಿಮೀ 88/195 ರಲ್ಲಿ ಎಲ್‌ಸಿ ಸಂ.79ರ ಬದಲಿಗೆ ರಸ್ತೆ ಕೆಳಸೇತುವೆ ನಿರ್ಮಾಣದ ಕಾಮಗಾರಿಗೆ ಸಂಬಂಧಿಸಿದಂತೆ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಕಾಮಗಾರಿ.	ರೂ. 31,50,401.61
3	ಹೊಳಲ್ಕೆರೆ ಯಾರ್ಡ್‌ನಲ್ಲಿ ಎಲ್‌ಸಿ ಸಂ. 162ರ ಮತ್ತು ಚಿತ್ರದುರ್ಗ ಯಾರ್ಡ್‌ನಲ್ಲಿ ಇಂಟರ್‌ಲಾಕ್ಡ್ ಎಲ್‌ಸಿ ಸಂ.20ರ ಸಂಚಾರಕ್ಕಾಗಿ ಎನ್‌ಹೆಚ್‌ಎಐ ನಿಂದ ರಸ್ತೆ ಕೆಳಸೇತುವೆಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಕಾಮಗಾರಿ. ಹಾಲಿ ಇರುವ ಸ್ಟೋನ್ ಸ್ಲ್ಯಾಬ್ ಸೇತುವೆ ಸಂ.1, ಸೇತುವೆ ಸಂ.8, ಸೇತುವೆ ಸಂ. 11, ಸೇತುವೆ ಸಂ. 74, ಸೇತುವೆ ಸಂ. 79, ಸೇತುವೆ ಸಂ. 110 ಮತ್ತು ಸೇತುವೆ ಸಂ. 127, ಸೇತುವೆ ಸಂ. 53, ಸೇತುವೆ ಸಂ. 56, ಎಲ್‌ಸಿ ಸಂ.196 ಸೇತುವೆ ಸಂ. 84ನ್ನು ಬದಲಿಸುವುದು.	ರೂ. 1,26,62,030.52
4	ಮೈಸೂರು ವಿಭಾಗದಲ್ಲಿ ಟಿಆರ್‌ಆರ್, ಟಿಡಬ್ಲ್ಯುಎಸ್ ಮತ್ತು ಟಿಎಫ್‌ಟಿಆರ್ ಕಾಮಗಾರಿಗೆ ಸಂಬಂಧಿಸಿದಂತೆ ಸಿಗ್ನಲಿಂಗ್ ಕಾಮಗಾರಿಗಳು.	ರೂ. 1,05,48,193.72
5	ಪಾಂಡವಪುರದಲ್ಲಿ ಹೊಸ ಆರ್‌ಪಿಎಫ್ ಔಟ್ ಪೋಸ್ಟ್ ಕಟ್ಟಡದ ನಿರ್ಮಾಣದಲ್ಲಿ ಸಿಸಿಟಿವಿ ನೆಟ್‌ವರ್ಕ್, ರೈಲ್‌ನೆಟ್ / ಎಲ್‌ಎಎನ್ ನೆಟ್‌ವರ್ಕ್ ಮತ್ತು ಟೆಲಿಫೋನ್ ಸಂಪರ್ಕವನ್ನು ಒದಗಿಸುವುದು ಮತ್ತು ಅಶೋಕಪುರಂ ನಿಲ್ದಾಣಗಳಲ್ಲಿ ಸಿ & ಡಬ್ಲ್ಯು ಕಾರ್ಯಚಟುವಟಿಕೆಗಳಿಗಾಗಿ ಸರ್ವೀಸ್ ರೂಮ್‌ಗಳನ್ನು ಒದಗಿಸುವುದು.	ರೂ. 12,15,759.78

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 03–11–2025 ರಂದು 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಇಂಜಿನಿಯರ್, ಮೈಸೂರು
ಪಿಯುಬಿ/550/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26
ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRAILWAYHQ | sw_railways

ವಿಜಯನಗರ ಪತ್ತಿನ ಸಹಕಾರ ಸಂಘ ನಿಯಮಿತ

#12, ನೆಲಅಂತಸ್ತು, ಕನ್ನಡ ಸಾಹಿತ್ಯ ಪರಿಷತ್ತು ಭವನ ರಸ್ತೆ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಮುಂಭಾಗ, ವಿಜಯನಗರ 1ನೇ ಹಂತ, ಮೈಸೂರು–570017 । ದೂರವಾಣಿ: 2415869

ವಿಳಾಸ ಬದಲಾವಣೆ

ವಿಜಯನಗರ ಪತ್ತಿನ ಸಹಕಾರ ಸಂಘ ನಿಯಮಿತ ಮೈಸೂರು ಇದರ ಸದರಿ ಕಚೇರಿ ನಂ.12, ನೆಲ ಅಂತಸ್ತು, ಕನ್ನಡ ಸಾಹಿತ್ಯ ಪರಿಷತ್ತು ಭವನ ರಸ್ತೆ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಮುಂಭಾಗ, ವಿಜಯನಗರ 1ನೇ ಹಂತ, ಮೈಸೂರು ಇದರ ಕಚೇರಿಯು ನಂ.2228/2, ಬಸವರಾಜು ಸರ್ಕಲ್, 'ಇ' ಬ್ಲಾಕ್, ವಿಜಯನಗರ 3ನೇ ಹಂತ, ಮೈಸೂರು ಈ ವಿಳಾಸಕ್ಕೆ ಬದಲಾವಣೆಯಾಗಿದ್ದು, ಸಂಘದ ಸದಸ್ಯರು ಇನ್ನೂ ಮುಂದೆ ಸಂಘದ ಎಲ್ಲಾ ಕಾರ್ಯಚಟುವಟಿಕೆಗಳಿಗಾಗಿ ಸಂಬಂಧಪಟ್ಟ ಕಚೇರಿಯನ್ನು ಸಂಪರ್ಕಿಸಬೇಕಾಗಿ ಈ ಮೂಲಕ ತಿಳಿಸಿರುತ್ತೇವೆ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– ಶ್ರೀಮತಿ ನಂದಿನಿ ಎಂ. ಕಾರ್ಯದರ್ಶಿ

ವೈಕುಂಠ ಸಮಾರಂಭ ಆಹ್ವಾನ ಪತ್ರಿಕೆ



ಶ್ರೀಮತಿ ಗೌರಮ್ಮ

ಲೇಟ್. ಎಲ್. ವಿಶ್ವೇಶ್ವರಯ್ಯ (ಪುಟ್ಟಪ್ಪಾಜಿ) ಇವರ ಧರ್ಮ ಪತ್ನಿ ಇವರು ದಿನಾಂಕ 08-10-2025 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ತಾ|| 19-10-2025ನೇ ಭಾನುವಾರ ಪೂಜಾ ಕಾರ್ಯಕ್ರಮ (ಭೂಶಾಂತಿ) ಹಾಗೂ ಮಧ್ಯಾಹ್ನ 1-00 ಕ್ಕೆ ಭೋಜನ ಬಸವೇಶ್ವರ ಕಲ್ಯಾಣ ಮಂಟಪ, 1ನೇ ಮುಖ್ಯ ರಸ್ತೆ, ಪಡುವಾರಹಳ್ಳಿ (ವಿನಾಯಕನಗರ), ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: ಕುಟುಂಬವರ್ಗದವರು ಹಾಗೂ ಬಂಧು–ಮಿತ್ರರು.
ಸಂಪರ್ಕಿಸಿ: 9036309266

ದಾಖಲಾತಿ ಕಳೆದಿದೆ

ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕೂರ್ಗಳ್ಳಿ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಹಾಳೇಗೌಡರ ಧರ್ಮಪತ್ನಿ, 1) ಶ್ರೀಮತಿ ಜಯಮ್ಮ, 65 ವರ್ಷ ಮತ್ತು ಇವರ ಏಕಪುತ್ರ 2) ಶ್ರೀ ಚಿಕ್ಕಯ್ಯ, 46 ವರ್ಷ ಮತ್ತು ಇವರ ಧರ್ಮಪತ್ನಿ, 3) ಶ್ರೀಮತಿ ವಿಜಯಕುಮಾರಿ 38 ವರ್ಷ ಮತ್ತು ಇವರ ಮಗ, 4) ಶ್ರೀ ಧನುಷ್. ಸಿ, 19 ವರ್ಷ, ಆದ ನಾವುಗಳು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳಿ ಬರೆಸಿದ ಪ್ರಮಾಣ ಪತ್ರ, ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹೆಬ್ಬಾಡಿ ಗ್ರಾಮಕ್ಕೆ ಸೇರಿದ ಸರ್ವೆ : 144/3ನೇ ನಂಬರ್ 14 ಹದಿನಾಲ್ಕು ಗುಂಟೆ ವಿಸ್ತೀರ್ಣದ ತರೀ ಜಮೀನು 22–02–2008ರಲ್ಲಿ ಮಹದೇವಮ್ಮ ಮತ್ತಿತರರಿಂದ ಶ್ರೀರಂಗಪಟ್ಟಣ ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ 1ನೇ ಪುಸ್ತಕದ ಸಿಡಿ ನಂಬರ್ :ಎಸ್‌ಆರ್‌ಪಿಡಿ 36ರಲ್ಲಿ ಎಸ್‌ಆರ್‌ಪಿ–1–05886ನೇ ನಂಬರ್ ರಿಜಿಸ್ಟರ್ಡ್ ಕ್ರಯ ಪತ್ರದ ಮೂಲಕ ನಮ್ಮಗಳಲ್ಲಿ ಒಂದನೇ ಶ್ರೀಮತಿ ಜಯಮ್ಮ ರವರು ಸ್ವಯಾರ್ಜಿತವಾಗಿ ಪಡೆದುಕೊಂಡಿರುತಾರೆ. 22–02–2008ರ ಎಸ್‌ಆರ್‌ಪಿ–1–05886ನೇ ನಂಬರ್ ರಿಜಿಸ್ಟರ್ಡ್ ಅಸಲು ಕ್ರಯ ಪತ್ರ ನಾವುಗಳು ಕಳೆದು ಹಾಕಿರುತ್ತೇವೆ. ಸದರಿ ಅಸಲು ಪತ್ರ ಕಳೆದು ಹೋಗಿರುವುದು ಸತ್ಯವಾಗಿರುತ್ತದೆ. ಶ್ರೀರಂಗಪಟ್ಟಣ ಉಪನೋಂದಣಾಧಿಕಾರಿಗಳ ಕಛೇರಿಯಿಂದ ದಾಖಲೆಗಾಗಿ ಸದರಿ ರಿಜಿಸ್ಟರ್ಡ್ ಕ್ರಯ ಪತ್ರದ ಸರ್ಟಿಫೈಡ್ ಕಾಪಿ ನಾವುಗಳು ಪಡೆದುಕೊಂಡಿರು ತೇವೆ. 26–09–2025 ರಲ್ಲಿ ಮೈಸೂರು ನಗರ, ರಾಜೀವನಗರ, 2ನೇ ಹಂತ, ಎಂಜಿ 748/1ನೇ ನಂಬರ್ ಮನೆಯಲ್ಲಿರುವ ಸೈಯದ್ ಅಂಜುಂ ರವರ ಹೆಂಡತಿ ಸಗೀರಾ ಜಬೀನ್ ರವರಿಗೆ 10–02–2014ರಲ್ಲಿ ಶ್ರೀರಂಗಪಟ್ಟಣ ಹಿರಿಯ ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ 1ನೇ ಪುಸ್ತಕದ ಎಸ್‌ಆರ್‌ಪಿ–1–04564ನೇ ನಂಬರಾಗಿ ರಿಜಿಸ್ಟರ್ಡ್ ಕ್ರಯ ಪತ್ರದ ಮೂಲಕ ಸದರಿ ಜಮೀನು ನಾವುಗಳು ಮಾರಾಟ ಮಾಡಿರುತೇವೆ. ಸದರಿ ರಿಜಿಸ್ಟರ್ಡ್ ಕ್ರಯ ಪತ್ರದಲ್ಲಿ ನಮ್ಮ ಬಾಬು 22–02–2008ರ ಎಸ್‌ಆರ್‌ಪಿ–1–05886ನೇ ನಂಬರ್ ರಿಜಿಸ್ಟರ್ಡ್ ಅಸಲು ಕ್ರಯ ಪತ್ರ ನಾವುಗಳು ಕಳೆದು ಹೋಗಿರುವ ಬಗ್ಗೆ ವಿವರ ತಿಳಿಸಿರುವುದಿಲ್ಲ. ಶ್ರೀರಂಗಪಟ್ಟಣ ಉಪ ನೋಂದಣಾಧಿಕಾರಿಗಳ ಕಛೇರಿಯಿಂದ ದಾಖಲೆಗಾಗಿ ಸದರಿ ರಿಜಿಸ್ಟರ್ಡ್ ಕ್ರಯ ಪತ್ರದ ಸರ್ಟಿಫೈಡ್ ಕಾಪಿ ನಾವುಗಳು ಪಡೆದುಕೊಂಡಿರುವ ವಿವರ ಸಹಾ ತಿಳಿಸಿರುವುದಿಲ್ಲ. ಮುಂದೆ ಒಂದು ವೇಳೆ ಸದರಿ ಅಸಲು ಕ್ರಯ ಪತ್ರ ನಮಗೆ ದೊರೆತಲ್ಲಿ ತಕ್ಷಣ ಹಾಲಿ ಮಾಲೀಕರಾದ ಸಗೀರಾ ಜಬೀನ್ ರವರ ವಶಕ್ಕೆ ಕೊಡುತ್ತೇವೆ. ಸದರಿ ಅಸಲು ರಿಜಿಸ್ಟರ್ ಕ್ರಯ ಪತ್ರದ ಬಗ್ಗೆ ಮುಂದೆ ಯಾವುದೇ ಸಾಲಗಳು, ತಕರಾರುಗಳು ಕಂಡು ಬಂದಲ್ಲಿ ಅವುಗಳನ್ನೆಲ್ಲಾ ನಾವು ನಮ್ಮ ಸ್ವಂತ ಖರ್ಚಿನಲ್ಲಿ ಜವಾಬ್ದಾರಿಯಲ್ಲಿ ಪರಿಹರಿಸಿಕೊಡುತ್ತೇವೆ. ಮೇಲ್ಕಂಡ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇವೆ. ದಾಖಲಾತಿ ಸಿಕ್ಕವರು ಮಾಲೀಕರನ್ನು ಸಂಪರ್ಕಿಸಿ: 8073280019

ಪುರಸಭೆ ಕಾರ್ಯಾಲಯ, ವಿರಾಜಪೇಟೆ
ಕೊಡಗು ಜಿಲ್ಲೆ – 571218

ಇ ಮೇಲ್:–itstaff_ulb_virajpet@yahoo.com
ವೆಬ್ ಸೈಟ್:– www.virajpettown.mrc.gov.in ದೂರವಾಣಿ ಸಂಖ್ಯೆ:– 08274–257332

ಕ್ರಸಂ.ನಂ.ಪು.ವಿ/ಎಸ್.ಎಫ್.ಸಿ.ವಿ.ಅ./ಟಿ–07/2025–26 ದಿನಾಂಕ: 16/10/2025.

"ಟೆಂಡರ್ ಪ್ರಕಟಣೆ"
(ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ)


ವಿರಾಜಪೇಟೆ ಪುರಸಭೆಯ 2024–25ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದಡಿಯಲ್ಲಿ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000, ಹಾಗೂ ತಿದ್ದು ಪಡಿ ನಿಯಮ 2001ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ 4 ರ ನಿಯಮಗಳಿಗನುಸಾರ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.kppp.karnataka.gov.in ವೆಬ್ ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್ ಗಳನ್ನು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.

1. ಟೆಂಡರ್ ಫಾರಂಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ : 18/10/2025 ರಿಂದ 03/11/2025 ಸಂಜೆ 17:30 ಗಂಟೆಗೆ
2. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 03/11/2025 ಸಂಜೆ 17:30 ಗಂಟೆ ವರೆಗೆ
3. ಟೆಂಡರ್ ತೆರೆಯುವ ದಿನಾಂಕ : 05/11/2025 ಬೆಳಿಗ್ಗೆ 11.30 ಗಂಟೆಯ ನಂತರ
4. ಟೆಂಡರುಗಳನ್ನು ತೆರೆಯುವ ಸ್ಥಳ : ವಿರಾಜಪೇಟೆ ಪುರಸಭೆ

ಕಾಮಗಾರಿಗಳ ವಿವರ, ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್‌ಸೈಟ್ **www.virajpettown.mrc.gov.in** ನಲ್ಲಿ ಮತ್ತು ಕಛೇರಿಯ ಸೂಚನಾ ಫಲಕವನ್ನು ನೋಡ ಬಹುದಾಗಿದೆ.

ಸಹಿ/– ಶ್ರೀಮತಿ. ಎಂ.ಕೆ ದೇಚಮ್ಮನವರು, ಅಧ್ಯಕ್ಷರು, ಪುರಸಭೆ, ವಿರಾಜಪೇಟೆ.
ಸಹಿ/–ಶ್ರೀಮತಿ, ಫಸಿಹಾ ತಬಸಮ್, ಉಪಾಧ್ಯಕ್ಷರು ಪುರಸಭೆ, ವಿರಾಜಪೇಟೆ.
ಸಹಿ/– ಶ್ರೀ ಎಂ.ಕೆ ಅಬ್ದುಲ್ ಜಲೀಲ್, ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ವಿರಾಜಪೇಟೆ.
ಸಹಿ/– ಶ್ರೀ ನಾಚಪ್ಪ ಪಿ.ಕೆ, ಮುಖ್ಯಾಧಿಕಾರಿ, ಪುರಸಭೆ, ವಿರಾಜಪೇಟೆ.

5ನೇ ವರ್ಷದ ಸವಿನೆನಪು



ಕೆ.ವಿ.ಪ್ರಕಾಶ್‌ಗೌಡರು
ಇನ್‌ಫೋಸಿಸ್ ಗುತ್ತಿಗೆದಾರರು
ದುಃಖತಪ್ತರು : ಪತ್ನಿ ನಾಗರತ್ನ, ಹಾಗೂ ಕುಟುಂಬವರ್ಗದವರು, ಕುಂಬಾರಕೊಪ್ಪಲು

ಮೈಸೂರು ಮಿತ್ರ 46 — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

PUPLIC NOTICE

The general public at large is hereby notified that my client Mr. V Ravikumar, Mysore intends to purchase the under mentioned property from its absolute owner Sri Mahantesh C Bangar Shetter. The original documents viz., MUDA Allotment Letter Dated: 31-06-1980, Possession Certificate & Registered Title Deed No. 11129, Dated 23-01-2004, pertaining to the said property bearing Door No. 242, EWS, Situated at Hudco, Gangothri Layout, Mysore, are lost. If anyone claiming any kind of right, title, interest, objection over the said property is hereby required to contact me at my office **S B NATESH Law Firm, No. 1400-1401, 1 Floor, V V Road, Mysuru,** with proper legal documentary evidence within 7 days from the date of this notice, along with the concerned original documents. If no such claims or objections received within the stipulated period, my client will proceed to complete the transaction in his favor and no claim or objection whatsoever will be entertained thereafter.

Sd/- **Ramya B,** Advocate
SBN Law Firm,
Mob. 9591654434
Dated 15-10-2025, Mysore

ಪುರಸಭಾ ಕಾರ್ಯಾಲಯ, ಟಿ.ನರಸೀಪುರ
ಮೈಸೂರು ಜಿಲ್ಲೆ. ದೂ: 08227–261232
ಇ–ಮೇಲ್: itstaff_ulb_tnarasipura@yahoo.com
ವೆಬ್‌ಸೈಟ್: www.tmarasipuratown.gov.in

ಸಂಖ್ಯೆ: ಪು.ತಿ.ನ/ಡೇನಲ್ಮ್/ಕ.ಮೊ/02/2025–26 ದಿನಾಂಕ: 16.10.2025

ಮರು ಆಸಕ್ತಿ ಅಭಿವ್ಯಕ್ತಿ (Re EXPRESSION INTEREST)

ಟಿ.ನರಸೀಪುರ ಪುರಸಭೆಯ 23 ವಾರ್ಡ್‌ಗಳಲ್ಲಿ 03 ವರ್ಷಗಳ ಅವಧಿಗೆ ಪೂರ್ಣ ಸಮಯದ ಪಾತ್ರದ ಆಡಿಯಲ್ಲಿ IEC ಚಟುವಟಿಕೆಗಳನ್ನು ಕೈಗೊಳ್ಳಲು ಡೇ–ನಲ್ಮ್ ಯೋಜನೆಯಡಿ ನೋಂದಾಯಿತ SHG ಸದಸ್ಯರಿಂದ **"ಮರು ಆಸಕ್ತಿ ಅಭಿವ್ಯಕ್ತಿ"** ಯನ್ನು ಆಹ್ವಾನಿಸಿದ್ದು, Day-NULM ನಲ್ಲಿ ನೋಂದಾಯಿತಗೊಂಡಿರುವ ಆಸಕ್ತ SHG ಸದಸ್ಯರು ತಮ್ಮ ಆಸಕ್ತಿಯ ಅಭಿವ್ಯಕ್ತಿಯನ್ನು www.tnarasipuratown.mrc.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುವ ನಿಗಧಿತ ನಮೂನೆಯಲ್ಲಿ ದಿನಾಂಕ: **24.10.2025 ರ ಸಂಜೆ 5:00 ಗಂಟೆಯೊಳಗಾಗಿ** ಇ–ಮೇಲ್ ವಿಳಾಸ: **ka.tnarasipura.tmc@gmail.com** ಕಳುಹಿಸತಕ್ಕದ್ದು. ಆಸಕ್ತ SHG ಸದಸ್ಯರು 1) ಗುರುತಿನ ಪುರಾವೆ 2) ವಿಳಾಸ ಪುರಾವೆ 3) ಎಂಪನೇಲ್ಡ್ ದಾಖಲೆಗಳು 4) ಶೈಕ್ಷಣಿಕ ಅರ್ಹತೆ 5) Day-NULM ದೃಢೀಕರಣ ಪತ್ರದ ನಮೂನೆಯನ್ನು ಸಹ ಲಗತ್ತಿಸಬೇಕು. ಆಯ್ಕೆಯಾದ ಅಭ್ಯರ್ಥಿಗಳನ್ನು ಅವರ ಕೌಶಲ್ಯವನ್ನು ನಿರ್ಣಯಿಸಲು ವಿಷಯದ ಬಗ್ಗೆ ತಿಳುವಳಿಕೆಗಾಗಿ ಸಂದರ್ಶನಕ್ಕೆ ಕರೆಯಲಾಗುವುದು.

ವಿವರ: ಕಮ್ಯುನಿಟಿ ಮೊಬಿಲೈಜರ್ (COMMUNITY MOBILIZER) ಅರ್ಜಿ ಸಲ್ಲಿಸಲು

ಅರ್ಜಿ ಸಲ್ಲಿಸಲು ಅರ್ಹತೆ: 1) ಎಸ್.ಎಸ್.ಎಲ್.ಸಿ / 10ನೇ ತರಗತಿಯಲ್ಲಿ ಪಾಸ್ ಆಗಿರಬೇಕು. ಕಡ್ಡಾಯವಾಗಿ ಕನ್ನಡ ಮಾಧ್ಯಮದಲ್ಲಿ ಕೆಲಸ ನಿರ್ವಹಿಸಿರುವವರಿಗೆ ಆದ್ಯತೆ 2) ತಿ.ನರಸೀಪುರ ಪುರಸಭೆಯ Day-NULM ಶಾಖೆಯಲ್ಲಿ ನೋಂದಾಯಿತ ಸ್ವ–ಸಹಾಯ ಗುಂಪಿನ ಸದಸ್ಯರು (SHG).

ಸಹಿ/– **ಸಮುದಾಯ ಸಂಘಟನಾಧಿಕಾರಿ**, ಪುರಸಭೆ, ಟಿ.ನರಸೀಪುರ
ಸಹಿ/– **ಮುಖ್ಯಾಧಿಕಾರಿ**, ಪುರಸಭೆ, ಟಿ.ನರಸೀಪುರ
DIPR/MYS/1115/SA/2025-26

ಮೈಸೂರು ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಮೆಗಾ ಡೇರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು–570 028
ದೂರವಾಣಿ:0821–2474475, ಫ್ಯಾಕ್ಸ್.: 0821–2474476, e-mali: purmymul@gmail.com

IFT No: KMF/2025-26/SE4038 Date: 18.10.2025

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರ ಹಾಲು ಒಕ್ಕೂಟದ ನಂದಿನಿ ಹಾಲು ಹಾಗೂ ಮೊಸರಿನ ವಿವಿಧ ಮಾದರಿಯ ಪ್ಯಾಕೆಟ್‌ಗಳನ್ನು ಚೈನೈನಲ್ಲಿ ಕೋ ಪ್ಯಾಕಿಂಗ್ ಮಾಡುವ ಬಗ್ಗೆ (ಕೋ ಪ್ಯಾಕಿಂಗ್ ಶುಲ್ಕದಲ್ಲಿ ಸಂಸ್ಕರಣಾ, ಪಾಶ್ಚರೈಜಿಂಗ್, ಸ್ಟ್ಯಾಂಡರ್ಡೈಜಿಂಗ್, ಕ್ಲಾರಿಫೈಯಿಂಗ್, ಹೋಮೋಜಿನೈಜೇಷನ್, ಪ್ಯಾಕಿಂಗ್, ರೆಫ್ರಿಜರೇಷನ್ ಹಾಗೂ ರವಾನೆ ಒಳಗೊಂಡಂತೆ) ಸೇವೆ ಪಡೆಯುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ **https://kppp.karnataka.gov.in** ವೆಬ್‌ಸೈಟ್‌ನಲ್ಲಿ **ದಿನಾಂಕ: 15.11.2025, ಸಂಜೆ 05.00 ಗಂಟೆಯೊಳಗೆ** ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ವ್ಯವಸ್ಥಾಪಕರನ್ನು (6366430821, 9482231739) ಸಂಪರ್ಕಿಸಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ನೈಋತ್ಯ ರೈಲ್ವೆ

ಓಪನ್ ಟೆಂಡರು ಸೂಚನೆ ಸಂ. 30/MYS/2025, ದಿನಾಂಕ: 13.10.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
1	ಮೈಸೂರು (ಎಂವೈಎಸ್), ಶ್ರೀರಂಗಪಟ್ಟಣ (ಎಸ್), ಕಡೂರು (ಡಿಆರ್‌ಯು), ಶಿವಮೊಗ್ಗ ಟೌನ್ (ಎಸ್‌ಎಂಇಟಿ), ದಾವಣಗೆರೆ (ಡಿವಿಜಿ), ಹಾವೇರಿ (ಹೆಚ್‌ವಿಆರ್) ಮತ್ತು ಚಿಕ್ಕಜಾಜೂರು ಜಂ. (ಜೆಆರ್‌ಯು) (7 ನಿಲ್ದಾಣಗಳು) ಇಲ್ಲಿ ಹೆಚ್ಚುವರಿ ನೀರಿನ ಪೀಠಗಳ ವ್ಯವಸ್ಥೆ (ಸಾಮಾನ್ಯ ಕೋಚ್ ಪ್ರಯಾಣಿಕರ ಉಪಯೋಗಕ್ಕಾಗಿ ಕನಿಷ್ಠ 1 ರಂತೆ ಪ್ರತೀ ಪ್ಲಾಟ್‌ಫಾರ್ಮ್‌ಗಳ ಕೊನೆಯಲ್ಲಿ) **ಉಪ ಕಾಮಗಾರಿ–1: ವರಿಷ್ಠ ವಿಭಾಗೀಯ ಇಂಜಿನಿಯರ್/ಉತ್ತರ ವ್ಯಾಪ್ತಿ:** ದಾವಣಗೆರೆ (ಡಿವಿಜಿ), ಹಾವೇರಿ (ಹೆಚ್‌ವಿಆರ್) ಮತ್ತು ಚಿಕ್ಕಜಾಜೂರು ಜಂ. (ಜೆಆರ್‌ಯು) (3 ನಿಲ್ದಾಣಗಳು) ಇಲ್ಲಿ ಹೆಚ್ಚುವರಿ ನೀರಿನ ಪೀಠಗಳ ವ್ಯವಸ್ಥೆ. **ಉಪ ಕಾಮಗಾರಿ–2: ವರಿಷ್ಠ ವಿಭಾಗೀಯ ಇಂಜಿನಿಯರ್/ಪಶ್ಚಿಮ ವ್ಯಾಪ್ತಿ:** ಮೈಸೂರು ಮತ್ತು ಶ್ರೀರಂಗಪಟ್ಟಣದಲ್ಲಿ (2 ನಿಲ್ದಾಣಗಳು) ಹೆಚ್ಚುವರಿ ನೀರಿನ ಪೀಠಗಳ ವ್ಯವಸ್ಥೆ. **ಉಪ ಕಾಮಗಾರಿ–3: ವಿಭಾಗೀಯ ಇಂಜಿನಿಯರ್/ಕೇಂದ್ರ ವ್ಯಾಪ್ತಿ:** ಶಿವಮೊಗ್ಗ ಟೌನ್ (ಎಸ್‌ಎಂಇಟಿ) ಮತ್ತು ಕಡೂರು (ಡಿಆರ್‌ಯು) ನಿಲ್ದಾಣಗಳಲ್ಲಿ ಹೆಚ್ಚುವರಿ ನೀರಿನ ಪೀಠಗಳ ವ್ಯವಸ್ಥೆ.	ರೂ. 66,77,344/-
2	**ಸಹಾಯಕ ವಿಭಾಗೀಯ ಇಂಜಿನಿಯರ್/ಚಿತ್ರದುರ್ಗ ವಿಭಾಗ:** ಕಿಮೀ. 239/250–260 ರಲ್ಲಿ ಆರ್‌ಯುಬಿ ನಂ. 104ಬಿ ಮತ್ತು ಕಿಮೀ. 240/300–400 ರಲ್ಲಿ ಎಲ್‌ಸಿ 146 ರಲ್ಲಿ ಟ್ರ್ಯಾಕ್‌ಗಳ ಸಮಾನಾಂತರ ವಾಗಿ ರಸ್ತೆಯ ನಿರ್ಮಾಣ ಕಾರ್ಯ.	ರೂ. 2,28,50,467/-
3	**ಬೀರೂರು – ಚಿಕ್ಕಜಾಜೂರು – ಕರಜಗಿ ವಿಭಾಗ:** ಮೈನ್ ಲೈನ್ ಮತ್ತು ಲೂಪ್ ಲೈನಿನಲ್ಲಿ ಟಿಡಬ್ಲ್ಯೂಎಸ್‌ನ ರಿನ್ಯೂವಲ್ ಕಾಮಗಾರಿ – 161 ಸೆಟ್‌ಗಳು (12 ರಲ್ಲಿ 1 – 118 ಸೆಟ್‌ಗಳು & 8.5 ರಲ್ಲಿ 1 – 43 ಸೆಟ್‌ಗಳು).	ರೂ. 1,41,06,189/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06.11.2025, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ/ಮೈಸೂರು
PUB/561/AAMO/PRB/SWR/2025-26
ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRAILWAYHQ | sw_railways